10 February 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಇರುವುದರೊಂದಿಗೆ ಹೊಂದಿಕೊಂಡರೆ ಪ್ರತಿ ಕ್ಷಣವೂ ಸ್ವರ್ಗ! ಇಲ್ಲದಿರುವುದಕ್ಕೆ ಹಂಬಲಿಸಿದರೆ ಪ್ರತಿ ಹೆಜ್ಜೆಯೂ ನರಕ!

-ಸ್ನೇಹಾ ಆನಂದ್

info.varthaman@gmail.com


ಗಜಗೌರಿ ಮೂರ್ತಿಗಳ ವಿಸರ್ಜನೆ: ಸಾಮೂಹಿಕ ವ್ರತಾಚರಣೆ ಸಂಪನ್ನ — ಪುಟ ಸಂ. 2


ಕೌಶಲ್ಯಾ ತರಬೇತಿ ಅಗತ್ಯ: ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ — ಪುಟ ಸಂ. 3


ಮಾದಿಗ ಸಮಾಜಕ್ಕೆ ರಾಜಕೀಯ ಉತ್ತಮ ಸ್ಥಾನ ನೀಡುವೆ: ಕೃಷ್ಣನಾಯಕ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 96 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ವಿದ್ಯುತ್ ಕಂಪನಿ ನಷ್ಟ: ಸರ್ಕಾರದ ಪಾತ್ರ ಇಲ್ಲ

**ಎಚ್.ಆರ್.ಶ್ರೀಶಾ** ಬೆಂಗಳೂರು

ರಾಜ್ಯದ 5 ವಿದ್ಯುತ್ ವಿತರಣ ಕಂಪನಿಗಳು ಸಾಲ ಮತ್ತು ನಷ್ಟದಲ್ಲಿ ಮುಳುಗಿ ಹೋಗಿವೆ. ಇದಕ್ಕೆ ರಾಜ್ಯ ಸರ್ಕಾರ ಕಾರಣವಲ್ಲ. ಸಕಾಲಕ್ಕೆ ಎಲ್ಲ ಕಂಪನಿಗಳಿಗೆ ಸಹಾಯಧನ ಹೋಗಿದೆ. ಆದರೂ ನಷ್ಟದಲ್ಲಿರಲು ವಿದ್ಯುತ್ ಇಲಾಖೆ ಆಡಳಿತವೇ ಕಾರಣ.

ಜನವರಿಯಲ್ಲಿ ವಿದ್ಯುತ್ ಹಣಕಾಸು ನಿಗಮ (ಪಿಎಫ್‌ಸಿ) ವಾರ್ಷಿಕ ವರದಿ ಬಿಡುಗಡೆ ಮಾಡಿದ್ದು ಹಿಂದೆ ಲಾಭದಲ್ಲಿದ್ದ ಮಂಗಳೂರು ಕೂಡ ಈಗ ನಷ್ಟದ ಪಟ್ಟಿಗೆ ಸೇರ್ಪಡೆಗೊಂಡಿದೆ.

ಅತಿ ಹೆಚ್ಚು ನಷ್ಟ ಇರುವುದು ಬೆಸ್ಕಾಂ. ಕಳೆದ ವರ್ಷ ಇದರ ನಷ್ಟ 5476 ಕೋಟಿ ರೂ. ಒಟ್ಟು ಕ್ರೋಡೀಕೃತ ನಷ್ಟ 13819 ಕೋಟಿ ರೂ. ಒಟ್ಟು ಇದುವರೆಗೆ ಮಾಡಿರುವ ಸಾಲ 22,611 ಕೋಟಿ



ರೂ. ವಿದ್ಯುತ್ ವಿತರಣಾ ನಷ್ಟ ಶೇ.8.52. ಪ್ರತಿ ಯೂನಿಟ್ ಖರೀದಿ ದರ 9.04 ರೂ. ಮಾರಾಟದಿಂದ ಬರುವ ದರ 7.82 ರೂ. ಅಂದರೆ ಪ್ರತಿ ಯೂನಿಟ್ ಅಂತರ 1.21 ರೂ. ಇದನ್ನು ಸರಿತೂಗಿಸುವುದೇ ಕಷ್ಟ.

ರಾಜ್ಯದಲ್ಲಿ ಈಗ ಪ್ರತಿದಿನ 17,056 ಮೆಗಾ ವ್ಯಾಟ್ ಬಳಕೆಯಾದರೆ ಅದರಲ್ಲಿ ಬೆಸ್ಕಾಂ 7444 ಮೆಗಾವ್ಯಾಟ್ ಪಾಲು ಹೊಂದಿದೆ. ಬೆಸ್ಕಾಂ ಹಾದಿಯಲ್ಲೇ ಇತರ ಕಂಪನಿಗಳು ಸಾಗಿವೆ.

ಮೈಸೂರು ಕಂಪನಿಯ ಈ ವರ್ಷದ ನಷ್ಟ 1030 ಕೋಟಿರೂ. ಇದುವರೆಗೆ ಇರುವ ನಷ್ಟ 4064 ಕೋಟಿ ರೂ. ಒಟ್ಟು ಸಾಲ 5410 ಕೋಟಿರೂ. ವಿದ್ಯುತ್ ವಿತರಣ ನಷ್ಟ ಶೇ. 8.76. ಗುಲ್ಬರ್ಗ ಕಂಪನಿಯ ನಷ್ಟ 766 ಕೋಟಿ, ಒಟ್ಟು ನಷ್ಟ 5661 ಕೋಟಿ, ಸಾಲ 6147 ಕೋಟಿರೂ. ಹುಬ್ಬಳ್ಳಿ ಕಂಪನಿಯ ವಿದ್ಯುತ್ ವಿತರಣ ನಷ್ಟ ಶೇ.12.14, ಒಟ್ಟು ನಷ್ಟ 11398 ಕೋಟಿ ರೂ. ಸಾಲ 12251 ಕೋಟಿರೂ.

ರಾಜ್ಯದ ವಿದ್ಯುತ್ ಕಂಪನಿಗಳ ನಷ್ಟವನ್ನು ನೋಡಿದರೆ ಇವುಗಳು ಬೆಳವಣಿಗೆ ಕಾಣುವುದು ಕಷ್ಟ. ಸರ್ಕಾರಿ ಕಂಪನಿಗಳಾಗಿರುವುದರಿಂದ ಉಳಿದಿವೆ. ಇವುಗಳ ಆರ್ಥಿಕ ಪುನರ್ ರಚನೆಗೆ ಹಲವು ಪ್ರಯತ್ನಗಳು ನಡೆದಿವೆ.

ಗುರುಚರಣ್ ವರದಿಯಿಂದ ಹಿಡಿದು ಹಲವು ಮಾರ್ಗಸೂಚಿಗಳಿದ್ದರೂ ಆರ್ಥಿಕ ಚೇತರಿಕೆ ಕಂಡು ಬಂದಿಲ್ಲ. ವಿದ್ಯುತ್ ಖರೀದಿ ದರವೇ ಅಧಿಕವಾಗಿದೆ. ಪ್ರತಿ ವರ್ಷ ಏಪ್ರಿಲ್‌ನಲ್ಲಿ ಕೆಇಆರ್‌ಸಿ ಹೊಸ ದರವನ್ನು ನೀಡುತ್ತ ಬಂದಿದ್ದರೂ ಕಂಪನಿಗಳು ಉತ್ತಮಗೊಳ್ಳುವ ಲಕ್ಷಣ ಕಂಡು ಬಂದಿಲ್ಲ. ಕೇಂದ್ರ ಸರ್ಕಾರ ಈಗ ಹೊಸ ಕಾಯ್ದೆಯನ್ನು ಹಲವಾರು ತಿದ್ದುಪಡಿಗಳೊಂದಿಗೆ ತರಲು ಸಿದ್ಧತೆ ಮಾಡಿಕೊಂಡಿದೆ. ಸರ್ಕಾರದ ನೆರವು ನಿಂತಲ್ಲಿ ಈ ಕಂಪನಿಗಳು ವಿಲೇವಾರಿಗೆ ಬರುವುದಂತೂ ನಿಶ್ಚಿತ. ಆಗ ಖಾಸಗೀಕರಣ ಅನಿವಾರ್ಯವಾಗಲಿದೆ.

ಖಾಸಗಿ ಕಂಪನಿಗಳು ದೇಶದ ಇತರ ಭಾಗಗಳಲ್ಲಿ ಉತ್ತಮವಾಗಿ ನಡೆಯುತ್ತಿವೆ.

## ಕೇಂದ್ರ ಬಜೆಟ್‌ನಲ್ಲಿ ಆಡಂಬರವಿಲ್ಲ: ಜನ ಹಿತಕ್ಕೆ ಒತ್ತು: ಡಾ.ಅಶ್ವಥ್ ನಾರಾಯಣ

**ಮಂಡ್ಯ:** ಕೆಲವು ತತ್ವಗಳನ್ನು ಆಧರಿಸಿ ಕೇಂದ್ರದ ಬಜೆಟ್ ಮಂಡಿಸಲಾಗಿದೆ. ಅಸ್ಪಷ್ಟತೆಗಿಂತ ಕ್ರಿಯೆ, ಆಡಂಭರಕ್ಕಿಂತ ಸುಧಾರಣೆಗೆ, ಜನಪ್ರಿಯತೆಗಿಂತ ಜನ ಹಿತಕ್ಕೆ ಒತ್ತು ನೀಡಲಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್‌ನಾರಾಯಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ತವ್ಯ ಭವನದಲ್ಲಿ ಮಂಡನೆಯಾದ ಮೊದಲ ಬಜೆಟ್ ಇದಾಗಿದೆ. ಆತ್ಮ ನಿರ್ಭರ ಭಾರತ್, ಸ್ವಾವಲಂಭಿ ವಿಕಸಿತ ಭಾರತವನ್ನು ಗುರಿಯಾಗಿಸಿಕೊಂಡು, ಉದ್ಯೋಗ ಸೃಷ್ಟಿ, ಕೃಷಿ ಉತ್ಪಾದನೆ, ನಾಗ



ರೀಕರು ಕೊಳ್ಳುವ ಉದ್ದೇಶದಿಂದ ಬಜೆಟ್ ತಯಾರಿಸಲಾಗಿದೆ. ಆರ್ಥಿಕ ಕ್ಷೇತ್ರಕ್ಕೆ ವೇಗ ನೀಡುವುದು, ನಾಗರೀಕ ಆಶಯಗಳನ್ನು ಈಡೇರಿಸುವುದು, ಆಡಳಿತದಲ್ಲಿ ತಂತ್ರಜ್ಞಾನ ಅಳವಡಿಸುವ 3 ಭಾಗವಾಗಿ

ಪುಟ 2ಕ್ಕೆ

## ಭಾರತ-ಅಮೆರಿಕ ಒಪ್ಪಂದ ರೈತರಿಗೆ ಘಾತಕ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು:ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮುಂದೆ ಸಂಪೂರ್ಣ ಶರಣಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾ ಮಯ್ಯ ತೀವ್ರ ಆಕ್ರೋಶ ವ್ಯಕ್ತಪ ಡಿಸಿದ್ದಾರೆ. ಈ ಒಪ್ಪಂದ ಮುಂದಿನ ದಿನಗಳಲ್ಲಿ 140 ಕೋಟಿ ಭಾರತೀಯರಿಗೆ, ಅದರಲ್ಲೂ ವಿಶೇಷವಾಗಿ ದೇಶದ 72 ಕೋಟಿ ರೈತರ ಪಾಲಿಗೆ ಮರಣಶಾಸನ ವಾಗಲಿದೆ ಎಂದು ಅವರು ಎಚ್ಚರಿಸಿದ್ದಾರೆ. ಭಾರತ-ಅಮೆರಿಕ ವ್ಯಾಪಾರ ಒಪ್ಪಂದ

ಪುಟ 4ಕ್ಕೆ



**ರೈತ ಸಮುದಾಯದ ಮೇಲೆ ಭಾರೀ ಹೊಡೆತ**

ಅಮೆರಿಕದ ರೈತರು ಭಾರೀ ಸಬ್ಸಿಡಿ ಪಡೆಯುತ್ತಿರುವುದರಿಂದ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗುತ್ತದೆ. ಆಮದು ಸುಂಕ ರದ್ದು ಮಾಡಿದರೆ, ಅಮೆರಿಕದ ಅಗ್ಗದ ಆಹಾರಧಾನ್ಯ, ಹಣ್ಣು, ತರಕಾರಿ ಹಾಗೂ ಡೇರಿ ಉತ್ಪನ್ನಗಳು ಭಾರತೀಯ ಮಾರುಕಟ್ಟೆ ಪ್ರವೇಶಿಸಲಿದೆ. ಇದರಿಂದ ದೇಶದ ರೈತರು ದಿವಾಳಿಯಾಗುವ ಸ್ಥಿತಿ ನಿರ್ಮಾಣವಾಗಿ, ಆತ್ಮಹತ್ಯೆಯಂತಹ

ಪುಟ 4ಕ್ಕೆ

## ಗೆಳತಿಗೆ ಗುಂಡಿಟ್ಟು ಕೊಂದ ವಿದ್ಯಾರ್ಥಿ

**ಪಂಜಾಬ್:** ಪಂಜಾಬ್‌ನ ತರಣ್ ತರಣ್ ಜಿಲ್ಲೆಯಲ್ಲಿ ಕಾನೂನು ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಯೊಬ್ಬ ಸೋಮವಾರ ತನ್ನ ಗೆಳತಿ, ಕ್ಲಾಸ್ ಮೇಟ್‌ಗೆ ಗುಂಡಿಕ್ಕಿ ಹತ್ಯೆ ಮಾಡಿ, ಬಳಿಕ ಅದೇ ಗನ್ ನಿಂದ ತಾನೂ ಗುಂಡು ಹಾರಿಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಿನ್ಸ್ ರಾಜ್ ಎಂಬ ಕಾನೂನು ವಿದ್ಯಾರ್ಥಿ ತರಗತಿಯಲ್ಲೇ ಸಂದೀಪ್ ಕೌರ್ ಮೇಲೆ ಗುಂಡು ಹಾರಿಸಿದ್ದಾನೆ. ಬಳಿಕ ತಾನೂ ಗುಂಡು ಹಾರಿಸಿಕೊಂಡಿದ್ದಾನೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಜಗ್ಬೀರ್ ಸಿಂಗ್ ತಿಳಿಸಿದ್ದಾರೆ.

ಪ್ರಿನ್ಸ್ ರಾಜ್, ಕೌರ್


ಪುಟ 2ಕ್ಕೆ

## ಭಾರತದ ವಿರುದ್ಧ ಪಂದ್ಯ ಬಹಿಷ್ಕಾರದ ನಿರ್ಧಾರದಲ್ಲಿ ಪಾಕ್ ಏಕಾಂಗಿ

**ಇಸ್ಲಾಮಾಬಾದ್:** ಫೆಬ್ರುವರಿ 15 ರಂದು ಕೊಲಂಬೊದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ 2026ರ ಗುಂಪು ಪಂದ್ಯದಲ್ಲಿ ಭಾರತದ ವಿರುದ್ಧ ಆಡದಿರಲು ನಿರ್ಧರಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ನಿಲುವಿನಿಂದ ಯೂ-ಟರ್ನ್ ತೆಗೆದುಕೊಳ್ಳಲಿದೆ ಎಂದು ಹೇಳಲಾಗಿದೆ.

ಇದೀಗ ಪಿಸಿಬಿ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಅಧಿಕಾರಿಗಳನ್ನು ಒಳಗೊಂಡಂತೆ ಲಾಹೋರ್‌ನಲ್ಲಿ ನಡೆದ ನಿರ್ಣಾಯಕ ಸಭೆಯ ನಂತರ ಈ ಪಂದ್ಯವು ಮತ್ತೆ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

## ಚಿನ್ನಸ್ವಾಮಿಯಲ್ಲಿ ಐಪಿಎಲ್ ಪಂದ್ಯ: ಫೆ.12 ರಂದು ತೀರ್ಮಾನ



**ಬೆಂಗಳೂರು:** ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡುವ ಬಗ್ಗೆ ಚರ್ಚಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಪ್ರತಿನಿಧಿಗಳು ಸೋಮವಾರ ಗೃಹ

ಪುಟ 4ಕ್ಕೆ

## ರಾಜ್ಯದ ಐದು ಜಿಲ್ಲೆಗಳಲ್ಲಿ ಕ್ಯಾನ್ಸರ್ ಪ್ರಕರಣ ಹೆಚ್ಚು: ದ.ಕ ಜಿಲ್ಲೆ ಪ್ರಥಮ

**ಮಂಗಳೂರು:** ದಕ್ಷಿಣ ಕನ್ನಡ, ಹಾಸನ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಅತಿ ಹೆಚ್ಚು ಕ್ಯಾನ್ಸರ್ ಪತ್ತೆ ದಾಖಲಿಸಿವೆ,

ದೊಡ್ಡ ಪ್ರಮಾಣದ ತಪಾಸಣೆಯ ಹೊರತಾಗಿಯೂ ಅನೇಕ ಜಿಲ್ಲೆಗಳಲ್ಲಿ

ಪುಟ 4ಕ್ಕೆ

**ಮುಡಾ ಹಗರಣಕ್ಕೆ ಮತ್ತೊಂದು ಟ್ವಿಸ್ಟ್ । ಭಾರೀ ವ್ಯವಹಾರದ ಆರೋಪ**

# 'ಬಿ ರಿಪೋರ್ಟ್' 4.35 ಕೋ. ಲಂಚ

**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ರಾಜಕೀಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿರುವ ಪ್ರಕರಣಕ್ಕೆ ಮತ್ತೊಂದು ಗಂಭೀರ ತಿರುವು ದೊರೆತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ವಿರುದ್ಧ ದೂರು ದಾಖಲಿಸಿದ್ದ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಹಿನ್ನಡೆ ಎದುರಿಸಿದ್ದರೂ ತಮ್ಮ ಹೋರಾಟವನ್ನು ನಿಲ್ಲಿಸಿಲ್ಲ. ಇದೀಗ ಅವರು, ಮುಡಾ ಹಗರಣದ ತನಿಖೆಯಲ್ಲಿ ಲೋಕಾಯುಕ್ತ ಬಿ ರಿಪೋರ್ಟ್ ಸಲ್ಲಿಕೆಯ ಹಿಂದೆ ಭಾರೀ ಲಂಚದ ವ್ಯವಹಾರ ನಡೆದಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸ್ನೇಹಮಯಿ ಕೃಷ್ಣ, ಮುಡಾ ಹಗರಣದ ತನಿಖೆ ನಡೆಸಿದ ಲೋಕಾಯುಕ್ತ ಅಧಿಕಾರಿಗಳಿಗೆ ಬಿ ರಿಪೋರ್ಟ್ ಸಲ್ಲಿಸುವ ಸಲುವಾಗಿ ಒಟ್ಟು 4 ಕೋಟಿ 35 ಲಕ್ಷ ರೂಪಾಯಿ ಲಂಚ ನೀಡಲಾಗಿದೆ ಎಂದು ಆರೋಪಿಸಿದರು. ಈ ಲಂಚದ ಪರಿಣಾಮವಾಗಿಯೇ ಪ್ರಕರಣದಲ್ಲಿ ಆರೋಪಿಗಳನ್ನು ಕ್ಲೀನ್ ಚಿಟ್ ನೀಡುವಂತೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಈ ಬೆಳವಣಿಗೆ ರಾಜ್ಯದ ಆಡಳಿತ ವ್ಯವಸ್ಥೆ ಹಾಗೂ ತನಿಖಾ ಸಂಸ್ಥೆಗಳ ಮೇಲಿನ ವಿಶ್ವಾಸದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಮುಡಾ ಪ್ರಕರಣದಲ್ಲಿ ಆಯುಕ್ತರಿಂದ ಲೋಕಾಯುಕ್ತ ಅಧಿಕಾರಿಗಳಿಗೆ ಲಂಚ ನೀಡಿರುವ ಬಗ್ಗೆ ವಿವರಗಳಿರುವ ಪತ್ರಗಳು ತಮ್ಮ ಬಳಿ ಇವೆ ಎಂದು ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದರು. ಆ ಪತ್ರಗಳ ಜೊತೆಗೆ ಹಲವಾರು ದಾಖಲೆಗಳು ಮತ್ತು ಸಾಕ್ಷ್ಯಗಳೂ ತಮ್ಮ ಬಳಿ ಇವೆ ಎಂದು ಅವರು ಹೇಳಿದ್ದಾರೆ. ಈ ದಾಖಲೆಗಳು ಲಂಚದ




### ಮುಡಾ ಆಯುಕ್ತರ ಮೇಲೂ ನೇರ ಆರೋಪ

ಈ ಪ್ರಕರಣದಲ್ಲಿ ಮುಡಾ ಆಯುಕ್ತರಾದ ಡಿ.ಬಿ. ನಟೇಶ್ ಅವರ ಮೇಲೂ ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದರು. ಆಯುಕ್ತರು ಲಂಚ ಸ್ವೀಕರಿಸಿರುವ ಕಾರಣದಿಂದಲೇ ಬಿ ರಿಪೋರ್ಟ್ ಸಲ್ಲಿಕೆಯಾಗಿದೆ ಎಂದು ಅವರು ಹೇಳಿದರು. ಇದರಿಂದ ಆರೋಪಿಗಳನ್ನು ರಕ್ಷಿಸುವ ಪ್ರಯತ್ನ ನಡೆದಿದೆ ಎಂಬ ಅನುಮಾನ ಗಟ್ಟಿಯಾಗುತ್ತದೆ ಎಂದು ಅವರು ಕಿಡಿಕಾರಿದರು. ಈ ರೀತಿಯ ನಡೆ ಸಾರ್ವಜನಿಕ ಸಂಸ್ಥೆಗಳ ವಿಶ್ವಾಸಾರ್ಹತೆಗೆ ಭಾರೀ ಧಕ್ಕೆ ತಂದಿದೆ ಎಂದು ಅವರು ಅಭಿಪ್ರಾಯಪಟ್ಟರು.



### 'ಬಿ ರಿಪೋರ್ಟ್ ಹಿಂದೆ ದೊಡ್ಡ ಸಂಚು'

ಬಿ ರಿಪೋರ್ಟ್ ಸಲ್ಲಿಕೆಯ ಹಿಂದೆ ಕೇವಲ ಆಡಳಿತಾತ್ಮಕ ಕಾರಣಗಳಲ್ಲ, ದೊಡ್ಡ ಸಂಚು ಅಡಗಿದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದರು. ಪ್ರಭಾವಿ ವ್ಯಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ತನಿಖೆಯನ್ನು ದುರ್ಬಲಗೊಳಿಸಲಾಗಿದೆ ಎಂಬ ಶಂಕೆ ವ್ಯಕ್ತಪಡಿಸಿದರು. ಮುಡಾ ಹಗರಣದಲ್ಲಿ ನಡೆದಿರುವ ಭೂ ಹಂಚಿಕೆ, ನಿಯಮ ಉಲ್ಲಂಘನೆ ಹಾಗೂ ಅಧಿಕಾರ ದುರುಪಯೋಗದ ಆರೋಪಗಳು ಗಂಭೀರವಾಗಿದ್ದು, ಅವುಗಳನ್ನು ಲಘುವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.



ವ್ಯವಹಾರ ನಡೆದಿರುವುದನ್ನು ದೃಢಪಡಿಸುವಂತಿವೆ ಎಂದು ಅವರು ಹೇಳಿದ್ದು, ಅವುಗಳನ್ನು ಸೂಕ್ತ ವೇದಿಕೆಯಲ್ಲಿ ಸಲ್ಲಿಸಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ.


ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ತಾತ್ಕಾಲಿಕ ಹಿನ್ನಡೆ ಎದುರಾದರೂ, ನ್ಯಾಯಕ್ಕಾಗಿ ಹೋರಾಟ ಮುಂದುವರಿಸುವುದಾಗಿ ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದರು. ನ್ಯಾಯಾಲಯದ ತೀರ್ಪು ಅಂತಿಮ ಸತ್ಯವಲ್ಲ; ತನಿಖೆಯಲ್ಲಿನ ಲೋಪಗಳು ಮತ್ತು ಲಂಚದ ಆರೋಪಗಳು

ಪುಟ 2ಕ್ಕೆ

## ಇಂದು ಡಿಸಿಎಂ ಡಿಕೆಶಿ ದೆಹಲಿ ಪ್ರಯಾಣ ರಾಜಕೀಯ ವಲಯದಲ್ಲಿ ಕುತೂಹಲ

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಬೆಳಿಗ್ಗೆ 9.50ರ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಅವರ ಈ ದೆಹಲಿ ಭೇಟಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಗಂಭೀರ ಚರ್ಚೆಗಳು ನಡೆಯುತ್ತಿರುವ ಸಮಯದಲ್ಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ದೆಹಲಿ ಪ್ರವಾಸ ಮಹತ್ವ ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಅವರ ಪ್ರಯಾಣದ ಉದ್ದೇಶದ ಬಗ್ಗೆ ರಾಜಕೀಯ ವಲಯದಲ್ಲಿ ಹಲವು ಊಹಾಪೋಹಗಳು ಕೇಳಿಬರುತ್ತಿವೆ. ಪಕ್ಷದ ಮೂಲಗಳ ಪ್ರಕಾರ, ಅಸ್ಸಾಂ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಿಯಾಂಕಾ ಗಾಂಧಿ ಅವರು ಪಕ್ಷದ ಪ್ರಮುಖ ನಾಯಕರೊಂದಿಗೆ ಪೂರ್ವಭಾವಿ ಸಭೆ ಕರೆದಿದ್ದು, ಈ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳುತ್ತಿದ್ದಾರೆ. ನಾಳೆ ಸಂಜೆ ನಡೆಯಲಿರುವ ಈ ಸಭೆಯಲ್ಲಿ ಚುನಾವಣಾ ತಂತ್ರ, ಸಂಘಟನೆ ಬಲವರ್ಧನೆ ಹಾಗೂ ಪ್ರಚಾರ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ. ಇದರ ಜೊತೆಗೆ, ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್‌ನ ಪ್ರಮುಖ ನಾಯಕರೊಂದಿಗೆ ಡಿ.ಕೆ. ಶಿವಕುಮಾರ್ ಪ್ರತ್ಯೇಕವಾಗಿ ಮಾತುಕತೆ ನಡೆಸುವ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ ರಾಜ್ಯದ ರಾಜಕೀ ೦ ು ' ು ಸ್ಥಿತಿ ,

ಪುಟ 2ಕ್ಕೆ



## ಕೆನಡಾದಲ್ಲಿ ನೆಲಮಂಗಲ ಮೂಲದ ಯುವಕನಿಗೆ ಗುಂಡಿಟ್ಟು ಹತ್ಯೆ

**ಬೆಂಗಳೂರು:** ಕೆನಡಾದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಕರ್ನಾಟಕ ಮೂಲದ ಯುವಕನೊಬ್ಬ ಬಲಿಯಾದ ಘಟನೆ ನಡೆದಿದೆ.

ಮೃತರನ್ನು ಬೆಂಗಳೂರಿನ ನೆಲಮಂಗಲ ಮೂಲದ ಚಂದನ್ ಕುಮಾರ್(37) ಎಂದು ಗುರುತಿಸಲಾಗಿದೆ.




ಚಂದನ್ ಕುಮಾರ್ ಬೆಂಗಳೂರಿನ ನೆಲಮಂಗಲ ಮೂಲದ ತ್ಯಾಮಗೊಂಡ್ಲುವಿನ ನಿವಾಸಿ. ಕಳೆದ 6 ವರ್ಷಗಳಿಂದ ಚಂದನ್ ಕುಮಾರ್ ಕೆನಡಾದಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ 9 ಗಂಟೆಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಚಂದನ್ ಕುಮಾರ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ದ್ದಾರೆ. ಹಲವು ಗುಂಡುಗಳು ಚಂದನ್ ದೇಹವನ್ನು ಹೊಕ್ಕಿವೆ. ಘಟನಾ ಸ್ಥಳದಲ್ಲೇ ಚಂದನ್ ಸಾವನ್ನಪ್ಪಿದ್ದಾರೆ. ಚಂದನ್ ಬ್ರಾಂಪ್ಟನ್‌ನಲ್ಲಿರುವ

ಪುಟ 2ಕ್ಕೆ

## ಮಳವಳ್ಳಿಯಲ್ಲಿ ಕೊಲೆ ಬೆದರಿಕೆ ಆರೋಪ: ತಾಯಿ-ಮಗಳು ಆತ್ಮಹತ್ಯೆ

**ಮಳವಳ್ಳಿ:** ಪಕ್ಕದ ಮನೆಯ ವ್ಯಕ್ತಿಯಿಂದ ನಿರಂತರ ಕೊಲೆ ಬೆದರಿಕೆ ಎದುರಿಸಿದ್ದ ಹಿನ್ನೆಲೆಯಲ್ಲಿ ತಾಯಿ ಮತ್ತು ಮಗಳು ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ದುರ್ಘಟನೆ ಮಳವಳ್ಳಿ ತಾಲೂಕಿನ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಮೃತರನ್ನು ದಳವಾಯಿ ಕೋಡಿಹಳ್ಳಿ ಗ್ರಾಮದ ಎಂ. ಮಹೇಶ್ ಅವರ ಪತ್ನಿ ಶಕುಂತಲಾ (37) ಹಾಗೂ ಪುತ್ರಿ ಪ್ರಿಯಾ (18) ಎಂದು ಗುರುತಿಸಲಾಗಿದೆ.



ಪೊಲೀಸರಿಗೆ ನೀಡಿದ ದೂರಿನಲ್ಲಿ ಮಹೇಶ್ ಅವರು, ಪಕ್ಕದ ಮನೆಯ ನಿವಾಸಿ ಮುತ್ತುರಾಜು (35) ಎಂಬ ವಿವಾಹಿತ ವ್ಯಕ್ತಿ ತಮ್ಮ ಮಗಳಾದ ಪ್ರಿಯಾಳನ್ನು ಮದುವೆಯಾಗುವುದಾಗಿ ಹೇಳಿ ಪರಿಚಯ ಮಾಡಿಕೊಂಡಿದ್ದಾನೆ ಎಂದು ತಿಳಿಸಿದ್ದಾರೆ. ಮುತ್ತುರಾಜು ಈಗಾಗಲೇ ಮದುವೆಯಾಗಿದ್ದು, ಹೆಂಡತಿ ಮತ್ತು ಮಕ್ಕಳು ಇದ್ದ ಕಾರಣ ಈ ಸಂಬಂಧಕ್ಕೆ ಶಕುಂತಲಾ ಮತ್ತು ಮಹೇಶ್ ವಿರೋಧ ವ್ಯಕ್ತಪಡಿಸಿ, ಮದುವೆ

ಪುಟ 2ಕ್ಕೆ

## ಗಂಟಲು ನೋವು-ಉಸಿರಾಟದ ತೊಂದರೆ: ಶರದ್ ಪವಾರ್ ಆಸ್ಪತ್ರೆಗೆ ದಾಖಲು

ಪುಣೆ: ಮಾಜಿ ಕೇಂದ್ರ ಸಚಿವ ಹಾಗೂ ಎನ್‌ಸಿಪಿ(ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರಿಗೆ ಸೋಮವಾರ ಗಂಟಲು ನೋವು ಮತ್ತು ತೀವ್ರ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದು, ತಕ್ಷಣ ಅವರನ್ನು ಬಾರಾಮತಿಯಲ್ಲಿರುವ ಅವರ ನಿವಾಸದಿಂದ ಪುಣೆ ಆಸ್ಪತ್ರೆಗೆ ದಾಖಲಿಸಲಾಗಿದೆ.



85 ವರ್ಷದ ಹಿರಿಯ ನಾಯಕ ಶರದ್ ಪವಾರ್ ಅವರು ಗಂಟಲು ಸೋಂಕಿನಿಂದ ಬಳಲುತ್ತಿರುವ ಕಾರಣ ಅವರನ್ನು ರೂಬಿ ಹಾಲ್ ಚಿಕಿತ್ಸಾಲಯಕ್ಕೆ ಕರೆದೊಯ್ಯಲಾಗುತ್ತಿದೆ ಎಂದು ಆಪ್ತ ಸಹಾಯಕರೊಬ್ಬರು ತಿಳಿಸಿದ್ದಾರೆ.


ರೂಬಿ ಹಾಲ್ ಕ್ಲಿನಿಕ್‌ನ ಮುಖ್ಯ ಹೃದ್ರೋಗ ತಜ್ಞ ಮತ್ತು ವ್ಯವಸ್ಥಾಪಕ ಟ್ರಸ್ಟಿ ಡಾ. ಪರ್ವೇಜ್ ಗ್ರಾಂಟ್ ಅವರು ಶರದ್ ಪವಾರ್ ಆಸ್ಪತ್ರೆಗೆ ದಾಖಲಾಗಿರುವುದನ್ನು ಖಚಿತಪಡಿಸಿದ್ದಾರೆ.

# ನಿರುದ್ಯೋಗ ಬವಣೆ ನೀಗಲು ಉದ್ಯಮಗಳಿಗೆ ಒತ್ತು

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪ್ರಕಟ । ಮಂಡ್ಯ ಜಿಲ್ಲೆಯ ಜನರಿಗೆ ಶುದ್ಧ ಕುಡಿಯುವ ನೀರು: ಮನೋಜ್ ಕುಮಾರ್ ಮೀನಾ**

**ಮಂಡ್ಯ:** ವರ್ಷ ಜಿಲ್ಲೆಗೆ ಅಗತ್ಯವಿರುವ ನೀರಿನ ಪ್ರಮಾಣ ಲಭ್ಯವಿದೆ ಹಾಗಾಗಿ ಬೇಸಿಗೆ ಕಾಲದಲ್ಲಿ ಬೆಳೆ ಮತ್ತು ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದಿಲ್ಲ ಎಂದು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ. ಮನೋಜ್ ಕುಮಾರ್ ಮೀನಾ ಸೋಮವಾರ ಹೇಳಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲಾ ಮಟ್ಟದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ತಹಶೀಲ್ದಾರ್‌ಗಳು ವಿಶೇಷ ಮುತುವರ್ಜಿ ಕೆರೆಗಳನ್ನು ತೆರವುಗೊಳಿಸಿ ನಂತರ ಸದರಿ ಕೆರೆಯ ಜಾಗದಲ್ಲಿ ಒತ್ತು



ವರಿಯಾಗದಂತೆ ತಂತಿ ಬೇಲಿ ಮತ್ತು ಸೂಚನಾ ಫಲಕ ಅಳವಡಿಸಿ. ಜಿಲ್ಲೆಯಲ್ಲಿ ಇದುವರೆಗೆ 232 ಗ್ರಾಮ ಪಂಚಾಯಿತಿಗಳಲ್ಲಿ ಪೌತಿ ಖಾತಾ ಆಂದೋಲನ ನಡೆಸಿ 67659 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಹೇಳಿದರು.

ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ 21 ಕಂತುಗಳಲ್ಲಿ ರೂ 892.08 ಕೋಟಿ ಹಣವನ್ನು ನೀಡಲಾಗಿದೆ. ಕೃಷಿ ಇಲಾಖೆ ಕೃಷಿ ವಿಶ್ವವಿದ್ಯಾನಿಲಯ ಹಾಗೂ ಸಂಬಂಧಪಟ್ಟ ಇಲಾಖೆಗಳ ಜೊತೆ ಕೈಜೋಡಿಸಿ ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಕೃಷಿಯಿಂದ ಉದ್ಯಮ ಹೇಗೆ ಪ್ರಾರಂಭಿಸಬೇಕು ಎಂಬುದರ ಕುರಿತಾಗಿ ತರಬೇತಿ ನೀಡಿ ಅರ್ಹ ಸೌಲಭ್ಯ ಕಲ್ಪಿಸಿ ಜಿಲ್ಲೆಯ ಯುವಕರನ್ನು ನಿರುದ್ಯೋಗದಿಂದ ಮುಕ್ತಗೊಳಿಸಿ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜನರಿಗೆ ಜಲ ಜೀವನ್ ಮಿಷನ್ ಮೂಲಕ ಶುದ್ಧ ಕುಡಿಯುವ

ಪುಟ 2ಕ್ಕೆ

### ಅಕ್ಕನ ಬುತ್ತಿ: ಹೊಸ ಯೋಜನೆ ಆರಂಭ

ಅಕ್ಕನ ಬುತ್ತಿ ಎಂಬ ಹೊಸ ಯೋಜನೆಯನ್ನು ಎನ್ ಆರ್ ಎಲ್ ಎಂ ಯೋಜನೆಯಡಿ ರೂಪಿಸಲಾಗಿದ್ದು ಉತ್ತಮ ಗುಣಮಟ್ಟದ ಆಹಾರವನ್ನು ಕ್ಯಾಟರಿಂಗ್ ಮೂಲಕ ಸರ್ಕಾರಿ ಕಚೇರಿಗಳು ಮತ್ತು ಇನ್ನಿತರ ಸಂಸ್ಥೆಗಳಿಗೆ ಶುಚಿತ್ವದ ಆಹಾರವನ್ನು ನೀಡಲಾಗುತ್ತಿದೆ.

### ಅಕ್ಕನ ಮೀನು ಊಟ

ಎನ್‌ಆರ್ ಎಲ್ ಎಂ ಯೋಜನೆಯಡಿ ಜಿಲ್ಲೆಯ ಸ್ವ ಸಹಾಯ ಗುಂಪಿನ ಅರ್ಹ ಮಹಿಳಾ ಫಲಾನುಭವಿಗಳು ತಮ್ಮ "ಅಕ್ಕನ ಮೀನು ಊಟ" ಉದ್ಯಮದಲ್ಲಿ ಉತ್ತಮ ಲಾಭವನ್ನು ಪಡೆಯುತ್ತಿದ್ದಾರೆ. ಮೀನುಗಾರಿಕೆ ಇಲಾಖೆಯಿಂದ ಮೀನು ಸಾಕಾಣಿಕೆ ಮತ್ತು ಮೀನುಗಳಿಗೆ ನೀಡಬೇಕಾದ ಆಹಾರ ಕ್ರಮಗಳ ಕುರಿತು ತಿಳಿಸಿ ಮೀನುಗಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

## ಸೌಜನ್ಯ ಕೊಲೆ ಪ್ರಕರಣ: ಕಳಪೆ, ದೋಷಪೂರಿತ ತನಿಖೆ ನಡೆಸಿರುವವರ ವಿರುದ್ಧ ಕ್ರಮ

**ಬೆಂಗಳೂರು:** ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣದಲ್ಲಿ ಕಳಪೆ ಮತ್ತು ದೋಷಪೂರಿತ ತನಿಖೆ ನಡೆಸಿ ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಇದನ್ನು ಖುಲಾಸೆ ಸಮಿತಿಯ ಮುಂದೆ ಇಡಬೇಕು ಎಂದು ವಿಶೇಷ ಸಿಬಿಐ ನ್ಯಾಯಾಲಯ ನೀಡಿದ್ದ ತೀರ್ಪಿನಲ್ಲಿನ ನಿರ್ದೇಶನ ಅನುಷ್ಠಾನಗೊಳಿಸುವಂತೆ ಕೋರಿದ್ದ ಅರ್ಜಿಯ ಸಂಬಂಧ ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು



**ಸಿಬಿಐಗೆ ಹೈಕೋರ್ಟ್ ನೋಟಿಸ್**

ಸಿಬಿಐ ಚೆನ್ನೈನ ವಿಶೇಷ ತನಿಖಾ ದಳಕ್ಕೆ ಕರ್ನಾಟಕ ಹೈಕೋರ್ಟ್ ಈಚೆಗೆ ನೋಟಿಸ್ ಜಾರಿಗೊಳಿಸಿದೆ. ಸಿಬಿಐ ವಿಶೇಷ ನ್ಯಾಯಾಲಯವು 16. 06.2023ರಂದು ಹೊರಡಿಸಿದ್ದ ತೀರ್ಪಿನಲ್ಲಿನ ನಿರ್ದೇಶನ ಜಾರಿಗೊಳಿಸಲು ಸಿಬಿಐಗೆ ನಿರ್ದೇಶಿಸುವಂತೆ ಕೋರಿ ಸೌಜನ್ಯ ತಾಯಿ ಕುಸುಮವತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಬಿ ಎಂ ಶ್ಯಾಮ್ ಪ್ರಸಾದ್ ಅವರ ಏಕಸದಸ್ಯ ಪೀಠ ನಡೆಸಿತು. ಅರ್ಜಿದಾರರ ಪರ ವಕೀಲ ಎಂ ಆರ್ ಬಾಲಕೃಷ್ಣ ಅವರು "ಸಿಬಿಐ ಅಡಿ ಖುಲಾಸೆ ಸಮಿತಿ ಇದೆಯೇ ಎಂಬುದಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ" ಎಂದರು. ವಾದ ಆಲಿಸಿದ ಪೀಠವು ಗೃಹ ಇಲಾಖೆ, ಪೊಲೀಸ್ ಮಹಾನಿರ್ದೇಶಕ, ಅಪರಾಧ ಮತ್ತು ತಾಂತ್ರಿಕ ಸೇವೆಗಳ ಹೆಚ್ಚುವರಿ ಪೊಲೀಸ್

ಪುಟ 4ಕ್ಕೆ

## ಮೊದಲ ಪುಟದಿಂದ

### ಉದ್ಯಮಗಳಿಗೆ ಒತ್ತು

ನೀರನ್ನು ಮನೆ ಮನೆಗೆ ತಲುಪಿಸಿ. ಪ್ರತಿ ವಾರ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ಎಂದು ಸೂಚಿಸಿದರು. ನಲ್ ಜಲ್ ಯೋಜನೆಯಡಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗಿದೆ. ಸದರಿ ಹೆಣ್ಣು ಮಕ್ಕಳಿಗೆ ಕೇವಲ ತರಬೇತಿ ನೀಡಿದರೆ ಸಾಲದು ತರಬೇತಿಗೆ ತಕ್ಕ ಹಾಗೆ ಕೆಲಸಗಳನ್ನು ನೀಡಿ ಆಗ ಮಾತ್ರ ತರಬೇತಿ ನೀಡಿದ್ದಕ್ಕೆ ಅರ್ಥ ದೊರೆಯುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾತನಾಡಿ ಆಸ್ತಿ ತೆರಿಗೆಯ ವಸೂಲಾತಿಯಲ್ಲಿ ಈಗಾಗಲೇ ಶೇ 89 ರಷ್ಟು ತೆರಿಗೆಯನ್ನು ಸಂಗ್ರಹಿಸಲಾಗಿದೆ. ಉಳಿದ ತೆರಿಗೆಯನ್ನು ಮಾರ್ಚ್ ಮಾಹೆಯ ಅಂತ್ಯದೊಳಗೆ ಸಂಗ್ರಹಿಸಲಾಗುತ್ತದೆ. ಹಸಿ ಕಸ ಮತ್ತು ಒಣ ಕಸ ಗಳನ್ನು ಪ್ರಾಥಮಿಕ ಹಂತದಲ್ಲಿಯೇ ಬೇರ್ಪಡಿಸುವಂತೆ ಈಗಾಗಲೇ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದು ಹೇಳಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ ಆರ್ ನಂದಿನಿ ಅವರು ಮಾತನಾಡಿ ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಈಗಾಗಲೇ ಶೇ 79 ರಷ್ಟು ಕಾಮಗಾರಿ ಮುಗಿದಿದ್ದು ಅನುದಾನದ ಕೊರತೆಯಿಂದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯಾವಾಗಿರುವುದಿಲ್ಲ ಎಂದು ಹೇಳಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ಉಪವಿಭಾಗಾಧಿಕಾರಿಗಳಾದ ಶಿವಮೂರ್ತಿ ಮತ್ತು ಶ್ರೀನಿವಾಸ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಜನ ಹಿತಕ್ಕೆ ಒತ್ತು: ಡಾ.ಅಶ್ವಥ್

16ನೇ ಆಯೋಗದ ಹಂಚಿಕೆಯಂತೆ ಶೇ.0.50ರಷ್ಟು ಹಂಚಿಕೆಯಲ್ಲಿ ಹೆಚ್ಚಳವಾಗಿರುವುದು ಸಂತಸದ ವಿಷಯ ಎಂದು ಹೇಳಿದರು. ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಸಚ್ಚಿದಾನಂದ, ಅಶೋಕ್ ಜಯರಾಂ, ಡಾ.ಸಿದ್ದರಾಮಯ್ಯ, ಎಸ್.ಪಿ.ಸ್ವಾಮಿ ಇತರರಿದ್ದರು.

### ತಾಯಿ–ಮಗಳು ಆತ್ಮಹತ್ಯೆ

ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದ್ದರು. ನಂತರ ಪ್ರಿಯಾಳಿಗೆ ಬೇರೆ ವರನೊಂದಿಗೆ ಮದುವೆ ನಿಶ್ಚಯಿಸಲು ಕುಟುಂಬ ಸಿದ್ಧತೆ ನಡೆಸುತ್ತಿರುವ ವಿಷಯ ತಿಳಿದ ಮುತ್ತುರಾಜು, ಶಕುಂತಲಾ ಅವರಿಗೆ ಕರೆ ಮಾಡಿ, ಪ್ರಿಯಾಳನ್ನು ಬೇರೆ ಕಡೆಗೆ ಮದುವೆ ಮಾಡಿದರೆ ನಿಮ್ಮನ್ನು ಕೊಲೆ ಮಾಡುವೆ ಎಂದು ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ.

### ಯುವಕನಿಗೆ ಗುಂಡಿಟ್ಟು ಹತ್ಯೆ

ಶಿರಡಿ ಸಾಯಿಬಾಬಾ ದೇವಾಲಯದ ಸಕ್ರಿಯ ಸದಸ್ಯರಾಗಿದ್ದರು. ವರದಿಯಲ್ಲಿ ಲಭ್ಯವಾಗಿರುವ ದೃಶ್ಯಾವಳಿಗಳ ಪ್ರಕಾರ, ಚಂದನ್ ಅವರ ಕಾರಿನ ಮುಂಭಾಗದ ಗಾಜಿನ ಮೇಲೆ ಗುಂಡು ಹೊಕ್ಕಿರುವ ಗುರುತುಗಳು ಸ್ಪಷ್ಟವಾಗಿ ಕಂಡುಬಂದಿವೆ. ಇದು ಪಾಯಿಂಟ್ ಬ್ಲಾಂಕ್ ರೇಂಜ್‌ನಲ್ಲಿ ಅಥವಾ ಸಮೀಪದಿಂದ ನಡೆಸಲಾದ ದಾಳಿ ಇರಬಹುದೆಂದು ಶಂಕಿಸಲಾಗಿದೆ.

### ಇಂದು ಡಿಸಿಎಂ ಡಿ.ಕೆ.ಶಿ ದೆಹಲಿಗೆ ಪ್ರಯಾಣ: ರಾಜಕೀಯ ವಲಯದಲ್ಲಿ ಕುತೂಹಲ

ಸರ್ಕಾರದ ಕಾರ್ಯಕ್ಷಮತೆ ಹಾಗೂ ಮುಂದಿನ ದಿನಗಳ ತಂತ್ರಗಾರಿಕೆಗಳ ಕುರಿತು ಚರ್ಚೆ ನಡೆಯುವ ನಿರೀಕ್ಷೆ ಇದೆ. ಒಟ್ಟಾರೆ, ಅಸ್ಸಾಂ ಚುನಾವಣೆ ಪೂರ್ವಭಾವಿ ಸಭೆಯೇ ಡಿಸಿಎಂ ದೆಹಲಿ ಪ್ರಯಾಣದ ಅಧಿಕೃತ ಕಾರಣವಾಗಿದ್ದರೂ, ಕರ್ನಾಟಕ ರಾಜಕೀಯದ ಹಿನ್ನೆಲೆಯಲ್ಲಿಯೇ ಈ ಭೇಟಿಗೆ ಹೆಚ್ಚಿನ ಮಹತ್ವ ದೊರಕಿದ್ದು, ಮುಂದಿನ ಬೆಳವಣಿಗೆಗಳತ್ತ ರಾಜಕೀಯ ವಲಯ ಕಣ್ಣಿಟ್ಟಿದೆ.

### ವಿದ್ಯುತ್ ಕಂಪನಿ ನಷ್ಟ: ಸರ್ಕಾರದ ಪಾತ್ರ ಇಲ್ಲ

ಸೂರತ್ ನಗರದಲ್ಲಿ ಟಾರೆಂಟ್ ಖಾಸಗಿ ಕಂಪನಿ ಉತ್ತಮವಾಗಿ ನಡೆಯುತ್ತಿದ್ದು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಇದರ ಒಟ್ಟು ಲಾಭ 686 ಕೋಟಿ ರೂ. ಸಾಲ 208ಕೋಟಿ ರೂ. ಮಾತ್ರ. ಇದರ ವಿದ್ಯುತ್ ನಷ್ಟ ಶೇ.2.81 ಮಾತ್ರ. ಕರ್ನಾಟಕದ ಕಂಪನಿಗಳೂ ಈ ಕಂಪನಿಯ ರೀತಿಯಲ್ಲಿ ಜನರಿಗೆ ಸೇವೆ ಸಲ್ಲಿಸಿದರೆ ಜನರ ಮೇಲಿನ ಹೊರೆಯನ್ನು ಕಡಿಮೆ ಮಾಡಬಹುದು. ಪಿಎಫ್‌ಸಿ ಸಂಸ್ಥೆ ಒಟ್ಟು 72 ವಿತರಣ ಕಂಪನಿಗಳ ಆರ್ಥಿಕ ಪರಿಸ್ಥಿತಿ ಅಧ್ಯಯನ ಮಾಡಿ ವರದಿ ನೀಡಿದೆ. ಇದರಲ್ಲಿ ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ಸೇರಿವೆ. ಅಲ್ಲದೆ ವಿದ್ಯುತ್ ಇಲಾಖೆಗಳ ಮೌಲ್ಯಮಾಪನವೂ ನಡೆದಿದೆ. ಈ ವರದಿ ನಮ್ಮ ವಿದ್ಯುತ್ ಕಂಪನಿಗಳ ಅಧಿಕಾರಿಗಳ ಕಣ್ತೆರಸಬೇಕಿದೆ.

### ಗೆಳತಿಗೆ ಗುಂಡಿಟ್ಟು ಕೊಂದ ವಿದ್ಯಾರ್ಥಿ

ಅವರನ್ನು ಏಕೆ ಕೊಂದರು ಎಂಬುದು ಇನ್ನೂ ತಿಳಿದುಬಂದಿಲ್ಲ. ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಭಾರತದ ವಿರುದ್ಧ ಪಂದ್ಯ ಬಹಿಷ್ಕಾರದ ನಿರ್ಧಾರದಲ್ಲಿ ಪಾಕ್ ಏಕಾಂಗಿ

ಈ ನಡುವೆ, 'ಭಾರತದ ಪಂದ್ಯವನ್ನು ಬಹಿಷ್ಕರಿಸುವ' ನಿಲುವಿನ ಕುರಿತು ಎಮಿರೇಟ್ಸ್ ಕ್ರಿಕೆಟ್ ಮಂಡಳಿಯಿಂದ ಇಮೇಲ್ ಬಂದಿದ್ದು, ಪಾಕಿಸ್ತಾನ ಮತ್ತಷ್ಟು ಒತ್ತಡಕ್ಕೆ ಒಳಗಾಗಿದೆ ಎಂದು ತಿಳಿದುಬಂದಿದೆ.

ಟಿ20 ವಿಶ್ವಕಪ್ ಗ್ರೂಪ್ ಪಂದ್ಯದಲ್ಲಿ ಭಾರತದೊಂದಿಗೆ ಆಡದಿರುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಕೋರಿ ಎಮಿರೇಟ್ಸ್ ಮಂಡಳಿಯು ಪಿಸಿಬಿಗೆ ಇಮೇಲ್ ಕಳುಹಿಸಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಟಿ20 ವಿಶ್ವಕಪ್‌ನ ಗ್ರೂಪ್ ಎನಲ್ಲಿನ ಭಾರತ ಮತ್ತು ಪಾಕಿಸ್ತಾನ ನಡುವಿನ ಘರ್ಷಣೆ ನಡೆಯದಿದ್ದರೆ ವ್ಯಾಪಕ ಆರ್ಥಿಕ ಪರಿಣಾಮ ಬೀರುತ್ತದೆ ಎಂದು ಎಮಿರೇಟ್ಸ್ ಮಂಡಳಿಯು ಎಚ್ಚರಿಕೆ ನೀಡಿದೆ.

### ಮುಡಾ: ಮತ್ತೊಂದು ಟ್ವಿಸ್ಟ್

ಹೊರಬಂದರೆ ಪ್ರಕರಣಕ್ಕೆ ಹೊಸ ದಿಕ್ಕು ಸಿಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಮತ್ತು ಸಮಗ್ರ ತನಿಖೆ ನಡೆಯಬೇಕು ಎಂದು ಸ್ನೇಹಮಯಿ ಕೃಷ್ಣ ಒತ್ತಾಯಿಸಿದರು. ಲೋಕಾಯುಕ್ತ ತನಿಖೆಯ ಮೇಲೆಯೇ ಅನುಮಾನಗಳು ಮೂಡಿರುವ ಹಿನ್ನೆಲೆಯಲ್ಲಿ, ಬೇರೆ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂಬ ಬೇಡಿಕೆಯನ್ನೂ ಅವರು ಮುಂದಿಟ್ಟರು. ಲಂಚದ ಆರೋಪ, ದಾಖಲೆಗಳು ಮತ್ತು ಸಾಕ್ಷ್ಯಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಸತ್ಯಾಂಶ ಹೊರತರಬೇಕು ಎಂದು ಅವರು ಆಗ್ರಹಿಸಿದರು. ಈ ಆರೋಪಗಳು ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನ ಮೂಡಿಸಿವೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವೆ ವಾಗ್ವಾದ ಹೆಚ್ಚಾಗುವ ಸಾಧ್ಯತೆ ಇದೆ. ಮುಡಾ ಹಗರಣ ಈಗ ಕೇವಲ ಭೂ ಹಂಚಿಕೆ ಪ್ರಕರಣವಲ್ಲ, ತನಿಖಾ ವ್ಯವಸ್ಥೆಯ ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯ ಪ್ರಶ್ನೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ಪ್ರಕರಣ ರಾಜ್ಯ ರಾಜಕಾರಣದಲ್ಲಿ ಪ್ರಮುಖ ಚರ್ಚಾ ವಿಷಯವಾಗಲಿದೆ. ಒಟ್ಟಾರೆ, ಸ್ನೇಹಮಯಿ ಕೃಷ್ಣ ಅವರ ಹೊಸ ಆರೋಪಗಳು ಮುಡಾ ಹಗರಣಕ್ಕೆ ಹೊಸ ಆಯಾಮ ನೀಡಿದ್ದು, ಬಿ ರಿಪೋರ್ಟ್ ಸಲ್ಲಿಕೆಯ ಹಿಂದಿನ ಸತ್ಯಾಂಶಗಳೇನು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಕುತೂಹಲ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ತನಿಖಾ ಸಂಸ್ಥೆಗಳು ಮತ್ತು ಸರ್ಕಾರ ಈ ಆರೋಪಗಳಿಗೆ ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದರತ್ತ ಎಲ್ಲರ ಗಮನ ನೆಟ್ಟಿದೆ.

# ಮುದ್ರಣ ಮಾಧ್ಯಮ ಇಂದಿಗೂ ವಿಶ್ವಾಸಾರ್ಹ

ಮೈಸೂರು: ಮುದ್ರಣ ಮಾಧ್ಯಮ ಇಂದಿಗೂ ವಿಶ್ವಾಸಾರ್ಹತೆ ಉಳಿಸಿಕೊಂಡಿದೆ' ಎಂದು ಕೊಳ್ಳೇಗಾಲದ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾಲಯ ನೌಕರರ ವೇದಿಕ ಹಾಗೂ ನವ ವಿಶ್ವಮಾನವ ಟ್ರಸ್ಟ್ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ರಾಜಶೇಖರ ಕೋಟಿ ಸ್ಮರಣಾರ್ಥ 9ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ, ಪ್ರಶಸ್ತಿ ಪ್ರದಾನ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿ, ಮಾಧ್ಯಮ ಬಹಳ ಸೂಕ್ಷ್ಮವಾದ ಕ್ಷೇತ್ರ. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಕೆಲಸವನ್ನು ಪರ್ತಕರ್ತರು ಮಾಡುತ್ತಿದ್ದಾರೆ. ಆದರೆ, ವಿದ್ಯುನ್ಮಾನ ಮಾಧ್ಯಮದಲ್ಲಿ ಅದು ಈಗ ಕಡಿಮೆಯಾಗಿದೆ' ಎಂದು ವಿಷಾದಿಸಿದರು.

ಮೌಲ್ಯ ಆಧಾರಿತ ರಾಜಕಾರಣ ಮಾಡಬೇಕು ಎನ್ನುವಂತೆ, ಮೌಲ್ಯ ಆಧಾರಿತ ಪತ್ರಕರ್ತರು ಈಗಲೂ ಇದ್ದಾರೆ. ಗುಣಮಟ್ಟದ ಸುದ್ದಿ ತಲುಪಿಸುವಲ್ಲಿ ಪ್ರಮುಖ ಪಾತ್ರವನ್ನು ಮಾಧ್ಯಮ ಮಾಡುತ್ತಿದೆ. ಮೌಲ್ಯ ಆಧಾರಿತವಾದ ಕೆಲಸವನ್ನು ಪ್ರತಿಯೊಬ್ಬರೂ ಮಾಡಿದರೆ ಉತ್ತಮ ಸಮಾಜ ನಿರ್ಮಾಣವಾಗಲಿದೆ ಎಂದರು.



ಪತ್ರಕರ್ತೆ ರಶ್ಮಿ ಕೋಟಿ ಮಾತನಾಡಿ,ಈಗ ಪ್ರತಿ ಕ್ಷೇತ್ರವೂ ತಲ್ಲಣಕ್ಕೆ ಒಳಗಾಗಿದೆ. ಟಿಆರ್‌ಪಿಯ ಭರದಲ್ಲಿ ವಿದ್ಯುನ್ಮಾನ ಮಾಧ್ಯಮ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಮುದ್ರಣ ಮಾಧ್ಯಮ ಮಾತ್ರ ವಿಶ್ವಾಸಾರ್ಹತೆ ಉಳಿಸಿಕೊಂಡಿದೆ. ನೈಜ ಪತ್ರಕರ್ತರ ಪಾತ್ರ ಹಿಂದೆಂದಿಗಿಂತಲೂ ಈಗ ಮುಖ್ಯವಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಬರುವುದೆಲ್ಲವನ್ನೂ ಫಾರ್ವರ್ಡ್ ಮಾಡದಿರುವ ಜವಾಬ್ದಾರಿಯನ್ನು ಜನರು ನಿರ್ವಹಿಸಬೇಕು. ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಬೇಕು ಎಂದರು.

ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್. ಉಮೇಶ್, ಮಾನಸಗಂಗೋ ತ್ರಿಯ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಎಚ್.ಪಿ. ಜ್ಯೋತಿ, ಮೈಸೂರು ವಿ.ವಿ. ಗಾಂಧಿ ಭವನದ ನಿವೃತ್ತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ, ಮೈಸೂರು ವಿ.ವಿ. ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ, ಡಿಸಿಪಿ ಕೆ.ಎಸ್. ಸುಂದರ್‌ರಾಜ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಡಾ.ಅಮ್ಮ ರಾಮಚಂದ್ರ ಗೀತಗಾಯನ ನಡೆಸಿಕೊಟ್ಟರು. ಡಾ. ಅಂಬಳೆ ಮಹದೇವಸ್ವಾಮಿ ಕವನ ವಾಚಿಸಿದರು. ವೇದಿಕೆಯ ಅಧ್ಯಕ್ಷ ಆರ್.ವಾಸುದೇವ, ಉಪಾ ಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಖಜಾಂಚಿ ನವೀನ್ ಕುಮಾರ್, ಯೋಗೇಶ್.ಎನ್. ಮಧುಸೂದನ್, ಚಿದಾನಂದ, ರವಿ ಮೊದಲಾದವರು ಪಾಲ್ಗೊಂಡಿದ್ದರು.

#### ಪತ್ರಕರ್ತರಿಗೆ ಪ್ರಶಸ್ತಿ

ಪತ್ರಕರ್ತರಾದ ಜೆ.ಶಿವಣ್ಣ, ಎಂ.ಮಹೇಶ್ ಭಗೀರಥ, ಡಿ.ಎನ್. ಮಹೇಂದ್ರ ದೇವನೂರು, ನಾಗರಾಜ್ ನವೀಮನೆ, ಎಂ.ಎನ್. ಬಸವ ರಾಜ್, ಸಿ. ದಿನೇಶ್, ವಿನೋದ್ ಮಹದೇವ ಪುರ, ಸತೀಶ್ ದೇಪುರ, ಮೋಹನ್ ಕಾಯಕ ಹಾಗೂ ಚಿರಂಜೀವಿ ಹುಲ್ಲಹಳ್ಳಿ ಅವರಿಗೆ 'ರಾಜಶೇಖರ ಕೋಟಿ ಸ್ಮರಣಾರ್ಥ ಅತ್ಯುನ್ನತ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

# ಗಜಗೌರಿ ಮೂರ್ತಿಗಳ ವಿಸರ್ಜನೆಯೊಂದಿಗೆ ಸಾಮೂಹಿಕ ವ್ರತಾಚರಣೆ ಸಂಪನ್ನ

## ರಾಮನಗರದಲ್ಲಿ ಆನೆಯ ಮೇಲೆ ಗಜಗೌರಿ ಮೂರ್ತಿ ಮೆರವಣಿಗೆ

ರಾಮನಗರ: ಗಜಗೌರಿ ವ್ರತಾಚರಣೆ ಬಹು ಅಪರೂಪದ ಧಾರ್ಮಿಕ ಆಚರಣೆ. ಮೂರು ದಶಕಗಳ ನಂತರ ರಾಮನಗರದಲ್ಲಿ ಆಯೋಜನೆ ಯಾಗಿದ್ದ ಗಜಗೌರಿ ಸಾಮೂಹಿಕ ವ್ರತಾಚರಣೆಯು, ಉದ್ಯಾಪನ ಹೋಮ, ಗಜಗೌರಿ ಮೂರ್ತಿಗಳ ವಿಸರ್ಜನೆಯೊಂದಿಗೆ ಸಂಪನ್ನವಾಯಿತು.

ನಗರದ ಅಗ್ರಹಾರದ ವ್ಯಾಸರಾಯರ ರಸ್ತೆಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯ ನಿರ್ಮಾಣದ ಭೂಮಿಯಲ್ಲಿ ಶ್ರೀ ಸೀತಾರಾಮ ಸೇವಾ ಟ್ರಸ್ಟ್ ನೇತೃತ್ವದಲ್ಲಿ ಶ್ರೀ ಬಲಮುರಿ ಗಣಪತಿ ದೇವಸ್ಥಾನ ಟ್ರಸ್ಟ್, ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಗಳ ಸಹಯೋಗದಲ್ಲಿ ಗಜಗೌರಿ ವ್ರತಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಫೆ.4 ಮತ್ತು 5ರಂದು ಭೂ ಸಂಬಂಧಿತ ನಿಮಿತ್ತ ವಾಸ್ತು ಹೋಮ, ರಕ್ಷೋಘ್ನ ಹೋಮ, ದಿಗ್ಬಲಿ ಪೂಜೆ, ರುದ್ರ ಹೋಮ, ಮೃತ್ಯುಂಜಯ ಹೋಮ ಮತ್ತು ಆಶ್ಲೇಷ ಬಲಿ ಪೂಜೆಗಳು ನೆರವೇರಿದವು. ಫೆ.6ರ ಶುಕ್ರವಾರ ಗಜಗೌರಿ ಸಾಮೂಹಿಕ ವ್ರತಾಚರಣೆಯಲ್ಲಿ 108 ದಂಪತಿಗಳು ಪೂಜಾ ಕಾರ್ಯನೆರವೇರಿಸಿದರು. ಶನಿವಾರ ಪೌರಕಾರ್ಮಿಕರಿಗೆ ಮಡಲಕ್ಕಿ ತುಂಬಲಾಯಿತು, 10 ಸಾವಿರ ಗಾಯತ್ರಿ ಮಂತ್ರ ಜಪ ಕಾರ್ಯ ನೆರವೇರಿತು. ಅಖಂಡ ಭಜನೆ, ದುರ್ಗಾ ದೀಪ ನಮಸ್ಕಾರ ಮುಂತಾದ ಧಾರ್ಮಿಕ ಕಾರ್ಯಗಳಲ್ಲಿ ನಾಗರೀಕರು ಭಾಗವಹಿಸಿದ್ದರು.

ಭಾನುವಾರ ಬೆಳಿಗ್ಗೆ ಶ್ರೀ ಕ್ಷೇತ್ರ ಶಿವಗಂಗೆಯಿಂದ ತರಿಸಲಾಗಿದ್ದ ಶಿವ–ಪಾರ್ವತಿಯ ಮೂರ್ತಿಗಳಿಗೆ ಗಿರಿಜಾ ಕಲ್ಯಾಣ ನೆರವೇರಿತು. ಇದೇ ದಿನ ತಲಕಾಡು ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನದ ಶ್ರೀ ಗೋವಿಂದಾನಂದ ಸರಸ್ವತಿ ಮಹಾ ಸ್ವಾಮೀಜಿಯವರು ಆಗಮಿಸಿ ಆಶೀರ್ವಚನ ನೀಡಿದರು.



### ಭವ್ಯವಾದ ಮೆರವಣಿಗೆ, ಶಾಸಕರಿಂದ ಚಾಲನೆ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠಕ್ಕೆ ಸೇರಿದ ಲಕ್ಷ್ಮಿ ಎಂಬ ಆನೆಯ ಮೇಲೆ ಗಜಗೌರಿಯ ಭವ್ಯವಾದ ಮೂರ್ತಿಯನ್ನು ಇರಿಸಲಾಗಿತ್ತು. ಅಗ್ರಹಾರ ಮುಖ್ಯ ರಸೆ, ಎಂ.ಜಿ.ರಸ್ತೆ, ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಸಾಗಿತು. ಇದರೊಟ್ಟಿಗೆ ಅಲಂಕೃತ ಬೆಳ್ಳಿ ರಥಗಳಲ್ಲಿ ಗಜಗೌರಿ ಮೂರ್ತಿಗಳ ಮೆರವಣಿಗೆಯೂ ನಡೆಯಿತು. ಮೆರವಣಿಗೆಗೆ ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಪುಷ್ಪಗಳನ್ನು ಸಮರ್ಪಿಸುವುದರ ಮೂಲಕ ಚಾಲನೆ ನೀಡಿದರು. ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರ ಅಧ್ಯಕ್ಷತೆಯಲ್ಲಿ ಮೆರವಣಿಗೆ ಏರ್ಪಾಟಾಗಿತ್ತು. ಶ್ರೀ ರೇವಣಸಿದ್ದೇಶ್ವರ ಮಠದ ಶ್ರೀ ರಾಜಶೇಖರ ಸ್ವಾಮೀಜಿ ಭಾಗವಹಿಸಿದ್ದರು. ಅರಣ್ಯ ಇಲಾಖೆಯ ಸಿಬ್ಬಂದಿ ಸಹ ಆನೆಯ ಜೊತೆಗಿದ್ದರು.

### ಗಣ್ಯರ ಭೇಟಿ

ಗೌಜಗೌರಿ ವ್ರತಾಚರಣೆಯ ವೇಳೆ ಆಸ್ತಿಕ ನಾಗರೀಕರು ಭಾರಿ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಭಕ್ತಿ ಸಮರ್ಪಿಸಿಕೊಂಡರು. ಶೃಂಗೇರಿ ಮಠದ ಋತ್ವಿಕರ ಮಾರ್ಗದರ್ಶನದಲ್ಲಿ ಗಜಗೌರಿ ಪೂಜಾ ಕೈಂಕರ್ಯ ನೆರವೇರಿತು. ಮಂಗಳೂರಿನಿಂದ ಆಗಮಿಸಿದ್ದ ಋತ್ವಿಕರು ವಾಸ್ತು ಹೋಮ, ಆಶ್ಲೇಷ ಬಳಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು.

ಗಜಗೌರಿ ವ್ರತಾಚರಣೆಗೆ ಬೆಂಗಳೂರಿ ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್, ಬಿಜೆಪಿ ರಾಜ್ಯ ವಕ್ತಾರ ಮೋಹನ್ ವಿಶ್ವ, ರಾಜ್ಯ ಮಾಧ್ಯಮ ಸಮಿತಿ ಸದಸ್ಯ ಶರೀನಾಥ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಸೇರಿದಂತೆ ವಿವಿಧ ಮಠಗಳ ಮಠಾಧೀಶರು, ಸಾರ್ವಜನಿಕ ಪ್ರಮುಖರು ಭೇಟಿ ಕೊಟ್ಟು ಪ್ರಾರ್ಥಿಸಿದರು.

#### ವಿಸರ್ಜನೆ

ವ್ರತಾಚರಣೆಗಾಗಿ ಮಾಗಡಿಯಲ್ಲಿ ಮಣ್ಣಿನಿಂದ ಸಿದ್ದಗೊಂಡು ಸ್ಥಾಪಿಸಲಾಗಿದ್ದ ಒಂಬತ್ತು ಗೌರಿಗಳಾದ ಗಜಗೌರಿಯ, ಸ್ವರ್ಣಗೌರಿ, ಸೌಭಾಗ್ಯ ಗೌರಿ, ಸೋಮಾವತಿ ಗೌರಿ, ಹಸ್ತ ಗೌರಿ, ಸಂಪದ ಗೌರಿ, ಸ್ಕಂದಮಾತಾ ಗೌರಿ, ಕನಕ ಗೌರಿ ವಿಜಯ, ಬೃಹದಾ ಗೌರಿ ಮೂರ್ತಿಗಳನ್ನು, ನಗರದ ರಂಗರಾಯರದೊಡ್ಡಿ ಕೆರೆಯಲ್ಲಿ ವಿಸರ್ಜಿಸಲಾಯಿತು. ಯಾವುದೇ ಘಟನೆಗಳಿಗೆ ಅವಕಾಶವಾಗದಂತೆ ಪೊಲೀಸರು ನಿಗಾವಹಿಸಿದ್ದರು.

#### ಮಕ್ಕಳ ಶ್ರೇಯಸ್ಸು, ಗಜಗೌರಿ ವ್ರತಚಾರಣೆ ಮಹತ್ವ

ಗಜಗೌರಿ ವ್ರತಾಚರಣೆ ಮಹಾಭಾರತದಲ್ಲಿ ಉಲ್ಲೇಖವಾಗಿದೆ. ನಾರದ ಮುನಿಗಳ ಸಲಹೆಯ ಮೇರೆಗೆ ಕೌರವರು ಮತ್ತು ಪಾಂಡವರು ಈ ವ್ರತವನ್ನು ಆಚರಿಸಿದ್ದರು. ಮೂರು ದಶಕಗಳ ನಂತರ ರಾಮನಗರದಲ್ಲಿ ಗಜಗೌರಿ ವ್ರತಾಚರಣೆ ನೆರವೇರಿದೆ. ಕೆ.ವಿ.ಉಮೇಶ್, ಪಿ.ಶಿವಾನಂದ ಮತ್ತು ಆರ್.ಜೆ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಅನೇಕ ಯುವಕರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಮತ್ತು ನಾಗರೀಕರ ಶ್ರಮದಿಂದ ವ್ರತಾಚರಣೆ ಯಶಸ್ವಿಯಗಿದೆ.

▸▸ **ಕೆ.ಶೇಷಾದ್ರಿ** ಅಧ್ಯಕ್ಷರು, ನಗರಸಭೆ

#### ಗಜಗೌರಿಯ ಕೃಪೆಯಿಂದ ಎಲ್ಲರಿಗೂ ಒಳಿತಾಗಲಿ

ಅಪರೂಪದ ವ್ರತಾಚರಣೆಯಾದ ಗಜಗೌರಿ ವ್ರತಾಚರಣೆಯನ್ನು ನಗರದ ನಾಗರೀಕರು ಭಕ್ತಿಯಿಂದ ಆಚರಿಸಿದ್ದಾರೆ. ಗಜಗೌರಿಯ ಕೃಪಾಶೀರ್ವಾದಗಳು ಸಮಸ್ತ ನಾಗರೀಕರ ಮೇಲಿರಲಿ, ಎಲ್ಲರಿಗೂ ಒಳಿತಾಗಲಿ.

▸▸ **ಡಾ.ಸಿ.ಎನ್.ಮಂಜುನಾಥ್**
ಸಂಸದರು



#### ಮನಸ್ಸು ಶುದ್ದಿಗೆ ಧಾರ್ಮಿಕ ಕಾರ್ಯಗಳು ಸಹಕಾರಿ

ಗಜಗೌರಿ ವ್ರತಾಚರಣೆಯಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ಮಾನವರು ತಮ್ಮ ಮನಸ್ಸನ್ನು ಶುದ್ದಗೊಳಿಸಿಕೊಳ್ಳಬಹುದು ಎಂದು ತಲಕಾಡು ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನದ ಶ್ರೀ ಗೋವಿಂದಾನಂದ ಸರಸ್ವತಿ ಮಹಾ ಸ್ವಾಮೀಜಿಯವರು ಆಶಿರ್ವಚನದಲ್ಲಿ ತಿಳಿಸಿದರು. ಒಳ್ಳೆಯದನ್ನೇ ಆಲೋಚಿಸಿದರೆ, ಜೀವನದಲ್ಲಿ ಒಳ್ಳೆಯ ಘಟನೆಗಳೇ ನಡೆಯುತ್ತವೆ. ಎಷ್ಟೇ ಸಮಸ್ಯೆಗಳಿದ್ದರು ಒಳಿತನ್ನೇ ಆಲೋಚಿಸಿ.

▸▸ **ಗೋವಿಂದಾನಂದ ಸ್ವಾಮೀಜಿ**

#### ಭಕ್ತಿಶ್ರದ್ದೆಯಿಂದ ವ್ರತಾಚರಣೆ

ಜಿಲ್ಲೆಯ ಜನತೆಯ ಒಳಿತಿಗಾಗಿ ಮತ್ತು ಲೋಕಕಲ್ಯಾಣಾರ್ಥ ಆಯೋಜನೆಯಾಗಿದ್ದ ಶ್ರೀ ಗಜಗೌರಿ ವ್ರತವನ್ನು ಅತ್ಯಂತ ಭಕ್ತಿ ಮತ್ತು ಶ್ರದ್ದೆಯಿಂದ ಆಚರಿಸಲಾಗಿದೆ. ಶ್ರೀ ಗೌರಿ ಮಾತೆಯು ಎಲ್ಲರಿಗೂ ಒಳಿತನ್ನು ಕರುಣಿಸಲಿ.

▸▸ **ಇಕ್ಬಾಲ್ ಹುಸೇನ್**
ಶಾಸಕರು, ರಾಮನಗರ ಕ್ಷೇತ್ರ

# ಆಧುನಿಕ ಬದುಕಲ್ಲಿ ಸಂಸ್ಕಾರ ಮರೆ: ಶ್ರೀ ಶಿವಸಿದ್ದೇಶ್ವರ ಸ್ವಾಮಿ

ಮೈಸೂರು: ಆಧುನಿಕ ಯಾಂತ್ರಿಕ ಬದುಕಿನಲ್ಲಿ ಸಂಸ್ಕಾರ ಮರೆಯಾಗುತ್ತಿದ್ದು, ದೇವಾಲಯಗಳಂತಹ ಭಕ್ತಿಯ ಸೂಚಕಗಳಿಂದ ಸಂಸ್ಕಾರ ಉಸಿರಾಡುತ್ತಿದೆ ಎಂದು ತುಮಕೂರು ಸಿದ್ಧಗಂಗಾ ಮಠ ಕಿರಿಯ ಶ್ರೀ ಶಿವಸಿದ್ಧೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಜಯಪುರ ಹೋಬಳಿಯ ಮಂಡನಹಳ್ಳಿ ಗ್ರಾಮದಲ್ಲಿ ನವೀಕರಣಗೊಳಿಸಿದ ಜೋಡಿಲಿಂಗ ಶ್ರೀ ಮಹದೇಶ್ವರ ದೇವಸ್ಥಾನ ಉದ್ಘಾಟನೆ, ಧಾರ್ಮಿಕ ಸಭೆ ಮತ್ತು ಕೊಂಡೋತ್ಸವದಲ್ಲಿ ದಿವ್ಯಸಾನಿದ್ಯ ವಹಿಸಿ ಮಾತನಾಡಿದರು. ಇವತ್ತಿನ ದಿನಗಳಲ್ಲಿ ದೇವಸ್ಥಾನಗಳು ಹೆಚ್ಚಾಗುತ್ತಿವೆ. ಆದರೆ ಸಂಸ್ಕಾರಗಳು ಕಡಿಮೆಯಾಗುತ್ತಿವೆ. ದೇವಸ್ಥಾನಗಳನ್ನು ಆಢಂಬರ, ಆಚರಣೆಗೆ ಸೀಮಿತವಾಗಿಸಿದ್ದು, ಪೂಜೆಗಳು ತೋರ್ಪಡಿಕೆಯಾಗಿವೆ. ಸಮಾಜದ ಒಳಿಗಾಗಿ ನಡೆಸುವ ಪೂಜೆಯಷ್ಟೇ ಪ್ರಾಮುಖ್ಯತೆಯನ್ನು, ನಮ್ಮ ಒಳಿತಿಗಾಗಿ ಭಕ್ತಿಯನ್ನು ಸಿದ್ಧಿಸಿಕೊಳ್ಳಬೇಕಿದ್ದು, ನೆಮ್ಮದಿಯ ಬದುಕಿನೆಡೆಗೆ ಸಾಗಬೇಕಿದೆ. ಭಾರತದ ಆತ್ಮ ಆಧ್ಯಾತ್ಮವಾಗಿದ್ದು, ಈ ಪರಂಪರೆಯಲ್ಲಿ ಆಚರಣೆಗಳು, ಬದುಕಿನ ಭಾಗವಾಗಿವೆ. ಹಾಗಾಗಿ ಈ ಧಾರ್ಮಿಕ ಆಚರಣೆಗಳು ಭಾರತೀಯರ ಜೀವನಾಡಿಗಳಾಗಿವೆ ಎಂದರು.



ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿ, ಹಿಂದೆ ಒಂದು ಪುಟ್ಟ ದೇವಾಲಯವಿತ್ತು. ಇದೀಗ ವೈಭದ ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ. ಇದುವರೆಗೂ ಸಾಕಷ್ಟು ದೇವಾಲಯಗಳನ್ನು ನಿರ್ಮಿಸಿದ್ದೇನೆ ಆದರೆ, ಜೋಡಿಲಿಂಗ ಮಹದೇಶ್ವರನ ದೇವಾಲಯ ನಿರ್ಮಾಣದಲ್ಲಿ ಮನಸ್ಸಿಗೆ ತೃಪ್ತಿ ತಂದಿದೆ. ಅದರಿಂದ ಮತ್ತಷ್ಟು ಸೇವೆ ಮಾಡಬೇಕೆಂಬ ಮಹಾದ್ದಾಸೆ ಹೆಚ್ಚಿದೆ ಎಂದು ಸಂತಸ ಹಂಚಿಕೊಂಡರು.

ಈ ದೇವಸ್ಥಾನ ನಿರ್ಮಾಕ್ಕಾಗಿ ಆಶ್ವಾಸನೆ ನೀಡಿ, ಬಳಿಕ ನಿರ್ಮಾಣದ ಸಮಯದಲ್ಲಿ ಶಾಸಕರು ಮಾತು ತಪ್ಪಿದರು. ಅದರ ಸೌಭಾಗ್ಯ ನನ್ನದಾಯಿತು. ಇಲ್ಲಿನ ಜನ ನನಗೆ ಬೆಂಬಲ ನೀಡಿ ನನ್ನ ಹಿಂದೆ ನಿಂತರು. ನಾನು ಚುನಾವಣೆಯಲ್ಲಿ ಸೋತು, ಹಣವಿಲ್ಲದೇ ಕಂಗಾಲಾಗಿದ್ದೆ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ನನ್ನ 3 ಎಕರೆ ಜಮೀನು ಮಾರಿ ಜೋಡಿಲಿಂಗ ಮಹದೇಶ್ವರನ ದೇವಸ್ಥಾನ ಕಟ್ಟಿದ್ದೇನೆ. ನುಡಿದಂತೆ ನಡೆದಿದ್ದೇನೆ, ಮಾದಪ್ಪ ನನ್ನನ್ನು ಕೈ ಹಿಡಿಯುತ್ತಾನೆ ಎಂದು ಭಾವುಕರಾದರು.

ಕನಕಪುರ ದೇಗುಲ ಮಠ ಕಿರಿಯ ಶ್ರೀ ಡಾ.ಚನ್ನಬಸವಸ್ವಾಮೀಜಿ, ಪುರ ಶ್ರೀ ಬಸವೇಶ್ವರ ಪಟ್ಟದ ಮಠ ಚಂದ್ರಶೇಖರ ಸ್ವಾಮೀಜಿ, ಮೈಸೂರು ಕುದೇರು ಮಠದ ಗುರುಶಾಂತ ಸ್ವಾಮೀಜಿ, ಸಂಗಮ ಕಾರ್ಯಸ್ವಾಮಿ ಮಠದ ಮಹದೇಶ್ವರ ಸ್ವಾಮೀಜಿ, ಹುಣಸೂರು ಮಾದವಳ್ಳಿ ಉಕ್ಕಿನಕಂತೆ ಮಠ ಸಾಂಬಸದಾಶಿವ ಸ್ವಾಮೀಜಿ, ಮಂಡ್ಯ ಬೇಬಿಬೆಟ್ಟ ರಾಮಯೋಗೀಶ್ವರ ಮಠ ಶಿವಬಸವ ಸ್ವಾಮೀಜಿ, ಹಂಚೀಪುರ ಶ್ರೀ ಸಿದ್ಧಮಲ್ಲೇಶ್ವರ ಪಟ್ಟದ ಮಠ ಕಿರಿಯ ಶ್ರೀ ತೋಂಟದಾರ್ಯ ಸ್ವಾಮೀಜಿ, ಕಮಲಮ್ಮ ಸಿದ್ದೇಗೌಡ, ಮಂಡಮಹಳ್ಳಿ ಮುಖಂಡರಾದ ನಾಗೇಂದ್ರ ಆರಾಧ್ಯ, ಶಿವರಾಜಪ್ಪ ಮತ್ತಿತರರಿದ್ದರು.

ಸಮಾಜದಲ್ಲಿ ಹಣವುಳ್ಳವರು ಬೇಕಾದಷ್ಟು ಜನರಿದ್ದಾರೆ. ಆದರೆ ಮಾದಪ್ಪ, ಸಿದ್ದೇಗೌಡರ ಕೈಯಿಂದ ದೇವಸ್ಥಾನ ನಿರ್ಮಾಣ ಮಾಡುವ ಅನುಗ್ರಹ ನೀಡಿದ್ದಾನೆ. ಆ ಪುಣ್ಯದ ಕಾರ್ಯ ಎಲ್ಲರಿಗೂ ದೊರೆಯುವುದಿಲ್ಲ. ಅದು ಪುಣ್ಯ ವಂತರಿಗೆ ಮಾತ್ರ ಮೀಸಲಿರುವಂತಹದ್ದು, ಮಾದಪ್ಪನಿಗೆ ಅವರು ನೀಡಿದ್ದು, ಮರಳಿ ಮುಂದಿನ ದಿನಗಳಲ್ಲಿ ಮತ್ತಷ್ಟು ಅಧಿಕಾರ ದೊರೆತು ಮತ್ತಷ್ಟು ದೊಡ್ಡ ಶಕ್ತಿ ಸಿಗಲಿದೆ.

▸▸ **ಪರವಶಿಮೂರ್ತಿ ಸ್ವಾಮೀಜಿ** ಶ್ರೀ ಮಹಂತೇಶ್ವರ ಮಠ

# 28ರಂದು ಶೈಕ್ಷಣಿಕ ಮಹಾ ಸಮ್ಮೇಳನ



ಚಾಮರಾಜನಗರ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಫೆ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭಕ್ಕೆ ಜಿಲ್ಲೆಯ ಶಿಕ್ಷಕರ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ ಮನವಿ ಮಾಡಿದರು.

ನಗರದ ಶಿಕ್ಷಕರ ಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಸಮಿತಿ ಪದಾಧಿಕಾರಿಗಳು ಸಭೆಯಲ್ಲಿ ಅವರು ಮಾತನಾಡಿ, ಅಂದು ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವ ರಾಜ್ತ ಸರ್ಕಾರ ಸಂಘದ ಅನೇಕ ಬೇಡಿಕೆಗಳ ಈಡೇರಿಸಿರುವುದಕ್ಕೆ ಸಂಘದ ವತಿಯಿಂದ ಅವರಿಗೆ ಹೃದಯಸ್ಪರ್ಶಿ ಅಭಿನಂದನೆ ಸಲ್ಲಿಸಲಾಗುತ್ತದೆ. ಈ ಸಮಾರಂಭಕ್ಕೆ ಜಿಲ್ಲೆಯ ಸಂಘದ ಪದಾಧಿಕಾರಿಗಳು, ಸದಸ್ಯ ರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮಹಾದೇವಸ್ವಾಮಿ ಕೋರಿದರು. ಸಂಘದ ಜಿಲ್ಲಾ ಖಜಾಂಚಿ ಸಲೀನಾ, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ನಂದೀಶ್, ಗುಂಡ್ಲುಪೇಟೆ ಅಧ್ಯಕ್ಷ ಶಿವಪ್ರಸಾದ್, ಯಳಂದೂರು ತಾಲೂಕು ಅಧ್ಯಕ್ಷ ಸೋಮಣ್ಣ, ಕಾರ್ಯದರ್ಶಿ ನಾಗರಾಜು, ಚಾಮರಾಜನಗರ ತಾಲೂಕು ಕಾರ್ಯದರ್ಶಿ ಎನ್.ಸುಧಾ, ಜಿಲ್ಲಾ ಉಪಾಧ್ಯಕ್ಷೆ ಭವಾನಿದೇವಿ, ಸಹ ಕಾರ್ಯದರ್ಶಿ ಶಾಂತರಾಜು, ಸೋಮಶೇಖರ ಇದ್ದರು.

# ಆತ್ಮರಕ್ಷಣೆಗಾಗಿ ಕರಾಟೆ ಅವಶ್ಯಕ



ಚಾಮರಾಜನಗರ, ಆತ್ಮರಕ್ಷಣೆಗೆ ಕರಾಟೆ ಕಲೆ ಸಹಕಾರಿಯಾಗಿದೆ ಎಂದು ಉದ್ಯಮಿ ಶ್ರೀನಿಧಿಕುದರ್ ಹೇಳಿದರು.

ನಗರದ ಸರ್ಕಾರಿ ಪೇಟೆ ಶಾಲಾವರಣದಲ್ಲಿ ನಡೆದ ಸೋಟೋಕಾನ್ ಸ್ಕೂಲ್ ಆಫ್ ಮಾರ್ಷಲ್ ಆರ್ಟ್ಸ್ ಇಂಡಿಯ ಚಾಮರಾಜನಗರ ವತಿಯಿಂದ ಕರಾಟೆ ಕಲರ್ ಬೆಲ್ಟ್ ಟೆಸ್ಟ್ ಕಾರ್ಯಕ್ರಮದಲ್ಲಿ ಪ್ರಮಾಣಪತ್ರ ವಿತರಿಸಿ ಮಾತನಾಡಿದರು. ಕರಾಟೆ ಜಪಾನ್‌ನಲ್ಲಿ ಹುಟ್ಟಿಕೊಂಡ ಒಂದು ಜನಪ್ರಿಯ ಆತ್ಮರಕ್ಷಣೆ ಸಮರ ಕಲೆಯಾಗಿದ್ದು, ಕರಾಟೆ ಎಂದರೆ ಜಪಾನಿ ಭಾಷೆಯಲ್ಲಿ ಖಾಲಿ ಕೈ ಎಂದು ಅರ್ಥ. ಯಾವುದೇ ಶಸ್ತ್ರಾಸ್ತ್ರಗಳಿಲ್ಲದೆ ಬರಿ ಕೈ, ಕಾಲು, ಮೊಣಕ್ಕೆ ಮತ್ತು ಮೊಣಕಾಲುಗಳನ್ನು ಬಳಸಿ ಎದುರಾಳಿಯ ವಿರುದ್ಧ ಹೋರಾಡುವ ಕಲೆ ಇದಾಗಿದ್ದು, ಇದು ಮಕ್ಕಳಲ್ಲಿ ಶಿಸ್ತು. ದೈಹಿಕ, ಮಾನಸಿಕವಾಗಿ ಸದೃಢಗೊಳಿಸಲು ಸಹಾಯ ಮಾಡುತ್ತದೆ ಎಂದರು.

ಎಂಇಟಿ ಅಂಗ್ಲಮಾಧ್ಯಮ ಶಾಲೆಯ ಮೊಹಮ್ಮದ್ ಅಜೀಂ, ನಾಗಮಾರ್ಷಲ್ ಕರಾಟೆ ಸಂಸ್ಥೆ ಸೋಸ್ಲೆ ಸಿದ್ದರಾಜು ಮಾತನಾಡಿದರು. ವಕೀಲ ಏಹ್ಸಾನ್ ಜಾವಿದ್, ಕುಮಾರ್ ಚಿಕ್ಕಹೊಳೆ, ಗ್ರ್ಯಾಂಡ್ ಮಾಸ್ಟರ್ ನಾಗರಾಜು ಜಟ್ಟಿ, ಸೆನ್ಸಾಯ್ ಗಳಾದ ಗಣೇಶ ಮೂರ್ತಿ, ಎಂ.ನಾಗೇಂದ್ರ, ಜೀತೇಶ್, ರವೀಶ್, ನಾಗಾಭರಣ, ಫಾರ್ಖಾನ್ ಪಾಷ, ರೆಹಾನ್ ಹಾಗೂ ಕ್ರೀಡಾಪಟುಗಳು ಭಾಗವಹಿಸಿದ್ದರು.

# ಒಳಮೀಸಲು ತಡೆಗೆ ಜ್ಞಾನಪ್ರಕಾಶ್ ಆಗ್ರಹ



ಮೈಸೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಒಳ ಮೀಸಲಾತಿ ವರದಿಯ ಗೊಂದಲ ಬಗೆಹರಿಯುವ ತನಕ ರಾಜ್ಯ ಸರ್ಕಾರ ಪ್ರಸ್ತುತ ಶೈಕ್ಷಣಿಕ ವಲಯ ಮತ್ತು ಉದ್ಯೋಗಕ್ಕೆ ಅನ್ವಯಿಸುತ್ತಿರುವ ಒಳ ಮೀಸಲಾತಿ ಕಾರ್ಯ ಚಟುವಟಿಕೆಗೆ ಸರ್ಕಾರ ತಡೆ ನೀಡಬೇಕು ಎಂದು ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿಗಳ ಒಕ್ಕೂಟದ ಪದಾಧಿಕಾರಿ ಡಾ.ಬಿ.ಕೆ.ಜ್ಞಾನಪ್ರಕಾಶ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಾಗಮೋಹನ ದಾಸ್ ವರದಿಯಲ್ಲಿ ಇದುವರೆಗೂ ಮೂಲ ಜಾತಿಗಳನ್ನೇ ಗುರುತಿಸಿಲ್ಲ. ಹೀಗಾಗಿ ಹಲವು ಜಾತಿಗಳನ್ನು ಎಲ್ಲಿ ಗುರುತಿಸಬೇಕು ಎಂಬ ಗೊಂದಲವುಂಟಾಗಿ, ಇವು ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿ ವೇಳೆ ಅನ್ಯಾಯಕ್ಕೊಳಗಾಗುವ ಸಾಧ್ಯತೆಯಿದೆ. ಆದರೆ ತಮಗೆ ದೊರೆತ ಮೀಸಲಾತಿ ಸೌಲಭ್ಯ ಬಳಸಿಕೊಳ್ಳಲು ವಿಫಲರಾದದವರು ಬಲೈಗ ಸಮುದಾಯದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಇವರು ಪದೇ ಪದೇ ನಮ್ಮನ್ನು ತುಳಿಯುತ್ತಿದ್ದರೆ ಎಲ್ಲಿಯವರೆಗೆ ಸಹಿಸಿಕೊಳ್ಳಬೇಕೆಂದು ಪ್ರಶ್ನಿಸಿದರು.

ಮತ್ತೋರ್ವ ಪದಾಧಿಕಾರಿ ಡಾ.ಕೆ.ಪಿ. ರಮೇಶ್ ಮಾತನಾಡಿ, ಒಳ ಮೀಸಲಾತಿ ಗೊಂದಲ ಬಗೆಹರಿಯುವವರೆಗೂ ಹೊಸ ಜಾತಿ ಪ್ರಮಾಣಪತ್ರ ನೀಡುವುದನ್ನು ಕೂಡಲೇ ನಿಲ್ಲಿಸಿ, ಹಳೇ ಜಾತಿ ಪ್ರಮಾಣಪತ್ರ ಮುಂದುವರಿಸಬೇಕು, ಒಳ ಮೀಸಲಾತಿಗೆ ಅನ್ವಯಿಸಿರುವ ರೋಸ್ಟರ್ ಬಿಂದು ಪರಿಷ್ಕರಿಸಬೇಕು, ಈ ಗೊಂದಲ ಪರಿಹಾರವಾಗುವವರೆಗೂ ಹಳೇ ಮೀಸಲಾತಿಯನ್ನೇ ಅನ್ವಯಿಸಿ ಖಾಲಿ ಹುದ್ದೆ ಭರ್ತಿ ಮಾಡಬೇಕು, ವಿವವಿ, ಅನುದಾನಿತ ಸಂಸ್ಥೆ, ಪ್ರಾಧಿಕಾರಗಳಲ್ಲಿ ಬ್ಯಾಕ್‌ಲಾಗ್ ಮತ್ತು ಬಡ್ತಿಗೆ ಸಂಬಂಧಿಸಿದಂತೆ ಒಂದು ಮತ್ತು ಎರಡು ಹುದ್ದೆಗಳಿದ್ದಾಗ ಮೀಸಲಾತಿ ನಿಗದಿ ಪಡಿಸುವ ಹೊಣೆ ಸಮಾಜ ಕಲ್ಯಾಣ ಇಲಾಖೆಗೆ ವಹಿಸಬೇಕು, ಜಾತಿ ಪ್ರಮಾಣಪತ್ರ ವಿತರಣೆ ಸರಳೀಕರಣಗೊಳ್ಳಬೇಕು, ಜಾತಿ ಪ್ರಮಾಣಪತ್ರ ತಂತ್ರಾಂಶ ಸರಿಪಡಿಸಬೇಕು. ಹೊಸ ಜಾತಿ ಪ್ರಮಾಣಪತ್ರ ಮಾಡಿಸದ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ಶೈಕ್ಷಣಿಕ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದರು. ಇದಲ್ಲದೆ, ಈ ಎಲ್ಲ ಬೇಡಿಕೆ ಈಡೇರಿಕೆಗಾಗಿ ಫೆ. 10 ರಂದು ಬೆಳಗ್ಗೆ 10ಕ್ಕೆ ಮಾನಸ ಗಂಗೋತ್ರಿ ಅಂಬೇಡ್ಕರ್ ಪ್ರತಿಮೆ ಬಳಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಪಾದಯಾತ್ರೆ ಹಮ್ಮಿಕೊಂಡು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು. ಲಿಂಗರಾಜ್, ಕಾರ್ತಿಕ್, ಶಿವಶಂಕರ್, ವಿಶ್ವಪ್ರಸಾದ್ ಹಾಜರಿದ್ದರು.

# ಫೆ.12ಕ್ಕೆ ಪಾದಯಾತ್ರೆ



ಮೈಸೂರು: ಬೋಧ್ ಗಯಾ ನಿಯಂತ್ರಣ ಬೌದ್ಧರ ಕೈಗೇ ಬರಬೇಕು ಎಂದು ಆಗ್ರಹಿಸಿ ಫೆ. 12,13,14ರಂದು ದೆಹಲಿಯ ಜಂತರ್ ಮಂತರ್ ನ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಗೆ ಬೆಂಬಲ ಸೂಚಿಸಿ ಬಿವಿಎಸ್, ವಿಶ್ವಮೈತ್ರಿ ಬುದ್ಧ ವಿಹಾ ರಗಳ ಸಂಯುಕ್ತಾಶ್ರಯದಲ್ಲಿ ಡಿ.12 ರಂದು ನಗರದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಈ ಪಾದಯಾತ್ರೆ ಬೆಳಗ್ಗೆ 8 ರ ವೇಳೆಗೆ ಪುರಭವನದ ಅಂಬೇಡ್ಕರ್ ಪ್ರತಿಮೆ ಬಳಿಯಿಂದ ಹೊರಟು ಬಳಿಕ ಬಲ್ಲಾಳ್ ವೃತ್ತದಲ್ಲಿನ ವಿಶ್ವಮೈತ್ರಿ ಬುದ್ಧ ವಿಹಾರ ತಲುಪಲಿದೆ. ಇದರಲ್ಲಿ ನೂರಾರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬೋಧ್ ಗಯಾ ದುರಂತ ಚರಿತ್ರೆ ಕುರಿತ ಧಮ್ಮ ಜಾಗೃತಿ ಗೀತೆಗಳನ್ನು ಭಾರತೀಯ ವಿದ್ಯಾರ್ಥಿ ಪರಿಷತ್, ಪದ್ಮಪಾಣಿ ಲಲಿತ ಕಲಾ ಅಕಾಡೆಮಿಗಳ ವತಿಯಿಂದ ಹೊರ ತಂದಿದ್ದು, ಇದನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸೋಸಲೆ ಗಂಗಾಧರ್, ಶಿವಕುಮಾರ್ ಇವುಗಳನ್ನು ರಚಿಸಿದ್ದಾರೆ. ಪದ್ಮಪಾಣಿ ಮ್ಯೂಸಿಕ್ ಹೆಸರಿನಲ್ಲಿ ಯೂಟ್ಯೂಬ್‌ನಲ್ಲಿ ಹಾಡುಗಳ ಹುಡುಕಾಡ ನಡೆಸಬಹುದಾಗಿದೆ. ಜೊತೆಗೇ ಕೆಲವಾರು ದೃಶ್ಯಗಳು ಬಂದು ಹೋಗುತ್ತವೆ ಎಂದರು.

ದೇವಸ್ಥಾನ ಹಿಂದೂಗಳ ಕೈಯ್ಯಲ್ಲಿ, ಮಸೀದಿ ಮುಸ್ಲಿಮರ ಕೈಯ್ಯಲ್ಲಿ, ಚರ್ಚ್ ಕ್ರೈಸ್ತರ ಕೈಯ್ಯಲ್ಲಿ ಇವೆ. ಆದರೆ ಬೋಧ್ ಗಯಾ ಮಾತ್ರ ಬೌದ್ಧರ ಕೈಗೆ ದೊರಕದಂತೆ ನೋಡಿಕೊಳ್ಳಲಾಗಿದೆ ಹೀಗಾಗಿ ದೆಹಲಿಯಲ್ಲಿ ಇದನ್ನು ವಿರೋಧಿಸಿ ಹಾಗೂ ಬೌದ್ಧರಿಗೇ ಬೋಧ್ ಗಯಾ ವಹಿಸಬೇಕೆಂದು ಆಗ್ರಹಿಸಿ ಹೋರಾಟ ನಡೆಯುತ್ತಿದೆ ಎಂದು ವಿವರಿಸಿದರು. ಸೋಸಲೆ ಸಿದ್ದರಾಜು, ಸೋಸಲೆ ಗಂಗಾಧರ್, ಶಿವಕುಮಾರ್, ಜಯಲಕ್ಷ್ಮಿ ಹಾಜರಿದ್ದರು.

# ವಿದ್ಯಾರ್ಥಿಗಳಿಗೆ ಪಾಠದ ಜತೆಗೆ ಕೌಶಲ್ಯಾಧಾರಿತ ತರಬೇತಿ ಅಗತ್ಯ

ಚಾಮರಾಜನಗರ: ಪ್ರಸ್ತುತ ದಿನಮಾನಗಳಲ್ಲಿ ಸಮಾಜದಲ್ಲಿ ಏನಾದರೂ, ಬದಲಾವಣೆ ಕಾಣುವಂತಾಗಿದ್ದರೆ ಅದು ಶಿಕ್ಷಣದಿಂದ ಮಾತ್ರ ಎಂದು ಎಂಎಸ್ಐಎಲ್ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ನಡೆದ ಸಿಇಟಿ ಉಚಿತ ಆನ್‌ಲೈನ್ ತರಬೇತಿ ಹಾಗೂ ಎಂಎಸ್ಐಎಲ್ ವತಿಯಿಂದ ಸಿಇಟಿ ಪುಸ್ತಕ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**▶▶ ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ**
**▶▶ ಸಿಇಟಿ ಆನ್‌ಲೈನ್ ತರಬೇತಿ**

ತಮ್ಮ ಕುಟುಂಬದಲ್ಲಿ ಸಹೋದರರು ಶಿಕ್ಷಣಕ್ಕೆ ಆದ್ಯತೆ ಕೊಡಲಿಲ್ಲ, ನಾನು ಮಾತ್ರ ಓದಲೇಬೇಕು ಎಂಬ ಹಠತೊಟ್ಟು, ಉನ್ನತ ಶಿಕ್ಷಣಪಡೆಯುವ ಮೂಲಕ ಇಂದು ಉನ್ನತಮಟ್ಟದಲ್ಲಿ ನಿಂತಿದ್ದೇನೆ. ಇದಕ್ಕೆಲ್ಲ ಶಿಕ್ಷಣ ಕಾರಣ ಎಂದರು. ಇಂದು ವೈದ್ಯಕೀಯ ಶಿಕ್ಷಣ, ಎಂಜಿನಿಯರಿಂಗ್ ಶಿಕ್ಷಣಕೋರ್ಸ್‌ಗೆ ಪ್ರವೇಶಪಡೆಯಬೇಕಾದರೆ ಸಿಇಟಿ. ನೀಟ್, ಜೆಇಇ ತರಬೇತಿ ಪಡೆಯಲೇಬೇಕು, ಆನ್‌ಲೈನ್ ತರಬೇತಿ ಕೊಡಿಸುವ ಸಂಬಂಧ ಚಾಮರಾಜನಗರದ ಸರ್ಕಾರಿ ಬಾಲಕ, ಬಾಲಕಿಯರ ಪದವಿಪೂರ್ವ ಕಾಲೇಜು, ಹರವೆ, ಸಂತೇಮರಹಳ್ಳಿ, ಕುದೇರು, ಚಂದಕವಾಡಿ, ವೆಂಕಟಯ್ಯನಛತ್ರ ಪದ ವಿಪೂರ್ವ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು, ತಲಾ 10ವಿದ್ಯಾರ್ಥಿಗಳಂತೆ 70 ವಿಜ್ಞಾನವಿಭಾಗದ ವಿದ್ಯಾರ್ಥಿಗಳಿಗೆ ಎಂಎಸ ಐಎಲ್ ವತಿಯಿಂದ ಸಿಇಟಿ ಪುಸ್ತಕವಿತರಣೆ ಜತೆಗೆ ತರಬೇತಿಯನ್ನು ಕೊಡಿಸಲಾಗುತ್ತಿದೆ. ಮುಂದಿನ ಶೈಕ್ಷಣ ಕ ಸಾಲಿನಲ್ಲಿ ಕಾಲೇಜುಗಳ ಜತೆ ಸಿಇಟಿ ತರಬೇತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಳ ಮಾಡ ಲಾಗುವುದು ಎಂದರು.

ವಿದ್ಯಾರ್ಥಿಗಳು ಕೇವಲ ಶಿಕ್ಷಣಪಡೆದರೆ ಸಾಲದು, ವಿವಿಧ ಕೌಶಲ್ಯಾಧಾರಿತ ತರಬೇತಿ ಪಡೆಯಬೇಕು,



ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾವಸಾಹತು ಪ್ರದೇಶದಲ್ಲಿ ವಿವಿಧ ಪ್ರತಿಷ್ಠಿತ ಕೈಗಾರಿಕೆಗಳು ಸ್ಥಾಪನೆಯಾಗಿದ್ದು, ತರಬೇತಿಗೆ ತಕ್ಕ ಉದ್ಯೋಗಪಡೆಯಬಹುದಾಗಿದೆ ಎಂದರು.

ಚುಡಾಅಧ್ಯಕ್ಷ ಮಹಮದ್ ಅಸ್ಗರ್(ಮುನ್ನ) ಮಾತನಾಡಿ, ಸರ್ಕಾರಿ ಶಾಲಾಕಾಲೇಜುಗಳಲ್ಲಿ ಬಹುತೇಕ ವ್ಯಾಸಂಗ ಮಾಡುವವರು ಬಡವರ್ಗದ ವಿದ್ಯಾರ್ಥಿಗಳೇ ಆಗಿದ್ದಾರೆ, ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ಪಡೆದುಕೊಂಡು, ತಾವು ಅಂದುಕೊಂಡಿದ್ದ ಗುರಿಮುಟ್ಟಬೇಕು ಎಂದು ಸಲಹೆ ನೀಡಿದರು. ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಜಯಕುಮಾರ್, ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ನಾರಾಯಣ, ನಿವೃತ್ತ ಪ್ರಾಂಶುಪಾಲ ಸೋಮಣ್ಣ, ವೆಂಕಟಯ್ಯನಛತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕೇಶವನ್, ಸಂಪನ್ಮೂಲವ್ಯಕ್ತಿಗಳಾದ ಮಾದೇಶ್, ದೀಪಕ್, ಮಲ್ಲಿಕಾರ್ಜುನ್, ಚೂಡಾ ಸದಸ್ಯ ಸರಾಜೇಂದ್ರ (ದ್ವಾರ್ಕಿ), ಸದಸ್ಯ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

## ವಿದ್ಯಾರ್ಥಿಗಳು ತರಬೇತಿಯಿಂದ ವಂಚಿತರಾಗದಿರಿ

**ಪ್ರಾಸ್ತಾವಿಕ ನುಡಿಗಳನ್ನಾಡಿದ ಚಾಮರಾಜನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎ.ಎಸ್.ಗುರುಸ್ವಾಮಿ' ಶಿಕ್ಷಣ ಇಂದು ಮಾರಾಟದ ವಸ್ತುವಾಗಿದ್ದು, ಬಡ ವಿದ್ಯಾರ್ಥಿಗಳಿಗೆ ಸಿಇಟಿ. ನೀಟ್, ಜೆಇಇ ತರಬೇತಿ ಗಗನಕುಸುಮವಾಗಿವೆ. ಇದನ್ನು ಮನಗಂಡ ಶಾಸಕರು; ಬಡಪ್ರತಿಭಾನ್ವಿತ ವಿದ್ಯಾರ್ಥಿಗಳು ಸಿಇಟಿ ತರಬೇತಿಯಿಂದ ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಚಾಮರಾಜನಗರ ತಾಲ್ಲೂಕಿನ 7 ಸರ್ಕಾರಿಪದವಿಪೂರ್ವ ಕಾಲೇಜಿನ ಪ್ರಥಮಪಿಯುಸಿ ವಿಜ್ಞಾನವಿಭಾಗದಲ್ಲಿ ಅತಿಹೆಚ್ಚು ಅಂಕಪಡೆದ ಒಂದು ಕಾಲೇಜಿಗೆ ತಲಾ 10ವಿದ್ಯಾರ್ಥಿಗಳಂತೆ 70 ವಿಜ್ಞಾನವಿಭಾಗದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಸಿಇಟಿ ತರಬೇತಿ ಪುಸ್ತಕ ವಿತರಣೆ ಮಾಡಿದ್ದಾರೆ, ಸೂಪರ್ ನೀಟ್ ಅಕಾಡೆಮಿ ವತಿಯಿಂದ ಆನ್‌ಲೈನ್ ತರಬೇತಿ ಆರಂಭವಾಗಲಿದೆ. ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದ್ಭಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.**

# ಬಜೆಟ್‌ನಲ್ಲಿ ಕಾಯಕ ಸಮಾಜಕ್ಕೆ ಆದ್ಯತೆ ನೀಡಲು ಆಗ್ರಹ



ಮೈಸೂರು: ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಕಾಯಕ ಸಮಾಜಗಳ ಕಾಯಕಲ್ಪಕ್ಕೆ ಸರ್ಕಾರ ಆದ್ಯತೆ ನೀಡಬೇಕೆಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ. ಪುಟ್ಟಸಿದ್ದಶೆಟ್ಟಿ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಂವಿಧಾನದ ಪರಿಚ್ಛೇದದ ಅಡಿಯಲ್ಲಿ ಕಾಯಕ ಸಮಾಜಗಳ 102 ಜಾತಿಗಳು ಸಾಮಾಜಿಕ, ಶೈಕ್ಷಣಿಕ,, ಆರ್ಥಿಕವಾಗಿ ಅತಿ ಹಿಂದುಳಿದ ಮತ್ತು ಬಡತನ ರೇಖೆಗಿಂತ ಕಡಿಮೆ ಆದಾಯವಿರುವ ಕುಟುಂಬಗಳಾಗಿವೆ. ವಿಶೇಷವಾಗಿ ಆದಿವಾಸಿಗಳು, ಬುಡಕಟ್ಟು ಸಮುದಾಯದವರು ಈಗಲೂ ಬಹುತೇಕ ಅನಕ್ಷರಸ್ಥರಾಗಿದ್ದಾರೆ. ಇವರಿಗೆ ಮನೆ, ಉಳಲು ಭೂಮಿ ಇಲ್ಲ. ಕಾಡಿನಲ್ಲಿ ಸಿಗುವ ಹಣ್ಣು ಹಂಪಲು, ಗೆಡ್ಡೆ ಗೆಣಸುಗಳು, ಪ್ರಾಣಿ ಪಕ್ಷಿಗಳನ್ನೇ ತಿಂದು ಬದುಕುತ್ತಿದ್ದವರಾಗಿದ್ದರು. ಆದರೆ ಅರಣ್ಯ ಇಲಾಖೆ ಇವರನ್ನು ಬಲವಂತವಾಗಿ ಕಾಡಿನಿಂದ ಹೊರ ದಬ್ಬಿ ಕಿರುಕುಳ ನೀಡಿದೆ. ಇವರಿಗೆ ಒದಗಿಸುತ್ತಿರುವ ಅನುದಾನ ಇತರರ ಪಾಲಾಗುತ್ತಿದೆ. ಹೀಗಾಗಿ ಇವರ ಬಗ್ಗೆ ಬಜೆಟ್ ಗಮನ ಹರಿಸಬೇಕೆಂದು ಕೋರಿದರು.

ಅಲೆಮಾರಿಗಳು, ಅಲೆ ಅಲೆಮಾರಿಗಳಿಗೆ ಸೇರಿದವರ ಪರಿಸ್ಥಿತಿಯೂ ಸಂಕಷ್ಟದಲ್ಲಿದೆ. ಶ್ರಮಿಕ ವರ್ಗಗಳೂ ಇದಕ್ಕೆ ಹೊರತಲ್ಲ, ಇವುಗಳ ಮೂಲ ಕಸುಬು ಮರೆಯಾಗಿವೆ. ಆದ್ದರಿಂದ ಈ ಎಲ್ಲ ವರ್ಗಗಳಿಗಾಗಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ 5 ರಿಂದ 10 ಕೋಟಿ ಬ್ಯಾಂಕ್ ಸಾಲಕ್ಕೆ ಸರ್ಕಾರ ಗ್ಯಾರಂಟಿ ಕೊಡಬೇಕು, ಗುಡಿ ಕೈಗಾರಿಕೆ ಪುನಶ್ಚೇತನಗೊಳಿಸಬೇಕು, ಈ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಾಯಕ ಸಮಾಜಗಳ ಪ್ರಾಧಿಕಾರ ಸ್ಥಾಪಿಸಿ, ಸುಮಾರು 1 ಸಾವಿರ ಮೀಸಲಿಡಬೇಕು. ಬಜೆಟ್ ಪೂರ್ವ ಚರ್ಚೆಗೆ ಒಕ್ಕೂಟವನ್ನೂ ಆಹ್ವಾನಿಸಬೇಕೆಂದು ಆಗ್ರಹಿಸಿದರು. ಕೊಣಸೂರು ಶಿವರಾಜ್, ಎಸ್. ಯೋಗೀಶ್ ಉಪ್ಪಾರ್, ರಮೇಶ್, ಬೋರಪ್ಪಶೆಟ್ಟಿ ಹಾಜರಿದ್ದರು.

# 12ಕ್ಕೆ ಹರಿದಾಸ ಗೀತ ಗಾಯನ

ಮೈಸೂರು: ನಿನಾದ ಯುಕ್ತ ಫೌಂಡೇಷನ್ ವತಿಯಿಂದ ಫೆ. 12 ರಂದು ಸಂಜೆ 5ಕ್ಕೆ ಜೆಎಲ್‌ಬಿ ರಸ್ತೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ದಾಸ ಸಂಭ್ರಮ– ಹರಿದಾಸರ ಪದಗಳ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜ್ ವಿ. ಬೈರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಘುರಾಂ ವಾಜಪೇಯಿ, ಅಂಶಿ ಪ್ರಸನ್ನಕುಮಾರ್, ಎಚ್.ವಿ. ರಾಜೀವ್, ಎಂ.ಕೆ. ಸೋಮಶೇಖರ್ ಅತಿಥಿಗಳಾಗಿರುವರು. ಡಾ.ಎಂ. ಜಗನ್ನಾಥ ಶೆಣೈ ಉದ್ಘಾಟಿಸ ುವರೆಂದರು. ಹಿನ್ನೆಲೆ ಗಾಯಕ ಉಪ್ಪುಂದ ರಾಜೇಶ್ ಪಡಿಯಾರ್ ಮಾತನಾಡಿ, 20 ಗೀತೆಗಳನ್ನು ತಾವು ಹಾಡಲಿದ್ದು, ಡಾ. ದೀಪಿಕಾ ಪಾಂಡುರಂಗಿ ನಿರೂಪಿಸಲಿದ್ದಾರೆ. ಇದೊಂದು ರೀತಿಯ ಹಾಡುಗಳ ಕುರಿತ ವಿವರಣೆಯ ಸಂವಾದ ಕಾರ್ಯಕ್ರಮವೂ ಆಗಿರಲಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಪುರುಷೋತ್ತಮ್, ಬೆಟ್ಟೇಗೌಡ ಇದ್ದರು.

# ಮೋದಿ ನಡೆಗೆ : ಯುವ ಕಾಂಗ್ರೆಸ್ ಅಕ್ರೋಶ



ಚಾಮರಾಜನಗರ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಡೆಯನ್ನು ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಅವರ ನೇತೃತ್ವದಲ್ಲಿ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಮೋದಿ ವಿರುದ್ಧ ಅಕ್ರೋಶ ವ್ಯಕ ಪಡಿಸಿದರು.ಪ್ರತಿಭಟನೆ ನೇತೃತ್ವ ವಹಿಸಿದ್ದ ಸಿ.ಯೋಗೇಂದ್ರ ಮಾತನಾಡಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರ ಆದೇಶದ ಮೇರೆಗೆ ಜೆಫ್ರಿ ಎಪ್‌ಸ್ಟೀನ್ ಫೈಲ್ಸ್ ನಲ್ಲಿ ಭಾರತೀಯ ಪ್ರಧಾ ನಮಂತ್ರಿ ನರೇಂದ್ರಮೋದಿ ಹೆಸರು ಉಲ್ಲೇಖಸ ಲಾಗಿದ್ದು, ಇಸ್ರೇಲ್ ಪ್ರವಾಸದ ಸಂದರ್ಭದಲ್ಲಿ ಟ್ರಂಪ್ ಅವರ ಮುಂದೆ ಮೋದಿ ಡ್ಯಾನ್ಸ್ ಮಾಡಿದ್ದಾರೆಂದು ತಿಳಿಸಲಾಗಿದೆ. ಇದು ನಮ್ಮ ದೇಶದ ಘನತೆ, ಗಾಂಭೀಯತೆಗೆ ಕಪ್ಪು ಚುಕ್ಕಿ ತರುವಂತಹ ಮೋದಿಯವರ ನಡೆಯನ್ನು ಯುವ ಕಾಂಗ್ರೆಸ್ ತೀವ್ರ ಖಂಡಿಸುತ್ತದೆ ಎಂದರು. ಟ್ರಂಪ್ ಅವರ ಕೈಗೊಂಬೆಯಾಗಿದ್ದು, ದೇಶದ ಘನತೆಗೆ ಕಪ್ಪು ಚುಕ್ಕಿ ತಂದಿರುವ ಮೋದಿಯ ವರು ಕೂಡಲೇ ನೈತಿಕ ಹೊಣೆಹೊತ್ತು ರಾಜೀ ನಾಮೆ ನೀಡಬೇಕು ಇಲ್ಲದಿದ್ದರೆ ಯುವ ಕಾಂಗ್ರೆಸ್ ದೇಶಾದ್ಯಂತ ಉಗ್ರಹೋರಾಟ ಮಾಡುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಯೋಗೇಂದ್ರ, ಸಿ, ಚಂದನ್, ಶ್ರೀನಿವಾಸ್,ನವೀನ್, ದರ್ಶನ್, ಶಶಾಂಕ್, ಮನು, ಸಿದ್ದು, ಅಕ್ಷಯ್, ಆನಂತ್, ಅಪ್ಪು, ಕಿರಣ್ ಗಿಡ್ಡಯ್ಯ, ಪ್ರದೀಪ್,ಸಚಿನ್, ಅಪ್ಪು, ಕಾರ್ತಿಕ, ವಿಕಾಸ್, ಮಣಿ ರಾಜು, ನಿರಂಜನ್, ಮಲ್ಲೇಶ್ ಇತರರು ಭಾಗವಹಿಸಿದ್ದರು.

# ದೆಹಲಿ ಚಲೋ: ಜಿಲ್ಲೆಯಿಂದ 55 ಮಂದಿ

ಚಾಮರಾಜನಗರ, ವಿಶ್ವಶಾಂತಿ, ಬೌದ್ಧರ ಪ್ರವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡುವಂತೆ ಒತ್ತಾಯಿಸಿ ಫೆ. 12 ರಿಂದ 14 ರ ತನಕ ನಡೆಯುವ ದೆಹಲಿ ಚಲೋಗೆ ಜಿಲ್ಲೆಯಿಂದ 55 ಮಂದಿ ಉಪಾಸಕರ ತಂಡ ರೈಲಿನಲ್ಲಿ ತೆರಳಿತು.

ಸೋಮವಾರ ಬೆಳಿಗ್ಗೆ ನಗರದ ರೈಲ್ವೆ ನಿಲ್ದಾಣದಿಂದ ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಹೊರಟ ತಂಡಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್ ಇತರರ ಬೀಳ್ಕೊಟ್ಟು ಶುಭ ಕೋರಿದರು. ನಮ್ಮದು ಬೌದ್ಧರ ಪ್ರವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಎಂದು ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ಉಪಾಸಕರಾದ ಸಿ.ಎಂ. ಕೃಷ್ಣಮೂರ್ತಿ ಮಾತನಾಡಿ, ವಿಶ್ವಶಾಂತಿ, ಬೌದ್ಧರ ಪ್ರವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡುವಂತೆ




ಒತ್ತಾಯಿಸಿ ಫೆ. 12, 13, 14 ಮೂರು ದಿನಗಳ ಕಾಲ ದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಸಮಾವೇಶ, ಬೃಹತ್ ರ್ಯಾಲಿ ನಡೆಯುತ್ತದೆ. ಆಗಾಗಿ ಜಿಲ್ಲೆಯಿಂದಲ್ಲೂ 55 ಮಂದಿ ಉಪಾಸಕರು ಭಾಗವಹಿಸುತ್ತಿದ್ದಾರೆ. ಸರ್ಕಾರ ಬೌದ್ಧರ ಪ್ರವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡಬೇಕು ಎಂದು ಒತ್ತಾಯಿಸಿದರು. ಉಪಾಸಕರಾದ ದಡದಹಳ್ಳಿ ಶಂಕರ್, ಎಂ.ಸಿದ್ದರಾಜು ಸೋಮವಾರಪೇಟೆ, ನಾಗರಾಜು ಜ್ಯೋತಿಗೌಡನಪುರ, ಸಣ್ಣಮಣಿ ಕೊಳ್ಳೇಗಾಲ, ವಿ.ಸೋಮಣ್ಣ ರಾಮಸಮುದ್ರ, ಬಿ.ಮಲ್ಲೇಶ್, ಬಂಗಾರಸ್ವಾಮಿ ರಾಮಸಮುದ್ರ, ಸೇರಿದಂತೆ 55 ಮಂದಿ ತಂಡ ತೆರಳಿತು.

# ಚಿರತೆ ದಾಳಿ ಕರು ಸಾವು

ಗುಂಡ್ಲುಪೇಟೆ: ತಾಲ್ಲೂಕಿನ ಹಂಗಳಾಪುರ ಗ್ರಾಮದ ಕರುಣಾಕುಮಾರ್ ಎಂಬುವವರ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಕರುವಿನ ಮೇಲೆ ಚಿರತೆ ಎರಗಿ ಕೊಂದುಹಾಕಿರುವ ಘಟನೆ ನಡೆದಿದೆ.

ಕೆಲವು ಹಿಂದೆ ಹಂಗಳಾಪುರ ಗ್ರಾಮದಲ್ಲಿ ಕಬ್ಬಿನ ಗದ್ದೆಯಲ್ಲಿ ಚಿರತೆ ಮರಿಗಳು ಸಿಕ್ಕಿದ್ದವು ಅನೇಕ ಜಾನುವಾರುಗಳ ಮೇಲೆ ಚಿರತೆ ದಾಳಿ ಮಾಡಿರುವ ಉದಾಹರಣೆಗಳಿದ್ದು ಅದಷ್ಟು ಬೇಗ ಚಿರತೆ ಸೆರೆಹಿಡಿಯುವಂತೆ ಗ್ರಾಮದ ರ?ತ ಮುಖಂಡ ಉಮೇಶ್ ಒತ್ತಾಯಿಸಿದರು ಹಾಗೆ ಕರು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದರು.



**ಚಂದ್ರು ಡಯಾಗ್ನೋಸ್ಟಿಕ್ ಮಾಲೀಕ ಚಂದ್ರೇಗೌಡ ಹೇಳಿಕೆ**

# ರಕ್ತದೊತ್ತಡ, ಮಧುಮೇಹಿಗಳಿಗೆ ರಿಯಾಯಿತಿ ದರಗಳಲ್ಲಿ ರಕ್ತಪರೀಕ್ಷೆ

ರಾಮನಗರ: ವೈದ್ಯಕೀಯ ಚಿಕಿತ್ಸೆಗೆ ಅನುಕೂಲವಾಗುವಂತೆ ರಕ್ತ ಪರೀಕ್ಷೆ ಮುಂತಾದ ಪರೀಕ್ಷೆಗಳು ಅವಶ್ಯಕವಾಗಿವೆ. ವಿಶೇಷವಾಗಿ ಡಯಾಬಿಟಿಸ್ ಮತ್ತು ಅಧಿಕ ರಕ್ತದೊತ್ತಡದ ರೋಗಿಗಳಿಗೆ ವರ್ಷಕ್ಕೆ ಎರಡು ಬಾರಿ ಕಡ್ಡಾಯವಾಗಿ ಇಂತಹ ಪರೀಕ್ಷೆ ಮಾಡಿಸಲು ವೈದ್ಯರು ಸೂಚಿಸುವುದುಂಟು. ಕೆಲವರಿಗೆ ಆರ್ಥಿಕ ಸಮಸ್ಯೆಯಿಂದ ಸಾಧ್ಯವಾಗದಿರಬಹುದು, ಹೀಗಾಗಿ ರಿಯಾಯಿತಿ ದರಗಳಲ್ಲಿ ಪರೀಕ್ಷೆ ಮಾಡಲು ಆರೋಗ್ಯಂ ಯೋಜನೆ ರೂಪಿಸಿರುವುದಾಗಿ ನಗರದಲ್ಲಿ ಚಂದ್ರು ಡಯಾಗ್ನೋಸ್ಟಿಕ್ ಮಾಲೀಕ ಚಂದ್ರೇಗೌಡ ತಿಳಿಸಿದರು.

ನಗರದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಬಿ.ಪಿ.ಪ್ರೋಫೈಲ್‌ಗೆ 9 ಪ್ರಮುಖ ಪರೀಕ್ಷೆಗಳಿವೆ. ಇದಕ್ಕೆ ಕನಿಷ್ಠ 2500ರೂ ವೆಚ್ಚವಾಗುತ್ತದೆ. ಆದರೆ ಆರೋಗ್ಯಂ ಯೋಜನೆಯಡಿ ಇದು 1500ರೂಗಳಿಗೆ ಲಭ್ಯವಾಗುತ್ತಿದೆ. ಡಯಾಬಿಟಿಸ್ ಪ್ರೋಫೈಲ್‌ನಲ್ಲಿ 9 ಪರೀಕ್ಷೆಗಳಿವೆ. ಇದಕ್ಕೆ ಸಾಮಾನ್ಯವಾಗಿ 1900ರೂ ವೆಚ್ಚವಾಗುತ್ತದೆ. ತಾವು ಆರಂಭಿಸಿರುವ ಆರೋಗ್ಯಂ ಯೋಜನೆಯಡಿಯಲ್ಲಿ




1000ರೂಗಳಿಗೆ ಈ ಪರೀಕ್ಷೆ ಸಿಗಲಿದೆ. ಎರಡೂ ಪ್ರೋಫೈಲ್‌ಗಳನ್ನು ಸೇರಿಸಿ ಜನರಲ್ ಹೆಲ್ತ್ ಪ್ಯಾಕೇಜ್ ರೂಪಿಸಲಾಗಿದ್ದು, 2100ರೂಗಳಿಗೆ ಸಿಗಲಿದೆ. ಈ ನಿಗದಿತ ಶುಲ್ಕಗಳನ್ನು ಮೊದಲೇ ಪಾವತಿಸಬೇಕು. ವರ್ಷಕ್ಕೆ ಎರಡು ಬಾರಿ ಪರೀಕ್ಷೆ ಮಾಡುವುದಾಗಿ ಅವರು ತಿಳಿಸಿದರು.

ಇದಲ್ಲದೆ ಆರೋಗ್ಯಂ ಯೋಜನೆಯಡಿ ಚಂದಾದಾರಾದರೆ, ತಮ್ಮ ಡಯಾಗ್ನೋಸ್ಟಿಕ್ ಲ್ಯಾಬ್‌ನಲ್ಲಿ ಸಿಗುವ ಇತರೆ ಪರೀಕ್ಷೆಗಳಲ್ಲೂ ರಿಯಾಯಿತಿ ನೀಡುವುದಾಗಿ ಅವರು ತಿಳಿಸಿದರು. ಸಾರ್ವಜನಿಕರು ಈ ಯೋಜನೆಯ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

**ಅಧುನಿಕ ತಂತ್ರಜ್ಞಾನ ಅಳವಡಿಕೆ**

ಜಿಲ್ಲೆಯಲ್ಲಿ ಮೂರು ದಶಕಗಳಿಂದ ತಾವು ಡಯಾಗ್ನೋಸ್ಟಿಕ್ ಪ್ರಯೋಗಾಲಯ ನಡೆಸುತ್ತಿರುವುದಾಗಿ, ಈ ಕ್ಷೇತ್ರದ ಅಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದರು. ಎಂ.ಆರ್.ಐ ಸ್ಕ್ಯಾನಿಂಗ್ ಮುಂತಾದ ಅಧುನಿಕ ಸಾಧನಗಳು ತಮ್ಮಲ್ಲಿವೆ ಎಂದು ಅವರು ತಿಳಿಸಿದರು.

## ಗರ್ಭಿಣಿಯರಿಗೆ ರಿಯಾಯಿತಿ ದರದಲ್ಲಿ ರಕ್ತ ಪೂರೈಕೆ

**ರಕ್ತ ದಾನ ಮಾಡಿದ ನಂತರ ಅದನ್ನು ಬೇರೊಬ್ಬರಿಗೆ ಕೊಡುವ ಮುನ್ನ ಕೆಲವೊಂದು ಅತ್ಯವಶ್ಯಕ ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಇದಕ್ಕೆ 1500ರೂಗಳು ವೆಚ್ಚವಾಗುತ್ತವೆ. ಸಾಮಾನ್ಯವಾಗಿ ಎಲ್ಲ ರಕ್ತ ನಿಧಿಗಳು ಈ ಶುಲ್ಕವನ್ನು ಪಡೆದು ರಕ್ತದ ಪ್ಯಾಕೆಟ್ ನೀಡುತ್ತಾರೆ. ಆದರೆ ತಾವು ಗರ್ಭಿಣಿಯರಿಗೆ ತಮ್ಮ ಜೀವಾಮೃತ ರಕ್ತ ನಿಧಿಯ ಮೂಲಕ ಕೇವಲ 800ರೂ ಪಡೆದು ರಕ್ತದ ಪ್ಯಾಕೆಟ್ ನೀಡುವುದಾಗಿ ತಿಳಿಸಿದರು. ಬ್ಲಡ್ ಫ್ರೀ ಫೌಂಡೇಷನ್ ಮೂಲಕ ಜಿಲ್ಲಾಸ್ಪತ್ರೆಗೆ ಪ್ರತಿ ತಿಂಗಳು 100 ಯೂನಿಟ್ ರಕ್ತ, ಬೆಂಗಳೂರಿನಲ್ಲಿರುವ ಕಿದ್ವಾಯಿ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ ವಾರ್ಷಿಕ ತಲಾ 100 ಯೂನಿಟ್ ರಕ್ತ ಪೂರೈಸಬೇಕು ಎಂಬುದು ತಮ್ಮ ಆಶಯ ಎಂದರು.**

# ಮಾದಿಗ ಸಮಾಜಕ್ಕೆ ರಾಜಕೀಯ ಉತ್ತಮ ಸ್ಥಾನ ನೀಡುವೆ: ಕೆ.ಎಂ.ಕೃಷ್ಣನಾಯಕ

ಎಚ್.ಡಿ.ಕೋಟೆ: ತಾಲೂಕಿನಲ್ಲಿ ಮಾದಿಗ ಸಮುದಾಯ ರಾಜಕೀಯವಾಗಿ ಹಿಂದೆ ಇರುವುದರಿಂದ, ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷದಲ್ಲಿ ಉತ್ತಮ ಸ್ಥಾನ ಕಲ್ಪಿಸುವ ಕೆಲಸ ಮಾಡುತ್ತೇನೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕ ಮಾದಿಗ ಸಮುದಾಯದ ಮುಖಂಡರಿಗೆ ತಿಳಿಸಿದರು.

ಮಾದಾಪುರ ಗ್ರಾಮದಲ್ಲಿ ನಡೆದ ಮಾದಿಗ ಮುಖಂಡರ ಸಭೆಯಲ್ಲಿ ಮಾತನಾಡಿ, ಮಾದಿಗ ಸಮಾಜ ತಾಲೂಕಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಹಿಂದೆ ಉಳಿದಿದ್ದು, ಮುಂದಿನ ದಿನಗಳಲ್ಲಿ ನಿಮ್ಮ ಸಮಾಜಕ್ಕೆ ನ್ಯಾಯವನ್ನು ದೊರಕಿಸುವ ಕೆಲಸವನ್ನು ಮಾಡುತ್ತೇನೆ. ನಿಮ್ಮ ಸಮಾಜದ ಬೇಡಿಕೆಗಳನ್ನು ಈಡೇರಿಸಲು, ನಿಮ್ಮ ಕಷ್ಟ, ಸುಖಗಳಲ್ಲಿ ಭಾಗವಹಿಸಲು ಜೆಡಿಎಸ್ ಪಕ್ಷವನ್ನು ಬೆಂಬಲಿಸಿ, ನಾನು ನಿಮ್ಮ ಸಮಾಜವನ್ನು ಗುರುತಿಸುತ್ತೇನೆ ಎಂದು ಹೇಳಿದರು.

ಹತ್ತು ವರ್ಷದಲ್ಲಿ ನಾನು ಯಾವುದೇ ಸಮಾಜವನ್ನು ವಿಂಗಡಿಸಿಲ್ಲ. ಸಮಾಜವಾರು ಸಭೆಗಳನ್ನು ಮಾಡಿ ಎಲ್ಲರ ಕಷ್ಟ ಸುಖವನ್ನು ತಿಳಿದು ಮುಂದಿನ ದಿನಗಳಲ್ಲಿ ಅವರಿಗೆ ನ್ಯಾಯ ದೊರಕಿಸಬೇಕು ಎಂದು ತೀರ್ಮಾನಿಸಿದ್ದೇನೆ. ಆದ್ದರಿಂದ, ತಾವೆಲ್ಲರೂ ಪಕ್ಷವನ್ನು ಅಧಿಕಾರಕ್ಕೆ



ತರುವಲ್ಲಿ ಒಗ್ಗಟ್ಟಾಗಿ ಹೋರಾಟ ಮಾಡುವ ಮೂಲಕ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

ಈಗಾಗಲೇ ರಾಜ್ಯ ಕಾಂಗ್ರೆಸ್ ಸರ್ಕಾರ ನಿಮ್ಮ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಎಸ್,ಇ,ಪಿ, ಟಿಎಸ್‌ಪಿ ಹಣವನ್ನು ದುರುಪಯೋಗ ಪಡಿಸಿಕೊಂಡಿದೆ. ಎಸ್.ಸಿ, ಎಸ್.ಟಿ ಗುತ್ತಿಗೆದಾರರಿಗೆ ಅನ್ಯಾಯ ಮಾಡುತ್ತಿದೆ. ಇದೆಲ್ಲವನ್ನು ಸರಿಪಡಿಸಬೇಕಾದರೆ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯಾದರೆ ನಿಮ್ಮ ಸಮಾಜಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ ಮಾತನಾಡಿ, ತಾಲೂಕಿನಲ್ಲಿ ತಳ ಸಮುದಾಯಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಸುಮಾರು 10 ವರ್ಷಗಳಿಂದ ಯಾವುದೇ ಅಧಿಕಾರ ಇಲ್ಲದಿದ್ದರೂ ಜನರ ಕಷ್ಟ ಸುಖದಲ್ಲಿ ಭಾಗಿಯಾಗಿ ಕೈಲಾದಷ್ಟು ಸಹಾಯ ಮಾಡುತ್ತಿರುವ ಕೆ.ಎಂ.ಕೃಷ್ಣ ನಾಯಕ ಅವರಿಗೆ ಮಾದಿಗ ಸಮುದಾಯ ಸಂಪೂರ್ಣವಾಗಿ ಬೆಂಬಲವನ್ನು ನೀಡಬೇಕು. ಮುಂದಿನ ದಿನಗಳಲ್ಲಿ ನಿಮಗೆ ರಾಜಕೀಯವಾಗಿ ಉತ್ತಮ ಸ್ಥಾನಮಾನಗಳನ್ನು ಕೊಡುವ ಕೆಲಸವನ್ನು ಪಕ್ಷ ಮಾಡುತ್ತದೆ ಎಂದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಎಚ್.ಹನು ಮಾತನಾಡಿ, ತಾಲೂಕಿನಲ್ಲಿ ಶಾಸಕರಾಗುವ ಜನಪ್ರಿಯತೆ ಕೆ.ಎಂ.ಕೃಷ್ಣ ನಾಯಕರಿಗಿದೆ. ಸಮಾಜ ಸೇವೆ ಮಾಡುವುದಕ್ಕೋಸ್ಕರವೇ ಅಪ್ಪಾಜಿ ಕ್ಯಾಂಟೀನ್ ಮೂಲಕ ಬಡವರಿಗೆ, ವಿದ್ಯಾರ್ಥಿಗಳಿಗೆ ಕೂಲಿ ಕಾರ್ಮಿಕರಿಗೆ ಕಡಿಮೆ ಖರ್ಚಿನಲ್ಲಿ ಹಸಿದವರ ಹೊಟ್ಟೆ ತುಂಬಿಸಿದ್ದಾರೆ. ಕೊರೋನಾ ಸಮಯದಲ್ಲಿ ಉಚಿತ ಆಂಬುಲೆನ್ಸ್ ನೀಡಿ, ಸುಮಾರು 28.000 ಫುಡ್ ಕಿಡ್ ಕೊಟ್ಟ ಏಕೈಕ ನಾಯಕ ಕೆ.ಎಂ.ಕೃಷ್ಣ ನಾಯಕ. ಸಣ್ಣ ಪುಟ್ಟ ತಪ್ಪುಗಳನ್ನ ಮರೆತು ಮುಂದಿನ ದಿನಗಳಲ್ಲಿ ಮಾದಿಗ ಸಮುದಾಯ ಜೆಡಿಎಸ್ ಪಕ್ಷವನ್ನು ಬೆಂಬಲಿಸಿ ಕೆ.ಎಂ.ಕೃಷ್ಣ ನಾಯಕ ಅವರನ್ನು ಶಾಸಕರನ್ನಾಗಿ ಮಾಡಬೇಕು ಎಂದು ಕಿವಿ ಮಾತು ಹೇಳಿದರು.

ಮುಖಂಡ ಶಿವಯ್ಯ ಮಾತನಾಡಿ, ಕೊರೋನಾ ಸಮಯದಲ್ಲಿ ಕೃಷ್ಣ ನಾಯಕ ಅವರು ಸುಮಾರು 25 ರಿಂದ 40,000 ಆಹಾರ ಕಿಟ್ ವಿತರಣೆ ಮಾಡಿ, ತಾಲೂಕಿನಲ್ಲಿ ತಮ್ಮದೇ ಆದ ಸಾಮಾಜಿಕ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದು, ಮಾದಿಗ ಸಮುದಾಯ ಜೆಡಿಎಸ್ ಪಕ್ಷವನ್ನು ಬೆಂಬಲಿಸಿ ನಿಮ್ಮ ಕೈ ಬಲ ಪಡಿಸುವುದರ ಜೊತೆಗೆ ನಿಮ್ಮ ಬೆನ್ನೆಲುಬಾಗಿರುತ್ತದೆ ಎಂದು



> ಶಿಕ್ಷಣದ ಹಕ್ಕು, ಮತದಾನದ ಹಕ್ಕು ಭೂಮಿಯ ಹಕ್ಕು ಕೊಟ್ಟಿದ್ದು, ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಗೌರವ ಕೊಡುವ ಕೆಲ ಸವನ್ನು ಮಾಡಲಿಲ್ಲ. 100–200 ರೂಪಾಯಿಗಳಿಗೆ ನಿಮ್ಮ ಮತವನ್ನು ಮಾರಿಕೊಳ್ಳದೆ ಸಮುದಾಯದ ಹಿತ ಕಾಯುವ ಕೆ.ಎಂ. ಕೃಷ್ಣನಾಯಕ ಅವರಿಗೆ ಮಾದಿಗ ಸಮುದಾಯ ಬೆಂಬಲ ನೀಡಬೇಕು.
>
> –ಡಿ.ನಾಗರಾಜು ಜೆಡಿಎಸ್ ಮುಖಂಡ

ಹೇಳಿದರು. ಜೆಡಿಎಸ್ ಎಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಿ.ಕಾಳಪ್ಪಾಜಿ, ಮುಳ್ಳೂರು ನಿಂಗರಾಜು, ಕೆಟಿಎಸ್ ವಿನೋದ್, ಶಿವಾಜಿ, ಸಿಂಗಯ್ಯ, ಒಳಮೀಸಲಾತಿ ಹೋರಾಟಗಾರ ಪುಟ್ಟಣ್ಣ, ಶ್ರೀನಿವಾಸ್ ಶಿವಲಿಂಗಯ್ಯ, ರಮೇಶ್, ಮಲ್ಲೇಶ್, ಜಯಕುಮಾರ್ ಸೇರಿದಂತೆ ಅಕ್ಕಪಕ್ಕ ಗ್ರಾಮದ ಮಾದಿಗ ಸಮುದಾಯದ ಮುಖಂಡರು ಯುವಕರು ಇದ್ದರು.

ಮೊದಲ ಪುಟದಿಂದ

## ಸಿಬಿಐಗೆ ಹೈಕೋರ್ಟ್ ನೋಟಿಸ್

ಮಹಾನಿರ್ದೇಶಕರು, ಪಶ್ಚಿಮ ವಿಭಾಗದ ಪೊಲೀಸ್ ಮಹಾನಿರ್ದೇಶಕರು, ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ, ಸಿಬಿಐ ದೆಹಲಿ ಮತ್ತು ಚೆನ್ನೈ ವಿಭಾಗದ ವಿಶೇಷ ತನಿಖಾ ದಳಕ್ಕೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಫೆಬ್ರವರಿ 23ಕ್ಕೆ ಮುಂದೂಡಿದೆ.

ಪ್ರಕರಣದ ಹಿನ್ನೆಲೆ: ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಸೌಜನ್ಯ 2012ರ ಅಕ್ಟೋಬರ್ 9ರಂದು ನಾಪತ್ತೆಯಾಗಿದ್ದರು. ಮರು ದಿನ ಮೃತ ವಿದ್ಯಾರ್ಥಿನಿಯ ದೇಹವು ಮಣ್ಣಸಂಕ ಬಳಿ ಪತ್ತೆಯಾಗಿತ್ತು. ಆಕೆಯ ಮೇಲೆ ಅತ್ಯಾಚಾರ ಮಾಡಿ, ಕೊಲೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಬೆಳ್ತಂಗಡಿ ಠಾಣೆಯಲ್ಲಿ ಮೊದಲಿಗೆ ಆಕೆಯ ತಂದೆ ಚಂದ್ರಪ್ಪ ಗೌಡ ಅವರು ತನ್ನ ಎರಡನೇ ಪುತ್ರಿ ಸೌಜನ್ಯ ನಾಪತ್ತೆಯಾಗಿದ್ದಾರೆ ಎಂದು ದೂರು ನೀಡಿದ್ದರು. ಆನಂತರ ಅದನ್ನು ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನಾಗಿ ಪರಿವರ್ತಿಸಲಾಗಿತ್ತು. 2013ರಲ್ಲಿ ಪ್ರಕರಣವು ಸಿಬಿಐಗೆ ವರ್ಗಾವಣೆಗೊಂಡಿದ್ದು, 2015ರಲ್ಲಿ ಪ್ರಕರಣವು ಮಂಗಳೂರಿನಿಂದ ಬೆಂಗಳೂರಿನ ಸಿಬಿಐ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತ್ತು. ಇದರ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಿ ಬಿ ಸಂತೋಷ್ ಅವರು ಪ್ರಕರಣದಲ್ಲಿನ ಆರೋಪಿ ಸಂತೋಷ ರಾವ್ ಅವರನ್ನು ಅತ್ಯಾಚಾರ (ಐಪಿಸಿ ಸೆಕ್ಷನ್ 376) ಮತ್ತು ಕೊಲೆ (ಐಪಿಸಿ ಸೆಕ್ಷನ್ 302) ಪ್ರಕರಣದಲ್ಲಿ ನಿರ್ದೋಷಿ ಎಂದು ಘೋಷಿಸಿತ್ತು. ಅಲ್ಲದೇ, 11 ವರ್ಷಗಳಿಂದ ಜೈಲಿನಲ್ಲಿದ್ದ ಸಂತೋಷ್ ರಾವ್‌ನನ್ನು ತಕ್ಷಣ ಬಿಡುಗಡೆ ಮಾಡುವಂತೆ ನಿರ್ದೇಶಿಸಿತ್ತು. ಅಲ್ಲದೇ, ಕಳಪೆ ಮತ್ತು ದೋಷಪೂರಿತ ತನಿಖೆ ನಡೆಸಿರುವ ಮತ್ತು ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಈ ಪ್ರಕರಣವನ್ನು ಖುಲಾಸೆ ಸಮಿತಿಯ ಮುಂದೆ ಇಡಬೇಕು ಎಂದು ನಿರ್ದೇಶಿಸಿತಲ್ಲದೇ ತನಿಖೆಯಲ್ಲಿ ವೈಜ್ಞಾನಿಕ ಸಾಕ್ಷಿಯು ವಿಫಲವಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು. ವಿಚಾರಣಾಧೀನ ನ್ಯಾಯಾಲಯ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

## ಫೆ.12 ರಂದು ತೀರ್ಮಾನ

ಸಚಿವ ಡಾ. ಜಿ ಪರಮೇಶ್ವರ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಅನುಮತಿ ಪಡೆಯುವ ಸಂಬಂಧ ಇಂದು ಕೆಎಸ್‌ಸಿಎ ಹಾಗೂ ಆರ್‌ಸಿಬಿ ಮ್ಯಾನೇಜ್ಮೆಂಟ್ ಗೃಹ ಸಚಿವ ಪರಮೇಶ್ವರ್ ಅವರನ್ನು ಭೇಟಿ ಮಾಡಿತು. ಈ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ನಡೆಸುವ ಕುರಿತು ಚರ್ಚೆ ನಡೆಯಿತು. ಗೃಹ ಸಚಿವ ಜಿ ಪರಮೇಶ್ವರ ಭೇಟಿ ಬಳಿಕ ಮಾತನಾಡಿದ ವೆಂಕಟೇಶ್ ಪ್ರಸಾದ್, ಫೆಬ್ರವರಿ 12 ರಂದು ರಾಜ್ಯ ಸರ್ಕಾರ ನೇಮಿಸಿದ ಸಮಿತಿಯೊಂದಿಗೆ ಮತ್ತೊಂದು ಸುತ್ತಿನ ಸಭೆ ನಡೆಸಿ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದ್ದಾರೆ.

## ರಾಜ್ಯದ ಐದು ಜಿಲ್ಲೆಗಳಲ್ಲಿ ಕ್ಯಾನ್ಸರ್ ಪ್ರಕರಣ ಹೆಚ್ಚು: ದ.ಕ ಜಿಲ್ಲೆ ಪ್ರಥಮ

ಶೂನ್ಯ ವರದಿ ಮಾಡಿದ್ದರೂ ಸಹ, ರೋಗನಿರ್ಣಯ ಪ್ರಕರಣಗಳಲ್ಲಿ ಅಸಮಾನ ಪಾಲನ್ನು ಹೊಂದಿವೆ ಎಂದು ಲೋಕಸಭಾ ದತ್ತಾಂಶಗಳು ತಿಳಿಸಿವೆ. ಪ್ರಕರಣಗಳು ಎಲ್ಲಿ ? ಎಷ್ಟು ? : 2020–21 ಮತ್ತು 2024–25ರ ನಡುವೆ, ದಕ್ಷಿಣ ಕನ್ನಡದಲ್ಲಿ ಒಟ್ಟು 3,432 ಬಾಯಿ, ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಪ್ರಕರಣಗಳನ್ನು ವರದಿ ಮಾಡಿದೆ. ಕಲ್ಬುರ್ಗಿಯಲ್ಲಿ 3,397 ಪ್ರಕರಣಗಳು ದಾಖಲಾಗಿದ್ದರೆ, ಹಾಸನದಲ್ಲಿ 2,436 ಪ್ರಕರಣಗಳು ದಾಖಲಾಗಿವೆ. ವರ್ಷದಿಂದ ವರ್ಷಕ್ಕೆ ಏರಿಕೆ: ದಕ್ಷಿಣ ಕನ್ನಡದ ದತ್ತಾಂಶವು ಒಂದು ವರ್ಷದ ಅವಧಿಯಲ್ಲಿ ಗಣನೀಯ ಏರಿಕೆಯನ್ನು ಬಹಿರಂಗಪಡಿಸಿದೆ. 2022–23ರಲ್ಲಿ ಪರೀಕ್ಷಿಸಲಾದ 16,41,913 ರಲ್ಲಿ 18 ಪ್ರಕರಣಗಳು ಮತ್ತು 2023–24ರಲ್ಲಿ ಪರೀಕ್ಷಿಸಲಾದ 41,088 ರಿಂದ 67 ಕೇಸ್ ಪತ್ತೆಯಾಗಿವೆ. 2024–25ರಲ್ಲಿ ಕೇವಲ 3,328 ಪ್ರಕರಣಗಳಿದ್ದು 70,033 ಕ್ಕೆ ಏರಿದೆ. ಕಲ್ಬುರ್ಗಿಯಲ್ಲಿ 2021–22ರಲ್ಲಿ 1,112 ಪ್ರಕರಣಗಳು ಮತ್ತು 2022–23ರಲ್ಲಿ 2,073 ಪ್ರಕರಣಗಳು ಕಂಡುಬಂದವು, ನಂತರ 2023–24ರಲ್ಲಿ 182ರಿಂದ 2024–25ರಲ್ಲಿ 30 ಕ್ಕೆ ಇಳಿದವು. ಹಾಸನದಲ್ಲಿ ಆರಂಭಿಕ ಪತ್ತೆ ಕಡಿಮೆಯಾಗಿದ್ದು, 2023–24ರಲ್ಲಿ 2,224 ಕ್ಕೆ ಏರಿಕೆಯಾಯಿತು, ನಂತರ 2024–25ರಲ್ಲಿ 99 ಪ್ರಕರಣಗಳು ಕಂಡುಬಂದಿವೆ.

# ಸೌರಶಕ್ತಿಯಿಂದ ಹೆಚ್ಚಿನ ಲಾಭ

## ಇಇ ಪ್ರದೀಪ್ ಹೇಳಿಕೆ । ಸುರಕ್ಷತಾ ಅರಿವು ಕಾರ್ಯಕ್ರಮ

ಚಾಮರಾಜನಗರ: ರೈತರು ಹಾಗೂ ಗ್ರಾಹಕರು ಸೌರ ಶಕ್ತಿಯ ಮೂಲಕ ವಿದ್ಯುತ್ ಉತ್ಪಾದನೆ ಮಾಡಿ.ಮನೆ ಹಾಗೂ ಪಂಪ್‌ಸೆಟ್‌ಗಳಿಗೆ ಬಳಕೆ ಮಾಡಿಕೊಳ್ಳುವ ಮೂಲಕ ವಿದ್ಯುತ್ ಅಭಾವವನ್ನು ತಪ್ಪಿಸುವ ಜೊತೆಗೆ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ವಿದ್ಯುತ್ ಪ್ರಸರಣ ವಿಭಾಗದ ಕಾರ್ಯಪಾಲಕ ಅಭಿಯಂತರ (ವಿದ್ಯುತ್) ಪ್ರದೀಪ್ ತಿಳಿಸಿದರು.

ತಾಲೂಕಿನ ಹರದನಹಳ್ಳಿ ಉಪ ವಿಭಾಗದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಾರ್ವಜನಿಕ ವಿದ್ಯುತ್ ಸೇವೆಗಳು ಹಾಗೂ ಸುರಕ್ಷತಾ ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದಿನನಿತ್ಯ ವಿದ್ಯುತ್ ಬಳಕೆ ಹೆಚ್ಚಾಗುತ್ತಿದೆ. ವಿದ್ಯುತ್ ಉತ್ಪಾದನೆ ಹಾಗೂ ಹಂಚಿಕೆ ಬಹಳ ಕಷ್ಟವಾಗುತ್ತಿದೆ. ಹೀಗಾಗಿ ಸೂರ್ಯ ಕಿರಣದಿಂದ ವಿದ್ಯುತ್ ಪಡೆದುಕೊಳ್ಳುವ ವಿಧಾನವನ್ನು ನಿಗಮದಿಂದಲೇ ಪರಿಚಯಿಸಲಾಗುತ್ತಿದೆ. ರೈತರು ಹಾಗೂ ಗ್ರಾಹಕರು ತಮ್ಮ ಮನೆ ಹಾಗೂ ಜಮೀನಿನಲ್ಲಿ ಸೌರ ವಿದ್ಯುತ್ ಘಟಕವನ್ನು ಅಳವಡಿಸಿಕೊಂಡರೆ ರಿಯಾಯಿತಿಯನ್ನು ನೀಡಲಾಗುತ್ತದೆ. ನಿಗಮಕ್ಕೆ ವಿದ್ಯುತ್ ನೀಡಿದರೆ ಯುನಿಟ್ ಲೆಕ್ಕದಲ್ಲಿ ಹಣವನ್ನು ನೀಡಲಾಗುತ್ತದೆ. ಹೀಗಾಗಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಆರ್ಥಿಕ ಅಭಿವೃದ್ಧಿಯನ್ನು ಸಹ ಹೊಂದಲು ಈ ಯೋಜನೆಗಳು ಸಹಕಾರಿಯಾಗಿವೆ ಎಂದರು.

ಪ್ರಧಾನ ಮಂತ್ರಿ ಸೌರ ಗೃಹ ಉಚಿತ ವಿದ್ಯುತ್ ಯೋಜನೆಯಡಿಯಲ್ಲಿ ಗ್ರಾಹಕರ ಮನೆಗಳ ಮೇಲ್ಛಾವಣಿ ಯಲ್ಲಿಯೇ ಸೋಲರ್ ಪೆನಲ್‌ಗಳನ್ನು ಅಳವಡಿಸಿಕೊಂಡು ತಮ್ಮ ಮನೆಗೆ ಅಗತ್ಯವಾದ ವಿದ್ಯುತ್ ಅನ್ನು ಸೌರ ಶಕ್ತಿಯ ಮೂಲಕ ಪಡೆದುಕೊಳ್ಳಬಹುದಾಗಿದೆ.ಸಂಗ್ರಹವಾಗ ಹೆಚ್ಚುವರಿ ವಿದ್ಯುತ್ ಅನ್ನು ನಿಗಮಕ್ಕೆ ನೀಡಿದರೆ, ಗ್ರಾಹಕರಿಗೆ ಹಣ ಪಾವತಿ ಮಾಡುತ್ತೇವೆ. ಯುನಿಟ್‌ಗಳ ಲೆಕ್ಕದಲ್ಲಿ ಸೋಲಾರ್ ಶಕ್ತಿಯನ್ನು ಅಳವಡಿಸ



ಕೊಳ್ಳಲು ಅವಕಾಶವಿದೆ. ಶೇಕಡ

ರೈತರು ಸಹ ತಮ್ಮ ಪಂಪ್‌ಸೆಟ್‌ಗಳಿಗೆ ಸೌರ ವಿದ್ಯುತ್ ಶಕ್ತಿ ಘಟಕವನ್ನು ಅಳವಡಿಸಿಕೊಂಡರೆ, ಬೆಳಗಿನ ಸಮಯದಲ್ಲಿಯೇ ತೋಟ ಹಾಗೂ ಗದ್ದೆಗಳಿಗೆ ನೀರು ಹಾಯಿಸಿಕೊಳ್ಳಲು ಸಹಕಾರಿಯಾಗುತ್ತದೆ. 1 ರಿಂದ 2 ಕಿ.ವ್ಯಾಟ್ಸ್ ವಿದ್ಯುತ್‌ಗೆ ಸಬ್ಸಿಟಿ, 30ರಿಂದ 60 ಸಾವಿರ ರೂ. ನೀಡಲಾಗುತ್ತದೆ. 2ರಿಂದು 3 ಕಿ. ವ್ಯಾಟ್ಸ್‌ಗೆ 60 ರಿಂದ 78 ಸಾವಿರ ರೂ. ಸಬ್ಸಿಡಿ ಇರುತ್ತದೆ. ಜೊತೆಗೆ ಬ್ಯಾಂಕ್‌ನಿಂದ ಸಾಲ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಇದೊಂದು ಉತ್ತಮ ಯೋಜನೆಯಾಗಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚು ಸೌರಶಕ್ತಿಯನ್ನು ಬಳಕೆ ಮಾಡಿಕೊಡಲು ಮುಂದಾದರೆ ಆದಾಯವು ಹೆಚ್ಚುತ್ತದೆ. ನಿಗಮಕ್ಕೆ ವಿದ್ಯುತ್ ಖರೀದಿಯ ಒತ್ತಡ ಕಡಿಮೆಯಾಗುತ್ತದೆ ಎಂದರು. ಅದೇ ರೈತರು ಸಹ ತಮ್ಮ ಜಮೀನಿನಲ್ಲಿ ಕೃಷಿ ಪಂಪ್‌ಗಳಿಗೆ ಪಿಎಂ ಕುಸುಮ್ ಬಿ ಯೋಜನೆಯಡಿಯಲ್ಲಿ ಸೌರ ಘಟಕ ಅಳವಡಿಸಿಕೊಂಡರೆ 1 ರಿಂದ 10 ಎಚ್‌ಪಿ ವರೆಗೆ ಸೌರ ಘಟಕವನ್ನು ಅಳವಡಿಸಿಕೊಳ್ಳು ಅವಕಾಶದಿಂದ ಈ ಘಟಕ ನಿರ್ಮಿಸಿಕೊಳ್ಳಲು ರಾಜ್ಯ ಸರ್ಕಾರ ಶೇ. 50, ಕೇಂದ್ರ ಸರ್ಕಾರ ಶೇ. 30 ಹಾಗೂ ರೈತರ ವಂತಿಗೆ ಶೇ 20 ರಷ್ಟು ನೀಡಿದರೆ, ನಿಮ್ಮ ಜಮೀನಿನಲ್ಲಿ ಸೌರ ಪಂಪ್‌ಸೆಟ್ ಘಟಕವನ್ನು ನಿರ್ಮಿಸಿಕೊಳ್ಳಬಹುದಾಗಿದೆ ಎಂದರು.

ಹರದನಹಳ್ಳಿ ಸೆಸ್ಕಾಂ ಉಪ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ದೃಪದ್ ಮಾತನಾಡಿ, ಸೋಲರ್ ವಿದ್ಯುತ್ ಘಟಕ ನಿರ್ಮಿಸಿಕೊಂಡು ವಿದ್ಯುತ್ ಪಡೆದುಕೊಳ್ಳುವ ಯೋಜನೆಯನ್ನು ಪ್ರಯೋಗೀಕವಾಗಿ ತಾಲೂಕಿನ ಹರದನಹಳ್ಳಿ ವಿಭಾಗಕ್ಕೆ ನೀಡಲಾಗಿತ್ತು. ಇದನ್ನು ಅಳವಡಿಸಿಕೊಂಡು ಮಾಧರಿಯಾಗಿ ಸೌರಶಕ್ತಿಯನ್ನು ಹರದನಹಳ್ಳಿ ಉಪ ವಿಭಾಗ ಬಳಸಿಕೊಂಡಿದೆ. ಕೇಂದ್ರ 1 ಕೋಟಿ ರೂ. ಬಹುಮಾನ ಬಂದಿದ್ದು, ಇದನ್ನು ಸರ್ಕಾರ ಕಟ್ಟಡಗಳಿಗೆ ಸೌರವಿದ್ಯುತ್ ಬಳಕೆಗೆ ಉಪಯೋಗಿಸಿಕೊಳ್ಳಲಾಗುತ್ತದೆ ಎಂದರು.

ಮೂಡ್ನಾಕೂಡಿನ ರೈತರ ಪ್ರಕಾಶ್, ಮಧು ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಲ್ಲಿ ಹೆಚ್ಚುವರಿ ಎಂದು ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು ಸರಿಯಾದ ಕ್ರಮವಲ್ಲ. ರೈತರಿಗೆ ಮಾಹಿತಿ ನೀಡಿ, ವಂತಿಗೆಯನ್ನು ಕಟ್ಟಿಸಿಕೊಂಡು ಹೆಚ್ಚುವರಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಿಕೊಳ್ಳಲು ಇಂಜಿನಿಯರ್ಗಳಿಗೆ ಸೂಚನೆ ನೀಡಬೇಕು ಎಂದು ಒತ್ತಯಿಸಿದರು. ಸಭೆಯಲ್ಲಿ ಹರದನಹಳ್ಳಿ ಉಪ ವಿಭಾಗದ ಇಂಜಿನಿಯರ್ಗಳಾದ ಮಹದೇವಸ್ವಾಮಿ, ಎಇಟಿ ಪ್ರದೀಪ್‌ಕುಮಾರ್, ಹಾಗೂ ರೈತರು, ಗ್ರಾಹಕರು ಭಾಗವಹಿಸಿದ್ದರು.

ಮೊದಲ ಪುಟದಿಂದ

## ಒಪ್ಪಂದ ರೈತರಿಗೆ ಘಾತಕ

ಕುರಿತು 'ಎಕ್ಸ್'ನಲ್ಲಿ ಸುದೀರ್ಘ ಪೋಸ್ಟ್ ಹಂಚಿಕೊಂಡಿರುವ ಸಿದ್ದರಾಮಯ್ಯ, ಎರಡು ದೇಶಗಳ ಸಂಬಂಧಗಳು ಸಮಾನತೆ ಮತ್ತು ಪರಸ್ಪರ ಗೌರವದ ಮೇಲೆ ಆಧಾರಿತವಾಗಿ ರಬೇಕು. ಒತ್ತಡ, ಬೆದರಿಕೆ ಹಾಗೂ ಏಕ ಪಕ್ಷೀಯ ನೀತಿ ಹೇರಿಕೆಯ ಮೂಲಕ ಒಪ್ಪಂದಗಳು ನಡೆಯಬಾರದು. ಆದರೆ ಈ ಒಪ್ಪಂದದ ವಿಧಿ–ವಿಧಾನಗಳನ್ನು ನೋಡಿದರೆ, ಒಡೆಯನ ಅಜ್ಞೆಗೆ ಸೇವಕ ತಲೆಬಾಗಿದಂತಿದೆ ಎಂದು ಟೀಕಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿ ಮಾಡುತ್ತಿದ್ದ ಭಾರತವನ್ನು ಮಣಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲೆ ಭಾರೀ ಸುಂಕ ವಿಧಿಸಿದ್ದರು. ಈಗ ಅದನ್ನು ಶೇ.25ರಿಂದ ಶೇ.18ಕ್ಕೆ ಇಳಿಸಿ ಮಹಾ ಉಪಕಾರ ಮಾಡಿದಂತೆ ತೋರಿಸಲಾಗಿದೆ. ಆದರೆ ಇದರ ಬೆನ್ನಲ್ಲೇ ಅಮೆರಿಕದ ಸರಕುಗಳ ಮೇಲಿನ ಸುಂಕವನ್ನು ಭಾರತ ಸೊನ್ನೆಗೆ ಇಳಿಸಿರುವುದು ಸ್ಪಷ್ಟ ಅನ್ಯಾಯ. ಇದನ್ನೂ ಕೇಂದ್ರ ಸರ್ಕಾರ ಸ್ವಾಗತಿಸಿರುವುದು ದೇಶದ ಜನತೆಗೆ ಮಾಡಿದ ದ್ರೋಹವಾಗಿದೆ ಎಂದು ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಪ್ರಸ್ತುತ ಭಾರತ ತನ್ನ ಅಗತ್ಯ ತೈಲದ ಸುಮಾರು 40 ಶೇಕಡಾವನ್ನು ರಷ್ಯಾದಿಂದ ಖರೀದಿಸುತ್ತಿದೆ. ಆದರೆ ಈ ಒಪ್ಪಂದದ ಮೂಲಕ ರಷ್ಯಾದ ತೈಲ ಖರೀದಿಯನ್ನು ಕೈಬಿಟ್ಟು ಅಮೆರಿಕ ಮತ್ತು ವೆನಿಜುವೆಲಾದಿಂದ ತೈಲ ಖರೀದಿಸಲು ಭಾರತ ಒಪ್ಪಿಕೊಂಡಿರುವುದು ಸಂಪೂರ್ಣ ಶರಣಾಗತಿಯ ಸಂಕೇತ. ಇದರ ಪರಿಣಾಮವಾಗಿ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಲಿದ್ದು, ಅಗತ್ಯ ವಸ್ತುಗಳೂ ದುಬಾರಿಯಾಗಲಿವೆ ಎಂದು ಅವರು ಎಚ್ಚರಿಸಿದ್ದಾರೆ. ಈ ವ್ಯಾಪಾರ ಒಪ್ಪಂದದಿಂದ ಉಂಟಾಗುವ ಸಣ್ಣ ಲಾಭಗಳನ್ನು ದೊಡ್ಡ ಸಾಧನೆ ಎಂದು ಬಿಂಬಿಸಲಾಗುತ್ತಿದ್ದು, ಭಾರತೀಯ ರೈತರಿಗೆ ಆಗುವ ಭಾರೀ ನಷ್ಟವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗುತ್ತಿದೆ. ಅಮೆರಿಕದ ರೈತರು ಈ ಒಪ್ಪಂದವನ್ನು ಸಂಭ್ರಮದಿಂದ ಸ್ವಾಗತಿಸುತ್ತಿರುವುದೇ, ಇದು ಭಾರತದ ರೈತರ ಪಾಲಿಗೆ ಅಪಾಯಕಾರಿ ಎಂಬುದಕ್ಕೆ ಸಾಕ್ಷಿ ಎಂದು ಹೇಳಿದ್ದಾರೆ.

# ಪತ್ರಕರ್ತರ ಸೌಹಾರ್ದಯುತ ಕ್ರಿಕೆಟ್: ಚಾ.ನಗರಕ್ಕೆ ಗೆಲುವು

ಚಾಮರಾಜನಗರ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸಿದ್ದಲಿಂಗಸ್ವಾಮಿ ಅವರ ನೇತೃತ್ವದ ಚಾಮರಾಜನಗರ ತಂಡ ಜಯಭೇರಿ ಬಾರಿಸಿ ಟ್ರೋಫಿ ಎತ್ತಿಹಿಡಿಯಿತು.

ಫೈನಲ್ ಪಂದ್ಯದಲ್ಲಿ ಹನೂರು ತಂಡದ ವಿರುದ್ಧ ಚಾಮರಾಜನಗರ ತಂಡವು 30 ರನ್‌ಗಳ ಅಂತರದ ಗೆಲುವು ಪಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಚಾಮರಾಜನಗರ ತಂಡವು ಮಧುಸೂದನ್ ಹಾಗೂ ವಿಜಯಕುಮಾರ್ ಅವರ ಅತ್ಯುತ್ತಮದ ಬ್ಯಾಟಿಂಗ್ ಪ್ರದರ್ಶನದಿಂದ 6 ಓವರ್‌ಗಳಲ್ಲಿ 78 ರನ್ ಗಳನ್ನು ಗಳಿಸಿತು. ಗುರಿ ಬೆನ್ನತ್ತಿದ್ದ ಹನೂರು ತಂಡವು 44 ರನ್ ಗಳನ್ನು ಹೊಡೆಯಲಷ್ಟೇ ಸಾಧ್ಯವಾಯಿತು. ಆ



ಮೂಲಕ ಚಾ.ನಗರ ತಂಡ ಗೆಲುವು ಸಾಧಿಸಿತು.

ಹಿರಿಯ ಪತ್ರಕರ್ತ ಅಬ್ರಾಹಂ ಡಿ.ಸಿಲ್ವ ಹಾಗೂ ಹಿರಿಯ ಕ್ರಿಕೆಟ್ ಆಟಗಾರ ಶ್ರೀನಿವಾಸಪ್ರಸಾದ್ ಉಭಯ ತಂಡಗಳಿಗೆ ಟ್ರೋಫಿಗಳನ್ನು ವಿತರಿಸಿದರು. ಸರಣಿ ಶ್ರೇಷ್ಠ ಪ್ರಶಸ್ತಿಗೆ ಮಧುಸೂದನ್, ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ವಿಜಯಕುಮಾರ್ ಭಾಜನರಾದರು. ಪಂದ್ಯಾವಳಿಯಲ್ಲಿ ಗುಂಡ್ಲುಪೇಟೆ ಹಾಗೂ ಯಳಂದೂರು ಪತ್ರಕರ್ತರ ಸಂಘದ ತಂಡಗಳು ಸಹ ಪಾಲ್ಗೊಂಡಿದ್ದವು.

## ರೈತ ಸಮುದಾಯದ ಮೇಲೆ ಭಾರೀ ಹೊಡೆತ

ದುರಂತಗಳಿಗೆ ದಾರಿ ಮಾಡಿಕೊಡಬಹುದು ಎಂದು ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದ್ದಾರೆ. ಈ ಒಪ್ಪಂದದ ಹಿಂದೆ ಭಾರತೀಯರ ಹಿತಕ್ಕಿಂತ, ಮೋದಿಯವರ ಉದ್ಯಮ ಸ್ನೇಹಿತ ಅದಾನಿ ರಕ್ಷಣೆ ಹಾಗೂ ಅಂತರರಾಷ್ಟ್ರೀಯ ಒತ್ತಡಗಳೇ ಕಾರಣ ಎಂಬ ಆರೋಪವನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಜಾಗತಿಕವಾಗಿ ಭಾರತ ಎಂದಿಗೂ ಇಷ್ಟೊಂದು ದುರ್ಬಲ ಸ್ಥಿತಿಯಲ್ಲಿ ಇರಲಿಲ್ಲ. ಹಿಂದಿನ ಪ್ರಧಾನಿಗಳು ದೇಶದ ಸಾರ್ವಭೌಮತೆ ಮತ್ತು ಗೌರವವನ್ನು ಕಾಪಾಡಿಕೊಂಡಿದ್ದರು. ಆದರೆ ಈಗ ವಿದೇಶಾಂಗ ನೀತಿ ಎಂದರೆ ಭಾಷಣ, ಘೋಷಣೆ ಮತ್ತು ಸ್ವಪ್ರಚಾರ ಮಾತ್ರ ಎಂಬಂತಾಗಿದೆ ಎಂದು ಟೀಕಿಸಿದ್ದಾರೆ. ಚೀನಾ ಮತ್ತು ಅಮೆರಿಕದಂತಹ ದೈತ್ಯ ರಾಷ್ಟ್ರಗಳ ನಡುವೆ ಸಿಲುಕಿರುವ ಭಾರತ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುವ ಸ್ಥಿತಿಗೆ ತಲುಪಿದೆ. ಒಮ್ಮೆ ಟ್ರಂಪ್ ಅವರನ್ನು ಹೊಗಳಿದ್ದ ಪ್ರಧಾನಿ ಮೋದಿ ಈಗ ಅವರ ಆಜ್ಞಾಪಾಲಕರಾಗಿರುವುದು ವಿಷಾದನೀಯ. ವಿದೇಶಾಂಗ, ಆರ್ಥಿಕ ಹಾಗೂ ಸಾಮಾಜಿಕ ಎಲ್ಲ ರಂಗಗಳಲ್ಲಿಯೂ ವಿಫಲರಾಗಿರುವ ಪ್ರಧಾನಿ ಮೋದಿ ರಾಜೀನಾಮೆ ನೀಡುವುದು ದೇಶದ ಹಿತಕ್ಕೂ, ಅವರ ಗೌರವ ಉಳಿಸಿಕೊಳ್ಳುವುದಕ್ಕೂ ಒಳಿತು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಕರ್ನಾಟಕ ಸರ್ಕಾರ

**ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ**

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ

ಸಂಖ್ಯೆ: ಕಾಇಂ/ಪಂರಾಇಂವಿ/ಕೃರಾನ/ಎ.ಇ/ಟೆಂಡರ್/2025–26 ದಿನಾಂಕ: 06.02.2026

**ಇ–ಪ್ರೊಕ್ಯೂರ್‌ಮೆಂಟ್ ರೀತ್ಯಾ ಅಲ್ಪಾವಧಿ ಟೆಂಡರ್ ಪ್ರಕಟಣೆ –ಸಂಖ್ಯೆ 17/2025–26 ದಿನಾಂಕ: 06.02.2026**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W -1 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

| | | |
|---|---|---|
| 01 | ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್–ಬಿ ಅಪ್ ಲೋಡ್ (Upload) ಮಾಡುವ ದಿನಾಂಕ | ದಿನಾಂಕ : 07.02.2026 ರ ಬೆಳಿಗ್ಗೆ 10.30 ಗಂಟೆಯಿಂದ |
| 02 | ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್ –ಬಿ ನಲ್ಲಿ ದರ ನಮೂದಿಸುವ ಕೊನೆಯ ದಿನಾಂಕ | ದಿನಾಂಕ:13.02.2026 ಸಂಜೆ 5.00 ಗಂಟೆಯ ವರೆಗೆ |
| 03 | ತಾಂತ್ರಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ | ದಿನಾಂಕ:16.02.2026 ಸಂಜೆ 12.00 ಗೆಂಟೆಯಿಂದ |
| 04 | ಆರ್ಥಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ ದಿನಾಂಕ | ತಾಂತ್ರಿಕವಾಗಿ ಅರ್ಹತೆಗೊಂಡ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು |

**ಕಾಮಗಾರಿಗಳ ವಿವರ**

| ತಾಲ್ಲೂಕು | ಒಟ್ಟು ಕಾಮಗಾರಿಗಳ ಸಂಖ್ಯೆ | ಸಾಮಾನ್ಯ | ಪ.ಜಾತಿ | ಪ.ಪಂಗಡ | ಪ್ರವರ್ಗ–1 | ಪ್ರವರ್ಗ–2ಎ |
|---|---|---|---|---|---|---|
| ಹೆಚ್.ಡಿ.ಕೋಟೆ | 04 | 04 | 0 | 0 | 0 | 0 |
| ಒಟ್ಟು | 04 | 04 | 0 | 0 | 0 | 0 |

ಆನ್ ಲೈನ್ ನಲ್ಲಿ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223–262228.

**ಸಹಿ/– ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ**

DIPR/DDMYS/1627/KSMCA/923/2025-26

ಚಾಮರಾಜನಗರದಲ್ಲಿ ತಮಟೆ ಚಳುವಳಿ

# ಬಜೆಟ್‌ನಲ್ಲಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಿಸಿ

ಚಾಮರಾಜನಗರ, ರಾಜ್ಯ ಸರ್ಕಾರ ಆಯವ್ಯಯದಲ್ಲಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ತಮಟೆ ಚಳವಳಿ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಗೇಟ್ ಮುಂಭಾಗದಲ್ಲಿ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಪ್ರತಿಭಟನೆ ನಡೆಸಿ, ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನೇಕ ಸಲ ಜಿಲ್ಲೆಗೆ ಭೇಟಿ ನೀಡಿ ಚಾಮರಾಜನಗರದ ಬಗ್ಗೆ ವಿಶೇಷ ಅಭಿಮಾನವನ್ನಿಟ್ಟುಕೊಂಡಿದ್ದಾರೆ. ಅವರು ಈ ಸಾಲಿನ ರಾಜ್ಯ ಬಜೆಟ್‌ನಲ್ಲಿ ಚಾಮರಾಜನಗರ ಗಡಿ ಜಿಲ್ಲೆಯಾಗಿದ್ದು, ಇಲ್ಲಿ ಬಡವರು, ಮಧ್ಯಮವರ್ಗದವರು, ಕಾರ್ಮಿಕರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ 5 ಸಾವಿರ ಕೋಟಿ



ವಿಶೇಷ ಪ್ಯಾಕೇಜ್‌ನ್ನು ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗಿದ್ದು, ಅಂತರ್ಜಲ ಕುಸಿಯುತಿದ್ದು ಕುಡಿಯುವ ನೀರಿಗೆ ಸಮಸ್ಯೆ ಎದುರಾಗಿದೆ. ಆಗಾಗಿ ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರಿಗೆ, ಜನರಿಗೆ ಅನುಕೂಲ ಮಾಡಿಕೊಡಬೇಕು. ಜಿಲ್ಲೆಯ ಪ್ರವಾಸೋದ್ಯಮಕ್ಕೆ ವಿಶೇಷವಾದ ಗಮನಕೊಡಬೇಕು. ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡಬೇಕು. ಚಾಮರಾಜನಗರ ವಿಶ್ವವಿದ್ಯಾನಿಲಯದ ಸಂಪೂರ್ಣ ಅಭಿವೃದ್ಧಿಗಾಗಿ 100 ಕೋಟಿ ನೀಡಬೇಕು. ಚಾಮರಾಜನಗರ ಪಟ್ಟಣದ ಕುಡಿ ಯುವ ನೀರಿನ ಯೋಜನೆ ಮಂದಗತಿಯಲ್ಲಿ ಸಾಗು ತ್ತಿದೆ. ಇದಕ್ಕೂ ಅನುದಾನ ನೀಡಬೇಕು. ಗಡಿಜಿಲ್ಲೆಯಲ್ಲಿ ಕನ್ನಡದ ಬೆಳವಣಿಗಾಗಿ ಕನ್ನಡ ಭವನವನ್ನು ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಮಂಜೂರು ಮಾಡಿಕೊಡಬೇಕು ಎಂದು ಆಗ್ರಹಿಸಿದರು ಪಣ್ಯದ ಹುಂಡಿರಾಜು, ನಿಜಧ್ವನಿಗೋವಿಂದರಾಜು, ಮಹೇಶ್ ಗೌಡ, ತಾಂಡವಮೂರ್ತಿ, ಸುರೇಶ್‌ಶೆಟ್ಟಿ, ಅಮಚವಾಡಿ ರಾಜು, ಹೊಮ್ಮ ಲೋಕೇಶ್, ಅರುಣ್ ಕುಮಾರ್ ಗೌಡ, ಆಟೋ ಲಿಂಗರಾಜು, ಮಹೇಶ್, ಶಿವಣ್ಣ, ಮುತ್ತುರಾಜು, ಮಡ್ಲುಪುರಪ್ರಕಾಶ್, ಪರ್ವತ್ ರಾಜು, ನಾಗರಾಜು, ಚಂದ್ರಕುಮಾರ್ ಭಾಗವಹಿಸಿದ್ದರು.

# ಕನ್ನಡ ಭವನ ನಿರ್ಮಾಣಕ್ಕೆ ನೀಲ ನಕಾಶೆ ತಯಾರಿ: ಜಿಲ್ಲಾಧಿಕಾರಿ



**ಮಂಡ್ಯ :** ಕನ್ನಡದ ಐಕ್ಯತೆಯ ಪ್ರತೀಕವಾಗಿ ನಮ್ಮ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ಮತ್ತು ನಾಡು?ನುಡಿಯ ಮೇಲಿನ ಅಭಿಮಾನವನ್ನು ಜನಮನದಲ್ಲಿ ಮೂಡಿಸುವ ಉದ್ದೇಶದಿಂದ ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024ರ ಡಿಸೆಂಬರ್ 20, 21 ಹಾಗೂ 22ರಂದು ಅತ್ಯಂತ ಅರ್ಥಪೂರ್ಣವಾಗಿ, ವೈಭವಯುತವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರ ಸಹಕಾರದಿಂದ ಈ ಸಮ್ಮೇಳನವು ಅಭೂತಪೂರ್ವ ಯಶಸ್ಸು ಕಂಡಿದ್ದು, ನಾಡಿನ ಸಮಸ್ತರಿಂದ ಪ್ರಶಂಸೆಗೆ ಪಾತ್ರವಾಗಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿ ನೆನಪನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕನ್ನಡ ಭವನವನ್ನು ನಿರ್ಮಿಸಬೇಕು ಎಂಬ ಅಭಿಲಾಷೆಯನ್ನು ಜನಪ್ರತಿನಿಧಿಗಳು, ಸಾಹಿತ್ಯಾಸಕ್ತರು ಹಾಗೂ ಮಂಡ್ಯ ಜಿಲ್ಲೆಯ ಜನತೆ ವ್ಯಕ್ತಪಡಿಸಿದ್ದರು.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಿದ ಸವಿನೆನಪಿಗಾಗಿ, ಸಮ್ಮೇಳನದಲ್ಲಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹಣದ ಉಳಿತಾಯ ರೂ.2.50 ಕೋಟಿ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ರೂ.3.00 ಕೋಟಿ, ಒಟ್ಟು ರೂ.5.50 ಕೋಟಿ ವೆಚ್ಚದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದರ ಅಂಗವಾಗಿ, ಕಟ್ಟಡ ಕಾಮಗಾರಿಗೆ ಜನವರಿ 30ರಂದು ಶಂಕುಸ್ಥಾಪನೆ ನೆರವೇರಿಸಲಾಗಿದೆ.

ಇದೇ ಸಂದರ್ಭದಲ್ಲಿ ದಿನಾಂಕ 07.02.2026ರಂದು ಸಭೆ ನಡೆಸಲಾಗಿದ್ದು, ಕನ್ನಡ ಭವನ ಕಟ್ಟಡದ ನೀಲ ನಕಾಶೆ, ರೂಪರೇಷೆ ಹಾಗೂ ಇತರೆ ಸಂಬಂಧಿತ ವಿಚಾರಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ, ಕನ್ನಡ ಭವನ ಕಟ್ಟಡವನ್ನು ಕನ್ನಡ ಭಾಷೆ, ಸಂಸ್ಕೃತಿ ಹಾಗೂ ನಾಡು?ನುಡಿಯ ವೈಭವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರ್ಮಾಣ ಮಾಡುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

## ಮಂಡ್ಯದಲ್ಲಿಂದು 'ಡಾ.ಸಿದ್ದಲಿಂಗಯ್ಯ ಓದಿನಹಾದಿ'




**ಮಂಡ್ಯ:** ನಗರದ ಶಿವನಂಜಪ್ಪ ಪಾರ್ಕ್‌ನಲ್ಲಿ ಇಂದು ಫೆ 10 ರಂದು ಸಂಜೆ 6 ಕ್ಕೆ ಕನ್ನಡದ ಸಂವೇದನಾಶೀಲ ಕವಿ ಡಾ.ಸಿದ್ದಲಿಂಗಯ್ಯನವರ ಕುರಿತ ಓದಿನಹಾದಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಪರಿಚಯ ಪ್ರಕಾಶನದ ಓದಿನಹಾದಿಯ 8ನೇ ಸಂಚಿಕೆಯ ನಿಮಿತ್ತ ಓದು, ಹರಟೆ, ಹಾಡು ಮತ್ತು ಕನ್ನಡ ಸಾಹಿತ್ಯಲೋಕದದಲ್ಲಿ ಬಂಡಾಯ ಮತ್ತು ದಲಿತ ಸಂವೇದನೆಯ ಕವಿ ಡಾ.ಸಿದ್ದಲಿಂಗಯ್ಯ ಅವರ ನೆನಪುಗಳ ಮೆಲುಕು ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸಿದ್ದಲಿಂಗಯ್ಯ ಅವರ ಬದುಕು ಬರಹದ ಕುರಿತು ನಾಡಿನ ಸೂಕ್ಷ್ಮ ವಿಮರ್ಶಕರಾದ ವಿ.ಎಲ್.ನರಸಿಂಹಮೂರ್ತಿ ಅವರು ಉಪನ್ಯಾಸ ನೀಡಲಿದ್ದಾರೆ.

ನನ್ನ ಜನಗಳು, ಅಲ್ಲೇ ಕುಂತವರೆ, ಊರುಕೇರಿ ಮುಂತಾದ ಡಾ.ಸಿದ್ದಲಿಂಗಯ್ಯನವರ ಗಂಭೀರ ಸಾಹಿತ್ಯದ ಕುರಿತು ಹಿರಿಯ ವಕೀಲ ಮತ್ತು ಅಖಿಲ ಭಾರತ ವಕೀಲರ ಒಕ್ಕೂಟದ ಅಧ್ಯಕ್ಷರಾದ ಬಿ.ಟಿ.ವಿಶ್ವನಾಥ್ ಅವರು ಮಾತನಾಡಲಿದ್ದಾರೆ ಎಂದು ಪರಿಚಯ ಪ್ರಕಾಶನದ ಸಂಸ್ಥಾಪಕರಾದ ಶಿವಕುಮಾರ ಆರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪನ್ಯಾಸಕಿ ಮತ್ತು ಕವಯತ್ರಿ ನಂದಾದೀಪ, ಶಿಕ್ಷಕಿ ರಾಧಿಕಾ ಮತ್ತು ಗಾಯಕಿ ಐಶ್ವರ್ಯ ಅನಿಲ್ ಅವರು ಸಿದ್ದಲಿಂಗಯ್ಯನವರ ಕವಿತೆಗಳನ್ನು ವಾಚಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಸಂಜೆ ಐದು ಗಂಟೆಯಿಂದ ಆರಂಭವಾಗುವ ಸಂಗೀತ ಕಾರ್ಯಕ್ರಮದಲ್ಲಿ ಸಿದ್ದಲಿಂಗಯ್ಯನವರ ಪ್ರಸಿದ್ಧ ಗೀತೆಗಳನ್ನು ಮಂಡ್ಯ ಜಿಲ್ಲೆಯ ಹೆಮ್ಮೆಯ ಹಾಡುಗಾರರಾದ ಗಾಮನಹಳ್ಳಿ ಸ್ವಾಮಿ, ಪ್ರತಿಭಾಂಜಲಿ ಡೇವಿಡ್ ಮತ್ತು ಎಚ್.ಎನ್. ದೇವರಾಜು ಅವರು ಪ್ರಸ್ತುತಪಡಿಸಲಿದ್ದಾರೆ.

ಕೋಮುವಾದ, ಜಾತೀಯತೆ ವ್ಯಾಪಕವಾಗಿ ಹರಡುತ್ತಿರುವ ಈ ಕಾಲಘಟ್ಟದಲ್ಲಿ ಡಾ.ಸಿದ್ದಲಿಂಗಯ್ಯ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮಾನವ ಬಂಧುತ್ವ ಮತ್ತು ವೈಚಾರಿಕ ಚಿಂತನೆಗಳನ್ನು ಹೊಸತಲೆಮಾರಿಗೆ ಪಸರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದ್ದು ಸಿದ್ದಲಿಂಗಯ್ಯ ಅವರ ಸಾಹಿತ್ಯಾಭಿಮಾನಿಗಳು ಭಾಗವಹಿಸಬಹುದು ಎಂದು ಪರಿಚಯ ಪ್ರಕಾಶನ ತಿಳಿಸಿದೆ.

## ಆರ್.ಬಿ.ಐ–ಆರ್ಥಿಕ ಸಾಕ್ಷರತಾ ಸಪ್ತಾಹ 2026



**ತುಮಕೂರು:** ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರಾದ್ಯಂತ ಇಂದಿನಿಂದ ಫೆಬ್ರವರಿ 13ರವರೆಗೆ ಆರ್ಥಿಕ ಸಾಕ್ಷರತಾ ಸಪ್ತಾಹ–2026ವನ್ನು ಹಮ್ಮಿಕೊಂಡಿದ್ದು, ತುಮಕೂರು ಜಿಲ್ಲೆಯಲ್ಲಿ ಉಪಕಾರ್ಯದರ್ಶಿ(ಆಡಳಿತ) ಈಶ್ವರಪ್ಪ ಅವರು ಬಿತ್ತಿಪತ್ರಗಳನ್ನು ಅನಾವರಣಗೊಳಿಸುವ ಮೂಲಕ ಆರ್ಥಿಕ ಸಾಕ್ಷರತಾ ಸಪ್ತಾಹ 2026ಕ್ಕೆ ಚಾಲನೆ ನೀಡಿದರು.

ಈ ಆರ್ಥಿಕ ಸಾಕ್ಷರತಾ ಸಪ್ತಾಹ 2026ನ್ನು ತುಮಕೂರು ಜಿಲ್ಲೆಯ 213 ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬ್ಯಾಂಕ್ ಶಾಖೆಗಳು, ಎಫ್.ಎಲ್.ಸಿ.ಗಳು ಹಾಗು ಸಿ.ಎಫ್.ಎಲ್.ಗಳು ಸಾರ್ವಜನಿಕರಲ್ಲಿ ಆರ್.ಬಿ.ಐ.ನ ಆರ್ಥಿಕ ಸಾಕ್ಷರತಾ ಸಪ್ತಾಹದ ವಿಷಯವಾದ ಕೆವೈಸಿ, ಕೆವೈಸಿಯ ಪ್ರಾಮುಖ್ಯತೆ ಹಾಗು ಅಧಿಕೃತವಾಗಿ ಮಾನ್ಯವಾದ ದಾಖಲೆಗಳ ಬಗ್ಗೆ, ರಿ–ಕೆವೈಸಿ, ವಿಡಿಯೋ ಕೆವೈಸಿ, ಸಿಕೆವೈಸಿ, ಆಧಾರ್‌ಒಟಿಪಿ ಆಧಾರಿತ ಇ–ಕೆವೈಸಿ ಹಾಗು ಭಾರತೀಯ ಹಣಕಾಸು ಸೇವೆಗಳ ಇಲಾಖೆಗೆ ಅನುಗುಣವಾಗಿ ಸಾರ್ವಜನಿಕರಲ್ಲಿ ಬ್ಯಾಂಕಿಂಗ್ ವ್ಯವಹಾರ ಹಾಗು ಆರ್ಥಿಕ ಶಿಸ್ತಿನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್ ವ್ಯವಸ್ಥಾಪಕ ಚೈತನ್ಯಕಂಚೀಬೈಲ್ ತಿಳಿಸಿದರು.

ಮಹಿಳಾ ಮತ್ತುಕಲ್ಯಾಣ ಇಲಾಖೆ ಉಪನಿರ್ದೇಶಕ ಸಿದ್ದರಾಮಣ್ಣ, ತುಮಕೂರು ಹಾಗು ಮಧುಗಿರಿ ಶೈಕ್ಷಣಿಕ ಜಿಲ್ಲೆ ಡಿಡಿಪಿಐ ಮಾಧವರೆಡ್ಡಿ, ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರಕಲ್ಯಾಣ ಇಲಾಖೆ ಜಿಲ್ಲಾ ವ್ಯವಸ್ಥಾಪಕ ಚಿದಾನಂದ, ಪಿಆರ್‌ಇಡಿ ಕಾರ್ಯನಿರ್ವಹಣಾಧಿಕಾರಿ ಹನುಮಂತರಾಯಪ್ಪ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ನಿರ್ದೇಶಕ ವಾದಿರಾಜ ಕೆ.ಎನ್. ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

### ದೇಗುಲದ ರಾಜಗೋಪುರ ಲೋಕಾರ್ಪಣೆ ಫೆ.13ಕ್ಕೆ



**ನಾಗಮಂಗಲ:** ತಾಲೂಕಿನ ಹಾಲತಿ ಗ್ರಾಮದ ಶ್ರೀಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಮಹಾದ್ವಾರದ ನೂತನ ರಾಜಗೋಪುರ ಉದ್ಘಾಟನೆ ಮತ್ತು ಕುಂಭಾಭಿಷೇಕ ಕಾರ್ಯಕ್ರಮ ಫೆ.13ರಂದು ನಡೆಯಲಿದೆ ಎಂದು ಆದಿಚುಂಚನಗಿರಿ ಶಾಖ ಮಠ ಪೂಜ್ಯ ಶ್ರೀಸೋಮೇಶ್ವರನಾಥ ಸ್ವಾಮೀಜಿಗಳು ತಿಳಿಸಿದರು ನಾಗಮಂಗಲ ತಾಲೂಕಿನ ಪುರಾಣ ಪ್ರಸಿದ್ಧ ಇತಿಹಾಸ ಕ್ಷೇತ್ರವಾಗಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಸ್ವರ್ಗಾಶ್ರಮ ಹಾಲ್ತಿ ಶಾಖಾಮಠದಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿ ಮಾತನಾಡಿದರು.

ಶ್ರೀ ಮಠವು ಆಯೋಜನೆ ಮಾಡಿರುವ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಜಿಯವರ ದಿವ್ಯ ಆಶೀರ್ವಾದಗಳೊಂದಿಗೆ ಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯದ ಮಹಾ ದ್ವಾರದ 64 ಅಡಿಯ ನೂತನ ರಾಜಗೋಪುರದ ಉದ್ಘಾಟನೆ ಮತ್ತು ಕುಂಭಾಭಿಷೇಕ ಕಾರ್ಯಕ್ರಮವನ್ನು ಇದೇ ತಿಂಗಳು 13ರಂದು ಶುಕ್ರವಾರ ಪರಮಪೂಜ್ಯ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಅಮೃತ ಹಸ್ತದಿಂದ ಲೋಕಾರ್ಪಣೆ ಮಾಡಲಿದ್ದಾರೆ.

ಇದೇ ಸಮಾರಂಭದಲ್ಲಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ದಿನಾಂಕ 11, 12, ರಂದು ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು 12 ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪೂಜಾ ಕಾರ್ಯಕ್ರಮಗಳಲ್ಲಿ ಅಕ್ಕಪಕ್ಕದ ಗ್ರಾಮದಿಂದ ಸುಮಾರು 60 ಗ್ರಾಮ ದೇವತೆಗಳು ಸೇರಲಿವೆ.

ಸಮಾರಂಭಕ್ಕೆ ನಾಡಿನ ಗಣ್ಯರು ಮುಖ್ಯಸ್ಥರು ಧಾರ್ಮಿಕ ಭಕ್ತರು ಆಗಮಿಸಲಿದ್ದಾರೆ. 13 ರಂದು ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳೊಂದಿಗೆ ನೂತನ ಗೋಪುರ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ಜರಗಲಿದೆ. ಭಕ್ತಾದಿಗಳು ಇದೇ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಾಗವಹಿಸುವಂತೆ ಕೋರಲಾಗಿದೆ.

## ಎಂಸಿಡಿಸಿಸಿ ಬ್ಯಾಂಕ್ ನಿಂದ ರೈತರುಗಳಿಗೆ ಸುಮಾರು 2000 ಕೋಟಿ ರೂ ಸಾಲ: ದೊಡ್ಡಸ್ವಾಮೇಗೌಡ



**ಕೆ.ಆರ್.ನಗರ:** ಎಂಸಿಡಿಸಿಸಿ ಬ್ಯಾಂಕ್ ನಿಂದ ರೈತರುಗಳಿಗೆ ಸುಮಾರು 2000 ಕೋಟಿ ರೂ ಸಾಲವನ್ನು ನೀಡಲಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಕರ್ಪೂರವಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 317 ಸಹಕಾರ

ಸಂಘಗಳಿದ್ದು 31 ಸಹಕಾರ ಬ್ಯಾಂಕುಗಳಿವೆ ಅವುಗಳ ಮೂಲಕ 1400 ಕೋಟಿ ರೂ ಕೆಸಿಸಿ ಸಾಲ ಮತ್ತು 600ಕೋಟಿ ರೂ ನಾನ್ ಅಗ್ರಿಕಲ್ಚರ್ ಸೆಕ್ಟರ್ ಗೆ ವಿತರಣೆ ಮಾಡಲಾಗಿದೆ. ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ರೈತರುಗಳ ಠೇವಣಿ ಹಣವು ಒಂದು ಸಾವಿರ ಕೋಟಿ ಇದೆ ಎಂದರು.

ಕಳೆದ ಎರಡು ವರ್ಷಗಳಿಂದ ಸಹಕಾರ ಸಂಘಗಳ ಹೊಸ ಸದಸ್ಯರುಗಳಿಗೆ ಸಾಲ ವಿತರಣೆ ಮಾಡಿಲ್ಲ ಅತಿ ಶೀಘ್ರದಲ್ಲೇ ಹೊಸ ಸದಸ್ಯರಿಗೂ ಕೂಡ ಸಾಲ ಸೌಲಭ್ಯವನ್ನು ನೀಡಲಾಗುವುದು ಎಂದರು.

ಸರ್ಕಾರವು ಸಹಕಾರ ಸಂಘಗಳ ಮೂಲಕ ರೈತರುಗಳಿಗೆ ಬಡ್ಡಿ ರಹಿತ ಸಾಲವನ್ನು ನೀಡುತ್ತಿದ್ದು ಅದನ್ನು ರೈತರುಗಳು ಸದುಪಯೋಗಪಡಿಸಿಕೊಂಡು ಆರ್ಥಿಕ ಅಭಿವೃದ್ಧಿ ಹೊಂದಬೇಕು ಎಂದು ಕರೆ ನೀಡಿದರು.

ಸಹಕಾರ ಸಂಘಗಳಿಂದ ಪಡೆದಂತಹ ಸಾಲವನ್ನು ಸಂಘದ ಸದಸ್ಯರುಗಳು ಸಕಾಲದಲ್ಲಿ ಮರುಪಾವತಿ ಮಾಡಿ ಮರಳಿ ಸಾಲವನ್ನು ಪಡೆದು ತಾವುಗಳು ತಮ್ಮ ಕೃಷಿ ಚಟುವಟಿಕೆಗಳನ್ನು ಮಾಡುವ ಮೂಲಕ ಹೆಚ್ಚಿನ ಲಾಭವನ್ನು ಪಡೆದು ಉತ್ತಮ ಜೀವನವನ್ನು ನಡೆಸಬೇಕು ಆ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದರು.

ಸಹಕಾರ ಸಂಘಗಳ ಮೂಲಕ ಟ್ರ್ಯಾಕ್ಟರ್, ಬೋರ್ ವೆಲ್, ಮನೆ, ಚಿನ್ನದ ಮೇಲೆ ಸಾಲವನ್ನು ನೀಡಲಾಗುತ್ತಿದೆ. ಟ್ರ್ಯಾಕ್ಟರ್ ಸಾಲಕ್ಕೆ ರೈತರು ಶೇಕಡ ಮೂರರಷ್ಟು ಬಡ್ಡಿ ಕಟ್ಟಿದರೆ ಸರ್ಕಾರವು ಶೇಕಡ 9 ರಷ್ಟು ಬಡ್ಡಿಯನ್ನು ಕಟ್ಟುತ್ತದೆ ಇಂತಹ ಅವಕಾಶಗಳನ್ನು ರೈತರು ಬಳಕೆ ಮಾಡಿಕೊಳ್ಳಬೇಕು ಎಂದರು. ಜಿಲ್ಲಾ ಬ್ಯಾಂಕಿನ ನಿರ್ದೇಶಕನಾಗಿ ಹಾಗೂ ಅಧ್ಯಕ್ಷರಾಗಲು ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಡಿ.ರವಿಶಂಕರ್, ಜಂಗಮ ಮಠದ ಶ್ರೀ ಅಭಿನವ ಚಂದ್ರಶೇಖರ ಸ್ವಾಮೀಜಿ, ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆಡಗ ನಟರಾಜ್, ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಕರೇಗೌಡ, ಮಾಜಿ ಉಪಾಧ್ಯಕ್ಷರಾದ ಎಸ್.ಎನ್.ರಂಗಸ್ವಾಮಿ, ಜಬೀರ್ ಖಾನ್, ಮಾಜಿ ಸದಸ್ಯರಾದ ಸಂತೋಷ, ಹರ್ಷವರ್ಧನ್, ತಾ.ಪಂ. ಮಾಜಿ ಅಧ್ಯಕ್ಷರಾದ

ಎಲ್.ಎಂ.ಸಣ್ಣಪ್ಪ, ಚಂದು, ಮಾಜಿ ಉಪಾಧ್ಯಕ್ಷ ನಟರಾಜ್, ಕಾಂಗ್ರೆಸ್ ನಗರಾಧ್ಯಕ್ಷ ಪ್ರಭಾಕರ್, ಸಿಡಿಸಿ ಉಪಾಧ್ಯಕ್ಷ ಶ್ರೀನಿವಾಸ್, ಮುಖಂಡರುಗಳಾದ ಲೋಕೇಶ್, ನಾಗಣ್ಣ, ಮರಿಸ್ವಾಮಿ, ರಾಮಚಂದ್ರ, ತಂದ್ರೆಧರ್ಮ, ಕೊತ್ವಾಲ್ ಮಂಜುನಾಥ್,

ಡಿ.ದೇವರಾಜು, ಸಂತೋಷ, ಎಲ್ಲಪ್ಪಜೋಗಿ, ಚಂದ್ರು, ಗುಣಪಾಲಜೈನ್, ಶಿವಯ್ಯ, ಸ್ವಾಮಿ, ನಾರಾಯಣ, ಕುಮಾರ, ರವಿ, ನಟರಾಜ್, ಗೋವಿಂದೇಗೌಡ, ರಂಗಪ್ಪ, ನರಸಿಂಹೇಗೌಡ, ಶಿವಣ್ಣ ಸೇರಿದಂತೆ ಹಲವರು ಇದ್ದರು.

### ಕೆರೆ ಒತ್ತುವರಿ ತೆರವಿಗೆ ಮಾರ್ಚ್ 30 ಅಂತಿಮ ಗಡುವು

## ಕೆರೆ ತೆರವುಗೊಳಿಸದಿದ್ದರೆ ಶಿಸ್ತು ಕ್ರಮ: ಜಿಲ್ಲಾಧಿಕಾರಿ

**ಮಂಡ್ಯ:** ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ಮತ್ತು ಜವಾಬ್ದಾರಿಯನ್ನು ತೆಗೆದುಕೊಂಡು ಕೆರೆ ಒತ್ತುವರಿಯನ್ನು ತೆರವುಗೊಳಿಸಬೇಕು, ತೆರವುಗೊಳಿಸಿದ ಕೆರೆಗಳು ಮತ್ತೆ ಒತ್ತುವರಿ ಮಾಡದಂತೆ ಸಂರಕ್ಷಣೆ ಮಾಡಬೇಕು, ಕೆರೆ ಒತ್ತುವರಿ ಮಾಡಿದವರು ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಳಾದ ಡಾ ಕುಮಾರ ಅವರು ಹೇಳಿದರು.

ಮಂಡ್ಯ ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿ ತೆರವುಗೊಳಿಸುವ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಇದುವರೆಗೆ ಸುಮಾರು 245 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಇನ್ನು 203 ಕೆರೆಗಳ ತೆರವು ಬಾಕಿ ಉಳಿದಿದೆ. ಬಾಕಿ ಇರುವ ಕೆರೆ ಒತ್ತುವರಿಗಳನ್ನು ತಕ್ಷಣವೇ ತೆರವುಗೊಳಿಸಿ ವರದಿ ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಿದರು.

ಪ್ರತಿ ತಿಂಗಳು ಕೆರೆ ಒತ್ತುವರಿ ಸಂಬಂಧ ಸಭೆ ನಡೆಸಲಾಗುತ್ತಿದ್ದು ಮಾರ್ಚ್ 30 ರೊಳಗೆ ಬಾಕಿ ಇರುವ ಎಲ್ಲಾ ಕೆರೆಗಳ ಒತ್ತುವರಿ ತೆರವುಗೊಳಿಸಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕ?ಗೊಳ್ಳಲಾಗುವುದು ಎಂದು ಅವರು ಜಿಲ್ಲಾಧಿಕಾರಿಗಳು ತಿಳಿಸಿದರು.

ತೆರವುಗೊಳಿಸಿದ ಕೆರೆಗಳ ಸುತ್ತ ಟ್ರಂಚ್‌ಗಳನ್ನು (ಕಂದಕ) ನಿರ್ಮಿಸಿ, ನಾಮಫಲಕಗಳನ್ನು ಅಳವಡಿಸುವ ಮೂಲಕ ಮರು–ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಎಚ್.ಎಲ್.ಬಿ.ಸಿ, ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಕೆರೆಯನ್ನು ಸಂರಕ್ಷಿಸಬೇಕು. ನಿಯಮಿತವಾಗಿ ಕೆರೆಗಳ ಪರಿಶೀಲನೆ ನಡೆಸಿ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಂಡ್ಯ ಉಪ ವಿಭಾಗಧಿಕಾರಿ ಶಿವಮೂರ್ತಿ, ಪಾಂಡವಪುರ ಉಪ ವಿಭಾಗಧಿಕಾರಿ ಶ್ರೀನಿವಾಸ್ ಡಿಡಿಎಲ್ ಆರ್ ವಿರುಪಾಕ್ಷ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



### ಅಧಿಕಾರಿಗಳಿಗೆ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಸೂಚನೆ

# ಶುದ್ಧ ಕುಡಿವ ನೀರು ಪೂರೈಕೆಯಲ್ಲಿ ಲೋಪವಾಗಬಾರದು

**ಮಂಡ್ಯ:** ಸದರಿ ವರ್ಷ ಜಿಲ್ಲೆಗೆ ಅಗತ್ಯವಿರುವ ನೀರಿನ ಪ್ರಮಾಣ ಲಭ್ಯವಿದೆ ಹಾಗಾಗಿ ಬೇಸಿಗೆ ಕಾಲದಲ್ಲಿ ಬೆಳೆ ಮತ್ತು ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದಿಲ್ಲ ಎಂದು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಹೇಳಿದರು.

ಸೋಮವಾರ ಜಿಪಂ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲಾ ಮಟ್ಟದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ತಹಶೀಲ್ದಾರ್ ಗಳು ವಿಶೇಷ ಮುತುವರ್ಜಿ ಕೆರೆಗಳನ್ನು ತೆರವುಗೊಳಿಸಿ ನಂತರ ಸದರಿ ಕೆರೆಯ ಜಾಗದಲ್ಲಿ ಒತ್ತುವರಿಯಾಗದಂತೆ ತಂತಿ ಬೇಲಿ ಮತ್ತು ಸೂಚನಾ ಫಲಕ ಅಳವಡಿಸಿ. ಜಿಲ್ಲೆಯಲ್ಲಿ ಇದುವರೆಗೆ 232 ಗ್ರಾಮ ಪಂಚಾಯಿತಿಗಳಲ್ಲಿ ಪೌತಿ ಖಾತಾ ಆಂದೋಲನ ನಡೆಸಿ 67659 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಹೇಳಿದರು.

ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ 21 ಕಂತುಗಳಲ್ಲಿ ರೂ 892.08 ಕೋಟಿ ಹಣವನ್ನು ನೀಡಲಾಗಿದೆ. ಕೃಷಿ ಇಲಾಖೆ ಕೃಷಿ ವಿಶ್ವವಿದ್ಯಾನಿಲಯ ಹಾಗೂ ಸಂಬಂಧಪಟ್ಟ ಇಲಾಖೆಗಳ ಜೊತೆ ಕೈಜೋಡಿಸಿ ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಕೃಷಿಯಿಂದ ಉದ್ಯಮ ಹೇಗೆ ಪ್ರಾರಂಭಿಸಬೇಕು ಎಂಬುದರ ಕುರಿತಾಗಿ ತರಬೇತಿ ನೀಡಿ ಅರ್ಹ ಸೌಲಭ್ಯ ಕಲ್ಪಿಸಿ ಜಿಲ್ಲೆಯ ಯುವಕರನ್ನು ನಿರುದ್ಯೋಗದಿಂದ ಮುಕ್ತಗೊಳಿಸಿ ಎಂದು ತಿಳಿಸಿದರು.



ಜಿಲ್ಲೆಯಲ್ಲಿ ಜನರಿಗೆ ಜಲ ಜೀವನ್ ಮಿಷನ್ ಮೂಲಕ ಶುದ್ಧ ಕುಡಿಯುವ ನೀರನ್ನು ಮನೆ ಮನೆಗೆ ತಲುಪಿಸಿ. ಪ್ರತಿ ವಾರ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ಎಂದು ಸೂಚಿಸಿದರು.

ನಲ್ ಜಲ್ ಯೋಜನೆಯಡಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗಿದೆ. ಸದರಿ ಹೆಣ್ಣು ಮಕ್ಕಳಿಗೆ ಕೇವಲ ತರಬೇತಿ ನೀಡಿದರೆ ಸಾಲದು ತರಬೇತಿಗೆ ತಕ್ಕ ಹಾಗೆ ಕೆಲಸಗಳನ್ನು ನೀಡಿ ಆಗ ಮಾತ್ರ ತರಬೇತಿ ನೀಡಿದ್ದಕ್ಕೆ ಅರ್ಥ ದೊರೆಯುತ್ತದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಪ್ರಾಥಮಿಕದಲ್ಲಿಯೇ ಹಸಿ ಕಸ ಮತ್ತು ಒಣ ಕಸಗಳನ್ನು ಬೇರ್ಪಡಿಸುಲಯವಂತೆ ಅರಿವು ಮೂಡಿಸಿ. ಸರ್ಕಾರಿ ಕಚೇರಿಗಳಲ್ಲಿಯೇ ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ಸಂಗ್ರಹಿಸಬೇಕು ಇಲ್ಲಿಂದಲೇ ಜಾಗೃತಿ ಶುರುವಾದರೆ ಸಾರ್ವಜನಿಕರಿಗೆ ಅರಿವು ಮೂಡಿಸಿದಂತಾಗುತ್ತದೆ. ಮಂಡ್ಯ ಸುಂದರವಾದ ನಗರ ಮಂಡ್ಯದಲ್ಲಿ ಸ್ವಚ್ಛತೆ ಕಾಪಾಡುವುದು ಎಲ್ಲರ ಹೊಣೆಯಾಗಿದೆ. ಜಿಲ್ಲೆಯಲ್ಲಿ ಕಸಗಳನ್ನು ಸಂಗ್ರಹಿಸಿ ಬೆಂಕಿ ಹಾಕದಿರುವಂತೆ ನೋಡಿಕೊಳ್ಳಬೇಕು. ಕಸ ವಿಲೇವಾರಿಯನ್ನು ವೈಜ್ಞಾನಿಕವಾಗಿ ನಡೆಸಿ ಎಂದು ಹೇಳಿದರು.

ಜಿಲ್ಲೆಯ ಅಂಗನವಾಡಿಗಳಲ್ಲಿ 61 ಸಾವಿರಕ್ಕೂ ಹೆಚ್ಚು ಮಕ್ಕಳು ಇದ್ದು ಸದರಿ ಮಕ್ಕಳಿಗೆ ಪೌಷ್ಟಿಕ ಕೊರತೆ ಉಂಟಾಗದಂತೆ ಕ್ರಮ ವಹಿಸಿ. ಗುಣಮಟ್ಟದ ಪೌಷ್ಟಿಕ ಆಹಾರಗಳನ್ನು ಮಕ್ಕಳಿಗೆ ನೀಡಿ. ಸದರಿ ವರ್ಷ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯಲಿರುವ ಮಕ್ಕಳಿಗೆ ವಿಶೇಷವಾಗಿ ಭಾಷಾ ವಿಷಯ ಹಾಗೂ ಗಣಿತ ವಿಷಯಗಳಲ್ಲಿ ಮೇಲೆ ಹೆಚ್ಚಿನ ಒತ್ತು ನೀಡಿ. ಶಾಲಾ ಶಿಕ್ಷಕರು ಮಕ್ಕಳಿಗೆ ಸೂಕ್ತವಾಗಿ ಪಾಠ ಪ್ರವಚನಗಳನ್ನು ನಡೆಸುತ್ತಿದ್ದಾರ ಎಂದು ಪರಿಶೀಲನೆ ನಡೆಸಿ ಎಂದು ಹೇಳಿದರು.

ಮಕ್ಕಳು ದೇಶದ ಭವಿಷ್ಯ ಅವರ ಶಿಕ್ಷಣಕ್ಕೆ ಕೊರತೆ ಉಂಟಾಗದಂತೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಹಾಗೂ ಜಿಲ್ಲೆಯಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆ ಎದುರಿಸಲಿರುವ ಸಮಾಜ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಮಕ್ಕಳ ಫಲಿತಾಂಶವನ್ನು ಹೆಚ್ಚಿಸಿ ಎಂದು ಹೇಳಿದರು.


ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾತನಾಡಿ ಆಸ್ತಿ ತೆರಿಗೆಯ ವಸೂಲಾತಿಯಲ್ಲಿ ಈಗಾಗಲೇ ಶೇ 89 ರಷ್ಟು ತೆರಿಗೆಯನ್ನು ಸಂಗ್ರಹಿಸಲಾಗಿದೆ. ಉಳಿದ ತೆರಿಗೆಯನ್ನು ಮಾರ್ಚ್ ಮಾಹೆಯ ಅಂತ್ಯದೊಳಗೆ ಸಂಗ್ರಹಿಸಲಾಗುತ್ತದೆ. ಹಸಿ ಕಸ ಮತ್ತು ಒಣ ಕಸ ಗಳನ್ನು ಪ್ರಾಥಮಿಕ ಹಂತದಲ್ಲಿಯೇ ಬೇರ್ಪಡಿಸುವಂತೆ ಈಗಾಗಲೇ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದು ಹೇಳಿದರು.ಶೇ 84 ರಷ್ಟು ಜಿಲ್ಲೆಯ ಜನರ ಆಧಾರ್ ಸೀಡಿಂಗ್ ಈಗಾಗಲೇ ಮಾಡಲಾಗಿದೆ. ಉಪ ವಿಭಾಗಾಧಿಕಾರಿಗಳು ಜವಾಬ್ದಾರಿ ವಹಿಸಿ ಒಂದು ವರ್ಷಕ್ಕಿಂತ ಹಳೆಯ ಕಂದಾಯ ಪ್ರಕರಣಗಳನ್ನು ವಿಲೇವಾರಿ ಮಾಡಿ. ನಮ್ಮಲ್ಲಿ ಬೇಸಿಗೆ ಕಾಲಕ್ಕೆ ಸಾಕಷ್ಟು ನೀರು ಲಭ್ಯವಿದ್ದು ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಸೂಕ್ತ ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಎಂ ಎಲ್ ಎ ಮತ್ತು ಎಂ ಎಲ್ ಸಿ ಕಾಮಗಾರಿಗಳಲ್ಲಿ ಬಾಕಿ ಇರುವ ಶೀಘ್ರವಾಗಿ ಪೂರ್ಣಗೊಳಿಸಿ. ಸದರಿ ವರ್ಷ ಪಿ.ಎಂ.ಎಫ್ .ಎಂ ಇ ಯೋಜನೆಯಡಿ ಜಿಲ್ಲೆಯ 328 ಅರ್ಹ ರೈತ ಫಲಾನುಭವಿಗಳಿಗೆ 83.42 ಕೋಟಿ ಸಾಲ ಹಾಗೂ 27.72 ಕೋಟಿ ಸಹಾಯಧನವನ್ನು ನೀಡಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ ಆರ್ ನಂದಿನಿ ಅವರು ಮಾತನಾಡಿ ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಈಗಾಗಲೇ ಶೇ 79 ರಷ್ಟು ಕಾಮಗಾರಿ ಮುಗಿದಿದ್ದು ಅನುದಾನದ ಕೊರತೆಯಿಂದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯಾವಾಗಿರುವುದಿಲ್ಲ ಎಂದು ಹೇಳಿದರು.ಎನ್ ಆರ್ ಎಲ್ ಎಂ ಯೋಜನೆಯಡಿ ಜಿಲ್ಲೆಯ ಸ್ವ ಸಹಾಯ ಗುಂಪಿನ ಅರ್ಹ ಮಹಿಳಾ ಫಲಾನುಭವಿಗಳು ತಮ್ಮ 'ಅಕ್ಕನ ಮೀನು ಊಟ' ಉದ್ಯಮದಲ್ಲಿ ಉತ್ತಮ ಲಾಭವನ್ನು ಪಡೆಯುತ್ತಿದ್ದಾರೆ. ಮೀನುಗಾರಿಕೆ ಇಲಾಖೆಯಿಂದ ಮೀನು ಸಾಕಾಣಿಕೆ ಮತ್ತು ಮೀನುಗಳಿಗೆ ನೀಡಬೇಕಾದ ಆಹಾರ ಕ್ರಮಗಳ ಕುರಿತು ತಿಳಿಸಿ ಮೀನುಗಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

ನೂತನವಾಗಿ ಅಕ್ಕನ ಬುತ್ತಿ ಎಂಬ ಹೊಸ ಯೋಜನೆಯನ್ನು ಎನ್‌ಆರ್‌ಎಲ್‌ಎಂ ಯೋಜನೆಯಡಿ ರೂಪಿಸಲಾಗಿದ್ದು ಉತ್ತಮ ಗುಣಮಟ್ಟದ ಆಹಾರವನ್ನು ಕ್ಯಾಟರಿಂಗ್ ಮೂಲಕ ಸರ್ಕಾರಿ ಕಚೇರಿಗಳು ಮತ್ತು ಇನ್ನಿತರ ಸಂಸ್ಥೆಗಳಿಗೆ ಶುಚಿತ್ವದ ಆಹಾರವನ್ನು ನೀಡಲಾಗುತ್ತಿದೆ. ಸ್ವ ಸಹಾಯ ಗುಂಪುಗಳ ಮಹಿಳೆಯರು ತಯಾರಿಸುವ ಮದ್ದೂರು ವಡೆ, ಮೇಲುಕೋಟೆ ಪುಳಿಯೋಗರೆ ಮತ್ತು ಮಂಡ್ಯ ಬೆಲ್ಲಕ್ಕೆ ಜಿ.ಐ ಟ್ಯಾಗ್ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

# ಶರಣ ಲೋಕದ ಧ್ರುವತಾರೆ... ಸಮಗಾರ ಹರಳಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಅದೊಂದು ಸೋಮವಾರದ ದಿನ. ರಾಜಕಾರ್ಯಗಳಿಗೆ ರಜೆ ಇದ್ದಿದ್ದರಿಂದ ತಮ್ಮ ಇಬ್ಬರೂ ಪತ್ನಿಯರೊಂದಿಗೆ ಬಸವಣ್ಣನವರು ಬಿಜ್ಜಳ ಮಹಾರಾಜರು ಕಟ್ಟಿಸುತ್ತಿದ್ದ ವಿಶಾಲ ಭವನವನ್ನು ನೋಡಲು ಹಾಗೂ ಹತ್ತಿರದಲ್ಲಿಯೇ ಇದ್ದ ಶಿವ ಕ್ಷೇತ್ರದ ದರ್ಶನ ಪಡೆಯಲು ತಮ್ಮ ಸಾರೋಟಿನಲ್ಲಿ ಹೊರಟಿದ್ದರು.

ಇನ್ನೇನು ಮಾರ್ಗ ಮಧ್ಯದಲ್ಲಿದ್ದ ಹೊಲಗೇರಿಯನ್ನು ದಾಟಿ ಹೋಗುತ್ತಿರುವಾಗ ಅವರಿಗೆ ತಮ್ಮ ಪಾದರಕ್ಷೆಯ ಉಂಗುಷ್ಟ ಸಡಿಲವಾಗಿರುವುದು ನೆನಪಿಗೆ ಬಂತು. ಕೆಲವೇ ದಿನಗಳಲ್ಲಿ ಹೊಸ ಪಾದರಕ್ಷೆಗಳ ಅವಶ್ಯಕತೆ ಉಂಟಾಗುವ ಕಾರಣ ಪಾದರಕ್ಷೆಗಳನ್ನು ತಯಾರಿಸುವ ವೃತ್ತಿಯಲ್ಲಿರುವ ಸಮಗಾರ ಹರಳಯ್ಯನವರನ್ನು ಭೇಟಿಯಾಗಿ ಬಿಟ್ಟರೆ ಕೆಲಸ ಪೂರೈಸುತ್ತದೆ ಎಂದು ಭಾವಿಸಿದ ಅವರು ಸಾರೋಟನ್ನು ನಿಲ್ಲಿಸಲು ಹೇಳಿದರು.

ಊರ ಹೊರಗೆ ಕೆಳ ವರ್ಗದವರು ಮಾತ್ರ ವಾಸಿಸುತ್ತಿದ್ದ ಹೊಲಗೇರಿಯ ಒಳಗೆ ಸಮಗಾರ ಹರಳಯ್ಯನವರನ್ನು ಭೇಟಿಯಾಗಲು ಹೊರಟ ಅವರನ್ನು ಅವರ ಸಾರೋಟಿನ ಸಾರಥಿ ಬೇಡ ಎಂದು ಅದೆಷ್ಟೇ ಹೇಳಿದರೂ ಕೇಳದೆ ಹೊಲೆಯರ ಓಣಿಯ ಒಳಹೊಕ್ಕ ಅವರು ಅಲ್ಲಿಯೇ ಇದ್ದ ಪುಟ್ಟ ಬಾಲಕನಿಗೆ ಹರಳಯ್ಯನ ಮನೆಯ ದಾರಿ ಕೇಳಿದರು.

ಕುದುರೆ ಗಾಡಿಯಲ್ಲಿ ಬಂದ ಅತ್ಯುತ್ತಮ ಪೋಷಾಕನ್ನು ಧರಿಸಿದ ಭವ್ಯವಾದ ವ್ಯಕ್ತಿತ್ವದ ಅವರನ್ನು ಕಂಡು ಭಯ ಭಕ್ತಿಯಿಂದ ಬೆನ್ನು ಬಾಗಿಸಿದ ಆ ಬಾಲಕ ಅವರಿಗೆ ದಾರಿ ತೋರುತ್ತ ಮುನ್ನಡೆದ. ಪ್ರತಿ ಮನೆಯ ಮುಂದೆ ಕಸ ಕಡ್ಡಿಗಳಿಲ್ಲದೆ ಸ್ವಚ್ಛವಾಗಿದ್ದರೂ ಕೂಡ ಅಲ್ಲಿಯೇ ಹರಿಯುತ್ತಿದ್ದ ಚರಂಡಿಯ ನೀರು ಮೂಗು ಮುಚ್ಚುವಂತೆ ನಾರುತ್ತಿತ್ತು. ಅಲ್ಲಲ್ಲಿ ಪ್ರಾಣಿಗಳನ್ನು ಕಡಿದ ನಂತರದ ಎಲುಬಿನ ಅವಶೇಷಗಳು ಗುಡಿಸಿದ ಕಸದಲ್ಲಿ ಕಾಣುತ್ತಿದ್ದವು. ಇದಾವುದನ್ನೂ ರಕ್ಷಿಸದೆ ಕೇವಲ ಹರಳಯ್ಯನವರ ಮನೆಯ ಕಡೆ ಹೊರಟ ಬಸವಣ್ಣನವರಿಗೆ ಓಣಿಯ ಕೊನೆಯ ಮೂಲೆಯಲ್ಲಿ ಇದ್ದ ಸುಣ್ಣ ಬಣ್ಣದ ಸಾರಣೆಯಿಂದ ಕಂಗೊಳಿಸುತ್ತಿದ್ದ ಮನೆ ಕಾಣಿಸಿತು. ಮನೆಯ ಅಂಗಳ ಸಂಪೂರ್ಣ ಸ್ವಚ್ಛವಾಗಿದ್ದು ಸಗಣಿಯಿಂದ ಸಾರಿಸಲ್ಪಟ್ಟಿದ್ದು ಕೆಮ್ಮಣ್ಣಿನ ಪಟ್ಟಿಯನ್ನು ಬೆಳೆಯಲಾಗಿತ್ತು. ತಳಿ ಹೊಡೆದು ರಂಗೋಲಿ ಹಾಕಿದ್ದ ಅಂಗಳದ ಒಂದು ಮೂಲೆಯಲ್ಲಿ ಚಪ್ಪಲಿ ಹೊಲಿಯುವ ಕಾಯಕಕ್ಕೆ ಅವಶ್ಯಕವಾದ ಸಾಮಗ್ರಿಗಳು ನೀರಿನ ಕುಲಾವಿ, ಅರ್ಧ ತಯಾರಿಸಿದ ಚಪ್ಪಲಿಗಳು ಎಲ್ಲವೂ ಜತನವಾಗಿ ಹೊಂದಿಸಲ್ಪಟ್ಟಿದ್ದವು. ಎಲ್ಲ ಕಡೆ ಶುದ್ಧತೆಯೇ ತಾಂಡವ ವಾಡುತ್ತಿದ್ದ ಆ ಮನೆಯ ನಿರ್ಮಲ ವಾತಾವರಣವನ್ನು ಕಂಡು ಪುಳಕಗೊಂಡ ಬಸವಣ್ಣನವರು ತಾವು ಬಂದ ಕೆಲಸವನ್ನೇ ಮರೆತು ನಿಂತಿದ್ದರೆ ಆ ಬಾಲಕ ಜೋರಾಗಿ ಕೂಗಿ ಕರೆದು ಮನೆಯವರನ್ನು ಎಚ್ಚರಿಸಿದ.

ಬಾಲಕನ ಕರೆಯನ್ನು ಕೇಳಿ ಹೊರಬಂದ ಹರಳಯ್ಯನವರಿಗೆ ಅತ್ಯಾಶ್ಚರ್ಯವಾಗಿದ್ದು ಬಿಜ್ಜಳ ಮಹಾರಾಜನ ಆಸ್ಥಾನದ ಮಹಾಮಂತ್ರಿಯಾದ ಅಣ್ಣ ಬಸವಣ್ಣನವರು ತಮ್ಮ ಮನೆಗೆ ಪಾದ ಬೆಳೆಸಿದ್ದಾರೆ ಎಂಬ ವಿಷಯಕ್ಕೆ.

ಓಡೋಡಿ ಬಂದು ಶಿರಬಾಗಿ ನಮಿಸಿ ಬಸವಣ್ಣನವರನ್ನು ಕುರಿತು ಹೇಳಿದರೆ ನಾನೇ ಬಂದು ತಮ್ಮನ್ನು ಕಾಣುತ್ತಿದ್ದೆ ಅಣ್ಣನವರೇ ಎಂದು ಸವಿನಯದಿಂದ ಕೇಳಿದಾಗ ಕಾರ್ಯನಿಮಿತ್ತ ಹೊರಟಿದ್ದೆ. ತಮ್ಮನ್ನು ಕಂಡು ಪಾದ ರಕ್ಷೆಗಳನ್ನು ಮಾಡಿಸುವ ನೆನಪಾಗಿ ಇತ್ತ ಬಂದೆ ಏಕೆ ಬರಬಾರದೇ ಹರಳಯ್ಯನವರೇ ಎಂದು ಬಸವಣ್ಣನವರು ಅಷ್ಟೇ ಪ್ರೀತಿಪೂರ್ವಕವಾಗಿ ಕೇಳಿದರು.

ಅಯ್ಯೋ ಅದು ಹಾಗಲ್ಲ ತಾವು ಮಹಾಮಂತ್ರಿಗಳು. ತಮ್ಮಂಥವರು ನಮ್ಮ ಕೇರಿಗೆ ಬರುವುದು ಬಡವನ ಮನೆಗೆ ಭಾಗ್ಯವೇ ಬಂದಂತೆ ಆದರೆ ಇಲ್ಲಿಯ ಇರಸರಿಕೆಗಳು ತಮಗೆ ಅಸಹನೀಯ ಎಂಬ ಕಾರಣಕ್ಕೆ ಹಾಗೆ ಹೇಳಿದೆ. ದಯವಿಟ್ಟು ಕ್ಷಮಿಸಿ ಎಂದು ಹರಳಯ್ಯನವರು ಅಲವತ್ತುಕೊಂಡರು.

ಪರವಾಗಿಲ್ಲ ಹರಳಯ್ಯನವರೇ ಮನೆಗೆ ಬಂದ ಅತಿಥಿಗಳನ್ನು ಒಳಗೆ ಕರೆಯುವುದಿಲ್ಲವೇ ? ಎಂದು ಬಸವಣ್ಣನವರು ಕೇಳಲು ಸಂಕೋಚದಿಂದ ಹಿಡಿಯಾದ ಹರಳಯ್ಯನವರು ತಪ್ಪಾಯಿತು ಬುದ್ಧಿ ಒಳಗೆ ಬನ್ನಿ ಎಂದು ಅವರನ್ನು ಮನೆಯ ಒಳಗೆ ಕರೆ ತಂದರು. ಈಗಾಗಲೇ ಪತಿ ಯಾರೊಂದಿಗೆ ಮಾತನಾಡುತ್ತಿರಬಹುದು ಎಂಬ ಕುತೂಹಲದಿಂದ ಹೊರಬಂದ ಪತ್ನಿ ಕಲ್ಯಾಣಮ್ಮ ತನ್ನ ತಲೆಯ ಮೇಲಿನ ಸೆರಗನ್ನು ಸರಿಪಡಿಸಿಕೊಂಡು ಬಸವಣ್ಣನವರಿಗೆ ತಲೆಬಾಗಿ ನಮಿಸಿ ಒಳ ಹೋಗಿದ್ದಳು.

ದಂಪತಿಗಳಿಬ್ಬರು ತಮ್ಮ ಮನೆಯಲ್ಲಿದ್ದ ಹಳೆಯ ಕಟ್ಟಿಗೆಯ ಕುರ್ಚಿಯೊಂದನ್ನು ತಂದು ಒರೆಸಿ ಅದರ ಮೇಲೆ ಬಸವಣ್ಣನವರನ್ನು ಕೂರಿಸಿದರು., ಅಗಲವಾದ ತಟ್ಟೆ ಒಂದರಲ್ಲಿ ಉಸುಕನ್ನು ಹಾಕಿ ತಂದು ಕೊಟ್ಟ ಪತ್ನಿಯಿಂದ ಅದನ್ನು ಪಡೆದು ಬಸವಣ್ಣನವರ ಪಾದದ ಅಳತೆಯನ್ನು ಹರಳಯ್ಯನವರು ಗುರುತು ಹಾಕಿಕೊಂಡರು.

ಆ ಸಮಯದಲ್ಲಿ ಇಡೀ ಮನೆಯನ್ನು ನಿರುಕಿಸಿದ ಬಸವಣ್ಣನವರು ಅತ್ಯಂತ ಸ್ವಚ್ಛವಾದ ಮನೆಯ ಅಂದ ಚಂದವನ್ನು ಆಸ್ವಾದಿಸಿದರು. ಕೀಳು ವರ್ಗದವರ ಮನೆ ಎಂಬ ಯಾವುದೇ ಕುರುಹುಗಳಿಲ್ಲದ ಮನೆಯ ಶುಭ್ರತೆ ಅವರ ಮನವನ್ನು ಸೆಳೆಯಿತು. ಅನುಭವ ಮಂಟಪಕ್ಕೆ ಬಂದು ಅಲ್ಲಿನ ಶರಣರ ಜೊತೆಗಿನ ಅನುಭಾವದಲ್ಲಿ ಭಾಗಿಯಾಗಲು ಆ ದಂಪತಿಗಳನ್ನು ಆಹ್ವಾನಿಸಿದ ಬಸವಣ್ಣನವರು ಅಲ್ಲಿಂದ ಕಾಲ್ಕಿತ್ತರು.

ಉಪೇಕ್ಷಿತ ವಚನಕಾರರು

ಮುಂದೆ ಹರಳಯ್ಯ ಹಾಗೂ ಕಲ್ಯಾಣಮ್ಮ ದಂಪತಿಗಳು ಲಿಂಗಾಂಗಗಳಾಗಿ ಶಿವಮತಕ್ಕೆ ಸೇರಿ ಕಲ್ಯಾಣದ ಅನುಭವ ಮಂಟಪದಲ್ಲಿ ಶರಣರ ದಂಪತಿಗಳಾಗಿ ಬದುಕನ್ನು ನಡೆಸಲಾರಂಭಿಸಿದರು. ಅವರ ಬದುಕಿನ ರೀತಿಯನ್ನು ಕಂಡು

ಕುಲದಲ್ಲಿ ಹೊಲೆಯನವ ಹೊಲಬಿನಲ್ಲಿ ಹೊಲೆಯಲ್ಲ  
ಹೊಲೆಯ ನೆಲೆಬಲ್ಲ ಘನ ಶರಣ. ಹರಳಯ್ಯ  
ನೆಲಸಿ ಕಲ್ಯಾಣಪುರದೊಳಗೆ  
ತನು ಮನ ಧನ ಸವೆಸಿ ಮನೆಯ ಕಾಯಕ ಮಾಡಿ  
ಅನುಭಾವಿಯಾದ ಹರಳಯ್ಯ... ಮಂಟಪಕ್ಕೆ ಮಣಿಮಾಲೆಯಾದ ಶಿವಮತಕೆ

ಎಂದು ಹರಳಯ್ಯನವರನ್ನು ಹಾಡಿ ಹರಸಿದ್ದಾರೆ ನಮ್ಮ ಶರಣರು.

ಅದೊಂದು ದಿನ ರಾಜಬೀದಿಯಲ್ಲಿ ನಡೆದು ಹೋಗುತ್ತಿದ್ದ ಬಸವಣ್ಣನವರು ತಮಗೆ ಎದುರಾಗಿ ಶರಣು ಎಂದು ಹೇಳಿದ ಹರಳಯ್ಯ ಹಾಗೂ ಅವರ ಪತ್ನಿಯನ್ನು ನೋಡಿ ಶರಣು ಶರಣಾರ್ಥಿ ಎಂದು ತಲೆ ಬಾಗಿಸಿ ಹೇಳಿದರು.ದಂಪತಿಗಳಿಗೆ ಗರ ಬಡಿದಂತಾಯಿತು..... ಮಹಾಮಹಿಮರಾದ ಬಸವಣ್ಣನವರು ತಮಗೆ ಶರಣು ಶರಣಾರ್ಥಿಯನ್ನು ಹೇಳುವುದೇ? ಎಂದು ಆ ದಂಪತಿಗಳು ಚಿಂತಿಸಿದರು ಕಳವಳದಿಂದ ಊಟ ಸೇರದೆ ನಿದ್ರೆ ಬಾರದೆ ಹೋಯಿತು.

ಕೊನೆಗೆ ತಮಗೆ ಒಂದು ಶರಣಾರ್ಥಿಯ ಹೊರೆಯನ್ನು ಹೊರಿಸಿದ ಬಸವಣ್ಣನವರ ಪಾದಗಳಿಗೆ ತಮ್ಮದೇ ತೊಡೆಯ ಚರ್ಮದಿಂದ ಚಪ್ಪಲಿಯನ್ನು ಮಾಡಿಕೊಡಲು ದಂಪತಿಗಳು ನಿರ್ಧರಿಸಿದರು.

ಅಂತೆಯೇ ಮುಂದಿನ ಕೆಲವೇ ದಿನಗಳಲ್ಲಿ ತಮ್ಮಿಬ್ಬರ ತೊಡೆಯ ಚರ್ಮವನ್ನು ತೆಗೆದು ಪಾದ ರಕ್ಷೆಗಳನ್ನು ಮಾಡಿ ಒಂದು ಬಿದಿರಿನ ಬುಟ್ಟಿಯಲ್ಲಿ ಇಟ್ಟುಕೊಂಡು ಬಸವಣ್ಣನವರ ಮನೆಗೆ ದಂಪತಿಗಳು ತಂದರು.

ದಂಪತಿಗಳ ನಡಿಗೆಯಲ್ಲಿನ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಗುರುತಿಸಿದ ಬಸವಣ್ಣನವರು ಈ ಕುರಿತು ಪ್ರಶ್ನಿಸಿದಾಗ ತಮಗೆ ಒಂದು ಶರಣಾರ್ಥಿಯ ಹೊರೆಯನ್ನು ಹೊರಿಸಿದ ಬಸವಣ್ಣನವರ ಹೊರೆಯನ್ನು ಇಳಿಸಿಕೊಳ್ಳಲು ತಾವು ತಮ್ಮ ಇಬ್ಬರು ತೊಡೆಯ ಚರ್ಮದಿಂದ ಆವುಗೆಗಳನ್ನು ಮಾಡಿ ತಂದಿರುವುದಾಗಿ ಹರಳಯ್ಯನವರು ಉತ್ತರಿಸಿದರು.

ಇದನ್ನು ಕೇಳಿ ತಮ್ಮ ಎರಡು ಕಿವಿಗಳನ್ನು ಮುಚ್ಚಿಕೊಂಡು ಕಾಯಕದಲ್ಲಿಯೇ ಕೈಲಾಸವನ್ನು ಕಾಣುತ್ತಿರುವ ಶಿವಶರಣ ದಂಪತಿಗಳಾದ ನಿಮ್ಮ ತೊಡೆಯ ಚರ್ಮವನ್ನು ಕತ್ತರಿಸಿ ಮಾಡಿದ ಪಾದರಕ್ಷೆಗಳನ್ನು ನಾವು ಧರಿಸಬಹುದೇ? ಅಂತಹ ಮಹಾಪರಾಧ ನಮ್ಮಿಂದ ಸಾಧ್ಯವಿಲ್ಲ ಎಂದು ಆ ಎರಡು ಚಪ್ಪಲಿಗಳನ್ನು ಭಕ್ತಿ ಪೂರ್ವಕವಾಗಿ ನಮಿಸಿ ಅದನ್ನು ಅವರಿಗೆ ಮರಳಿಸಿದರು.

ಆ ಚಪ್ಪಲಿಗಳನ್ನು ಬಸವಣ್ಣನವರ ಆಶೀರ್ವಾದ ಎಂದು ಭಾವಿಸಿ ತಮ್ಮ ತಲೆಯ ಮೇಲೆ ಹೊತ್ತು ಮನೆಗೆ ತರುತ್ತಿದ್ದ ಸಮಯದಲ್ಲಿ ಅವುಗಳನ್ನು ನೋಡಿದ ಮಧುವರಸ ಮಂತ್ರಿಗಳು ಪಾದರಕ್ಷೆಗಳನ್ನು ನೋಡಿ ಏನಾಯ್ತು ಎಂದು ಕೇಳಿದರು. ಬಸವಣ್ಣನವರಿಗಾಗಿ ಮಾಡಿ ತಂದ ಪಾದರಕ್ಷೆಗಳನ್ನು ಅವರು ತೊಡಲು ನಿರಾಕರಿಸಿದರು ಎಂಬುದನ್ನು ತಿಳಿದಾಗ ತಾನು ಅವುಗಳನ್ನು ಮೆಟ್ಟಲೇಬೇಕು ಎಂಬ ಅಪೇಕ್ಷೆ ಹುಟ್ಟಿ ಹರಳಯ್ಯನವರು ಪರಿಪರಿಯಾಗಿ ಬೇಡ ಎಂದು ಬೇಡಿಕೊಂಡರೂ ಕೂಡ ಮಧುವರಸರು ಅವುಗಳನ್ನು ಮೆಟ್ಟಿದರು. ಕೂಡಲೇ ಅವರ ಮೈಯೆಲ್ಲಾ ಬೆಂಕಿ ಮೆಟ್ಟಿದಂತೆ ಉರಿ ಆರಂಭವಾಯಿತು. ಕುದಿಯುವ ಸುಣ್ಣವನ್ನು ಸುರಿದಂತೆ ಎಣ್ಣೆ ಕಾಸಿ ಕಣ್ಣೊಳಗೆ ಸುರಿದಂತೆ ಡೊಣ್ಣೆ ಮುಳ್ಳುಗಳು ನೆಟ್ಟಂತೆ ಮಧುವರಸರಿಗೆ ಭಾಸವಾಯಿತು. ಅದೆಷ್ಟೇ ಮದ್ದು ತಿಂದರೂ ನೀರು ಕುಡಿದರೂ ಮೈ ಉರಿ ಹೋಗಲೇ ಇಲ್ಲ.... ಕೊನೆಗೆ ಮನೆಗೆ ನೀರು ತಂದು ಹಾಕುವ ಮಾದೇವಿ ಹರಳಯ್ಯನವರ ಮನೆಯಲ್ಲಿ ಚಪ್ಪಲಿ ಮಾಡಲು ಚರ್ಮ ಹದ ಮಾಡಲು ನೆನೆ ಹಾಕುವ ಕುಂಡದಿಂದ ನೀರನ್ನು ಒಯ್ದು ನೀಡಲು ಅದರಿಂದ ಸ್ನಾನ ಮಾಡಿದ ವಧುವರಸದ ಮೈ ಉರಿ ಮಾಯವಾಯಿತು.

ದೇಹಕ್ಕಾದ ತೊಂದರೆಯಿಂದ ಮುಕ್ತರಾದ ಮಧುವರಸರು ಕೆಲಸದ ಮಹದೇವಿಯನ್ನು ಕರೆದು ಈ ಕುರಿತು ಕೇಳಲು ಆಕೆ ನಿಜವನ್ನು ಬಾಯಿಬಿಟ್ಟಳು. ತಾವು ಮಾಡಿದ ತಪ್ಪಿನ ಅರಿವಾಗಿ ಮಧುವರಸರಿಗೆ ಪಶ್ಚಾತ್ತಾಪವಾಯಿತು. ಪರಿಪೂರ್ಣವಾಗಿ ಹೃದಯ ಪರಿ ವರ್ತನೆಯಾಗಿದ್ದ ಮಧುವರಸರು ಹರಳಯ್ಯನವರಲ್ಲಿ ಕ್ಷಮೆ ಯಾಚಿಸಿದರಲ್ಲದೇ ತಾವು ಕೂಡ ಶರಣ ಧರ್ಮವನ್ನು ಸ್ವೀಕರಿಸಿದರು.

ಮುಂದೆ ಮಧುವರಸ ಮಂತ್ರಿಗಳು ತಮ್ಮ ಮಗಳು ಲಾವಣ್ಯವತಿಯನ್ನು ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ಮದುವೆ ಮಾಡಲು ಇಚ್ಛೈಸಿದರು ಇದಕ್ಕೆ ಹರಳಯ್ಯನವರು ಒಪ್ಪಿಗೆಯನ್ನಿತ್ತರು... ಈ ವರ್ಣಸಂಕರ ವಿವಾಹವು ಶರಣ ಧರ್ಮವನ್ನು ಇನ್ನಿಲ್ಲದಂತೆ ಎತ್ತಿ ಹಿಡಿಯುತ್ತದೆ ಎಂಬ ಆಶಯದಿಂದ ಲಾವಣ್ಯವತಿ ಹಾಗೂ ಶೀಲವಂತರ ವಿವಾಹಕ್ಕೆ ಮಾಡಲಾಯಿತು.

ಆದರೆ ಇದೇ ವಿವಾಹವು ಅನಿರೀಕ್ಷಿತ ಘಟನೆಗಳು ಹಾಗೂ ಕಲ್ಯಾಣದ ಕ್ರಾಂತಿಗೆ ಕಾರಣವಾಗಿ ಬಿಜ್ಜಳ ಮಹಾರಾಜನ ವಧೆಯಾಯಿತು. ಬಿಜ್ಜಳ ಮಹಾರಾಜನ ಮಗಳು ಸೋವಿದೇವ ವರ್ಣಸಂಕರ ವಿವಾಹಕ್ಕೆ ಕಾರಣವಾದ ಹರಳಯ್ಯ ಹಾಗೂ ಮಧುವರಸರನ್ನು ಎಳೆಹೂಟೆ ಶಿಕ್ಷೆಗೆ ಗುರಿಪಡಿಸಿದನು. ಸಮ ಸಮಾಜದ ಕನಸು ಕಂಡ ಶರಣ ಬಂಧುಗಳ ಬಲಿ ದಾನವಾಯಿತು.

**ಶರಣ ತತ್ವಕ್ಕಾಗಿ ಜೀವತೆತ್ತ ಧೀರತೆಯ ದೃವತಾರೆ ಹುತಾತ್ಮ ಹರಳಯ್ಯನವರಿಗೆ ಶರಣು ಶರಣಾರ್ಥಿ**

# ಧರ್ಮಸ್ಥಾಪಕ ರಾಷ್ಟ್ರಗುರು ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು

## ದಾಸ ನವಮಿ



| ಗೌತಮಾಯನ

ಶ್ರೀ ಸಮರ್ಥ ರಾಮದಾಸರೆಂದರೆ, ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಗುರುಗಳಾಗಿದ್ದಾರೆ. ಧರ್ಮಸ್ಥಾಪನೆಗೆ ವೀರಮಾರುತಿಯ ಅಂಶದಿಂದಲೇ ಇವರ ಜನನವಾಯಿತು ಎಂಬುದು "ರಾಮದಾಸಃ ಕಲೌಯುಗೇ" ಎಂಬ ಭವಿಷ್ಯತ್ ಪುರಾಣ ಮುಂತಾದ ಪ್ರಮಾಣಗಳಿಂದ ಸಿದ್ಧವಾಗಿದೆ. ಮೂರ್ತಿಭಂಜಕರೂ , ಕ್ರೂರಿಗಳೂ, ಪರಧರ್ಮಪೀಡಕರೂ ಆದ ಯವನರ ದಬ್ಬಾಳಿಕೆ ಮೇರೆ ಮೀರಿದಂತಹ ಸಮಯದಲ್ಲಿ, ಹಿಂದೂ ಸಾಮ್ರಾಜ್ಯ ಸ್ಥಾಪನೆಗೆ ಶಿವಾಜಿ ಮಹಾರಾಜರಿಗೆ ಶಕ್ತಿ ನೀಡಿ, ಸ್ವರಾಜ್ಯ ಸ್ಥಾಪನೆ ಮಾಡಿಸಿದ ಮಹಾತ್ಮರಿವರು.


ಭಾಗ್ಯವಂತರಾದ ಇವರ ತಂದೆತಾಯಿಗಳ ನಾಮವು ಶ್ರೀ ಸೂರ್ಯಾಜಿಪಂತ ಹಾಗೂ ಸೌ.ರಾಣುಬಾಯಿ ಎಂದಾಗಿತ್ತು. ಆಶ್ವಲಾಯನ ಸೂತ್ರದ ಋಗ್ವೇದೀ ಬ್ರಾಹ್ಮಣರ " ಠೋಸರ " ಎಂಬ ಕುಲದಲ್ಲಿ ಶಕೆ. 1608 ರಲ್ಲಿ , ರಾಮನವಮಿಯ ಶುಭದಿನವೇ , ಶ್ರೀಕ್ಷೇತ್ರ ಜಾಂಬದಲ್ಲಿ ಇವರ ಅವತಾರವಾಯಿತು. ಬಾಲ್ಯದಿಂದಲೂ ಮಹಾವಿರಕ್ತರಾದ ಇವರು ಮದುವೆಯ ಪ್ರಸ್ತಾಪ ಬಂದಾಗೆಲ್ಲ ತಪ್ಪಿಸಿಕೊಂಡು ಓಡುತ್ತಿದ್ದರು. ಇವರಿಗೆ ಲಗ್ನಮಾಡಬೇಕು ಎಂಬ ಆಸೆಯಿಂದ ತಾಯಿಯು " ಲಗ್ನಮಂಟಪದಲ್ಲಿ ತೆರೆ ಹಿಡಿಯುವವರೆಗೆ ನೀನು ನನ್ನ ಮಾತು ಕೇಳಬೇಕು " ಎಂಬುದಾಗಿ ಮಾತು ತೆಗೆದುಕೊಂಡಿದ್ದಳು. ಅದರಂತೆ ಹನ್ನೆರಡನೆಯ ವ್ಯಯಸ್ಸಿದಲ್ಲಿ ಲಗ್ನನಿಶ್ಚಯವಾಯಿತು. ಆದರೆ ತಾಯಿಗೆ ಕೊಟ್ಟ ಮಾತಿನಂತೆ ಲಗ್ನ ಮಂಟಪದ ತೆರೆಹಿಡಿಯುವವರೆಗೆ ನಿಂತ ಸಮರ್ಥರು, ತೆರೆ ಕೆಳಗಿಳಿಸುವುದರ ಒಳಗೆ ಅಲ್ಲಿಂದ ಓಡಿನಡೆದರು. ನಂತರ ಹನ್ನೆರಡು ವರ್ಷ ಉಗ್ರತಪಸ್ಸು ಮಾಡಿ ಪ್ರಭು ರಾಮಚಂದ್ರನ ಕೃಪೆಗೆ ಪಾತ್ರರಾದರು. ನಂತರದ ಹನ್ನೆರಡು ವರ್ಷಗಳ ಕಾಲ ಎಲ್ಲಾ ತೀರ್ಥಕ್ಷೇತ್ರಗಳನ್ನೂ ಕಾಲುನಡಿಗೆಯಿಂದಲೇ ದರ್ಶನಮಾಡಿ ಅಪಾರ ಶಿಷ್ಯಶಾಖೆಯನ್ನು ಬೆಳೆಸಿದರು. ಲೋಕಜಾಗೃತಿ, ಗ್ರಂಥರಚನೆಯನ್ನು ಮಾಡುತ್ತಾ , ಧರ್ಮಕಾರ್ಯಕ್ಕಾಗಿ ಎಲ್ಲಾ ಸಂಪ್ರದಾಯದ ಪಂಗಡಗಳನ್ನೂ ಪ್ರೋತ್ಸಾಹಿಸಿದರು. ದಾಸಬೋಧ, ಮನೋಬೋಧ, ಮಾರುತಿ ಸ್ತೋತ್ರ, ಆತ್ಮಾರಾಮ, ಷಡ್ರಿಪು ನಿರೂಪಣ, ರಾಮಾಯಣ ಟೀಕ, ಮುಂತಾದ ಹಲವು ಗ್ರಂಥಗಳನ್ನು ರಚಿಸಿದರು. ಚಾಫಳದಲ್ಲಿ ಮಠವನ್ನು ಕಟ್ಟಿ ಅಲ್ಲಿ ನೆಲೆಸಿದರು. ತಮ್ಮ ತಪೋಬಲದಿಂದ ಶಿವಾಜಿ ಮಹಾರಾಜರ ಎಲ್ಲ ಗೆಲುವುಗಳಿಗೆ ಕೃಪೆಮಾಡಿ ಸ್ವರಾಜ್ಯವನ್ನು ದೊರಕಿಸಿಕೊಟ್ಟರು. ನಂತರ ಸಜ್ಜನಗಡದಲ್ಲಿ ವಾಸ ಮಾಡುತ್ತಾ , ಅನೇಕ ಶಿಷ್ಯರ ಸಾಮರ್ಥ್ಯವೃದ್ಧಿಗೆ ಕಾರಣರಾದರು. ಆ ಕಾಲಘಟ್ಟದಲ್ಲಿ ಸಮರ್ಥರ ಅವತಾರವಾಗದಿದ್ದಲ್ಲಿ ಧರ್ಮವೆಂಬುದೇ ಉಳಿಯುತ್ತಿರಲಿಲ್ಲ ಎಂಬುದು ಇತಿಹಾಸದ ಅವಲೋಕನದಿಂದ ಸ್ಪಷ್ಟವಾಗುತ್ತದೆ.

ಸಮರ್ಥ ರಾಮದಾಸರು 1682ರಲ್ಲಿ ಬ್ರಹ್ಮೀಭೂತರಾಗಿ, ಸಮಾಧಿಸ್ಥಿತಿಯಲ್ಲಿ ನೆಲೆಸಿರುವ ಕ್ಷೇತ್ರ ಸಜ್ಜನಗಡ. ಮಹಾರಾಷ್ಟ್ರದ ಸತಾರ ಜಿಲ್ಲಾ ಕೇಂದ್ರದಿಂದ ಕೇವಲ ಹದಿನೆಂಟು ಕಿಲೋಮೀಟರ್ ದೂರದಲ್ಲಿರುವ ಇದನ್ನು ಶಿವಾಜಿಯು ಗುರುಗಳಾದ ರಾಮದಾಸ ಸ್ವಾಮಿಗಳಿಗೆ ಅರ್ಪಿಸಿದ್ದಾರೆ. ತಪೋಭೂಮಿಯಾದ ಇದು ಸಮರ್ಥರು ದೇಹದಿಂದಿರುವವರೆಗೂ ಅವರ ಕರ್ಮಭೂಮಿಯಾಗಿದ್ದು ಲೋಕಕ್ಕೆಲ್ಲ ಒಳಿತನ್ನುಂಟುಮಾಡುವ ಕಲ್ಯಾಣ ಭೂಮಿಯಾಗಿದೆ.


ಭಗವಂತನ ಹಾಗೂ ಮಹಾತ್ಮರ ಅನುಗ್ರಹಕ್ಕೆ, ದೇಹದಂಡನೆ, ಪ್ರಾರ್ಥನೆ, ಪ್ರಯತ್ನ, ಸಾಧನೆ , ಸಿದ್ಧಿ , ಪೂರ್ವತಯಾರಿ, ದರ್ಶನ ಇತ್ಯಾದಿಗಳು ಸಹಕಾರಿ. ಸಜ್ಜನಗಡಗ ಮೆಟ್ಟಿಲುಗಳನ್ನು ಹತ್ತುವಾಗ ಇವುಗಳೆಲ್ಲವೂ ನಮಗೆ ಆದಂತೆನಿಸುತ್ತದೆ. ಎತ್ತರೆತ್ತರಕ್ಕೇರುತ್ತಾ ನಮ್ಮ ಮನದ ಚಿಂತೆ, ದುಗುಡ ದುಮ್ಮಾನಗಳು, ಕೆಟ್ಟ ಯೋಚನೆಗಳು, ಎಲ್ಲವೂ ಹಗುರಾಗುತ್ತಾ ಕಳೆಯುತ್ತಿರುವ ಭಾವನೆ ನಮ್ಮನ್ನಾವರಿಸುತ್ತದೆ. ಗಡದ ಮಹಾದ್ವಾರದ ಬಳಿ, ಸಂಪೂರ್ಣ ಗಡದ ನಕ್ಷೆಯನ್ನು ಹಾಕಿರುವುದು ಕಂಡು ಬರುತ್ತದೆ.ಶಿವಾಜಿಯ ಕಾಲದಲ್ಲಿ , ಮಹಾದ್ವಾರವನ್ನು ಹಾಕಿದ ನಂತರ ಯಾರಿಗೂ ಗಡದ ಒಳಗೆ ಪ್ರವೇಶವಿರಲಿಲ್ಲ. ಆ ದ್ವಾರವನ್ನುಳಿದು ಬೇರಾವ ದಾರಿಯೂ ಗಡಕ್ಕಿಲ್ಲ. ಹಾಗೇ ಮೇಲೆ ಬಂದರೆ ಎಡಬಾಗದಲ್ಲಿ ಸಮರ್ಥ ಸೇವಾ ಮಂಡಳದ ಕಾರ್ಯಾಲಯ ಸಿಗುತ್ತದೆ. ಅದರ ಪಕ್ಕದಲ್ಲಿಯೇ ಶ್ರೀಧರ ಕುಟಿ ಇದೆ. ನೇರವಾಗಿ ಮುಂದೆ ಸಾಗಿದರೆ ಶ್ರೀ ಸಮರ್ಥ ರಾಮದಾಸ ಮಠ ಇದೆ. ಬಲಪಕ್ಕದಲ್ಲಿ ಸಮರ್ಥರ ಸಮಾಧಿ ಮಂದಿರ, ಗುಹೆ ಇದೆ. ಮಠದಲ್ಲಿ , ಸಮರ್ಥರು ಬಳಸುತ್ತಿದ್ದ ವಸ್ತುಗಳ ಸಂಗ್ರಹಾಲಯವಿದೆ. ಅಲ್ಲಿ ಸಮರ್ಥರ ಹಾಸಿಗೆ, ಅವರ ಯೋಗದಂಡಗಳು, ಕಲ್ಯಾಣಸ್ವಾಮಿಯವರು ಗಡದ ಕೆಳಬಾಗದಿಂದ ನೀರು ತರುತ್ತಿದ್ದ ಹಂಡೆಯ ಗಾತ್ರದ ಕೊಡಗಳು, ಅಷ್ಟಲ್ಲದೇ ಸಮರ್ಥರಿಗೆ ಆಂಜನೇಯನಿಂದ ಪ್ರಸಾದಿತವಾದ ಶ್ರೀರಾಮದೇವರು ಉಟ್ಟ ವಲ್ಕಲಗಳನ್ನೂ ಕಾಣಬಹುದಾಗಿದೆ.

ರಾಜಧಾನಿ ಬೆಂಗಳೂರಿನಿಂದ ಸುಮಾರು ಏಳುನೂರ ಐವತ್ತು ಕಿಲೋಮೀಟರ್, ಎರಡನೆಯ ರಾಜಧಾನಿ ಬೆಳಗಾವಿಯಿಂದ ಸುಮಾರು ಎರಡುನೂರಾ ಐವತ್ತು ಕಿಲೋಮೀಟರ್ ದೂರವಿರುವ ಇದು ಹುಬ್ಬಳ್ಳಿಯಿಂದ ಸುಮಾರು ಮುನ್ನೂರ ನಲವತ್ತು ಕಿಲೋಮೀಟರ್ ದೂರವಿದೆ. ಸತಾರದ ವರೆಗೆ ರೈಲು ಹಾಗೂ ಬಸ್ಸಿನ ಸಂಪರ್ಕವಿದ್ದು , ಅಲ್ಲಿಂದ ಮುಂದಿನ ಹದಿನೆಂಟು ಕಿಲೊಮೀಟರ್ ದೂರವನ್ನು ಬಸ್ಸಿನಲ್ಲಿ ಅಥವಾ ಆಟೋರಿಕ್ಷಾದಲ್ಲಿ ಕ್ರಮಿಸಬಹುದಾಗಿದೆ. ಸತಾರದಿಂದ ಸಜ್ಜನಗಡಕ್ಕೆ ಪ್ರತೀ ತಾಸಿಗೊಂದು ಬಸ್ ಸಂಚರಿಸುತ್ತದೆ. ಸುಮಾರು ಎರಡು ಕಿಲೋಮೀಟರ್ ದೂರವನ್ನು ಮೆಟ್ಟಿಲುಗಳನ್ನು ಹತ್ತಿ ಕ್ರಮಿಸಬೇಕಾಗುತ್ತದೆ. ದೈಹಿಕವಾಗಿ ಅಸಮರ್ಥರಾದವರನ್ನು , ವಯೋವೃದ್ಧರನ್ನು ಗಡದ ಮೇಲೆ ಕರೆದೊಯ್ಯಲು , ನಾಲ್ಕು ಜನರು ಹೊತ್ತೊಯ್ಯುವಂತ ಡೋಲಿ ಅಥವಾ ದಂಡಿಯ ವ್ಯವಸ್ಥೆಯೂ ಇದೆ. ಸ್ವಂತ ವಾಹನ ತೆಗೆದುಕೊಂಡು ಹೋಗುವವರು ಅಲ್ಲಿಯ ವಾಹನ ನಿಲ್ದಾಣದಲ್ಲಿ ವಾಹನ ನಿಲ್ಲಿಸಿ ಹೋಗಬಹುದಾಗಿದೆ. ಜೀವನದಲ್ಲೊಮ್ಮೆ ನೋಡಲೇಬೇಕಾದ ಕ್ಷೇತ್ರ ಇದೆಂದರೂ ತಪ್ಪಾಗಲಾರದು.









# ತಾಯಿ ಗುರುವಾದಾಗ

ತಾಯಿಯೇ ಮೊದಲ ಗುರು ಮನೆಯೇ ಮೊದಲ ಪಾಠಶಾಲೆ ಎಂಬ ಮಾತು ನಾವು ಚಿಕ್ಕವಯಸ್ಸಿನಿಂದಲೂ ಕೇಳುತ್ತಾ ಬೆಳೆದವರು. ತನ್ನ ದೇಹದ ಸಂಪೂರ್ಣ ಬದಲಾವಣೆ ಜೊತೆ ಎಷ್ಟು ಇಷ್ಟ ಕಷ್ಟಗಳನ್ನ ತ್ಯಜಿಸಿ ಗರ್ಭದರಿಸಿ 9 ತಿಂಗಳು ತನ್ನ ಗರ್ಭದಲ್ಲಿ ಜೋಪಾನ ಮಾಡಿ ಪ್ರಪಂಚಕ್ಕೆ ಅರ್ಪಿಸುವ ಏಕೈಕ ಜೀವಿ ಎಂದರೆ ಅದು ತಾಯಿ , ತನ್ನ ರಕ್ತವನ್ನು ಹಾಲಾಗಿ ಮಾರ್ಪಾಡಾಗಿಸಿಕೊಂಡು ಅದಕ್ಕೆ ಮಮತೆಯನ್ನು ಬೆರೆಸಿ ಆಗತ್ತಾನೆ ಕಣ್ಣು ಬಿಟ್ಟಿರುವ ಮಗುವಿಗೆ ಹಾಲುಣಿಸಿ ಮತ್ತೊಮ್ಮೆ ಜೀವದಾನ ಮಾಡುವವಳೆ ತಾಯಿ



ತನ್ನ ಮಗು ಅಂಬೆಗಾಲು ಇಡುವುದರಿಂದ ಹಿಡಿದು ಅಲ್ಲೇ ಇರಮ್ಮ ನಾನೇ ಹೋಗಿ ಬರುತ್ತೇನೆ ಅನ್ನುವವರೆಗೂ ಪ್ರತಿಯೊಂದು ಹೆಜ್ಜೆಯಲ್ಲೂ ಬೆನ್ನ ಹಿಂದೆ ನಿಂತು ಸರಿಯಾದ ಮಾರ್ಗದ ಜೊತೆ ಕಾವಲು ಇದ್ದವಳು ಅಮ್ಮ

ಒಂದರ ಜೊತೆ ಇನ್ನೊಂದಿದ್ದರೆ ಏನಾಗಬಹುದು ಎಂದು ಹೇಳಿಕೊಡುವ ಗಣಿತ ಮೇಷ್ಟ್ರು ಇರಬಹುದು

ಹಿಂದೆ ಏನಾಗಿರಬಹುದು ಎಂಬ ಪ್ರಶ್ನೆಗೆ ಉತ್ತರಿಸುವ ಇತಿಹಾಸ ಮೇಷ್ಟ್ರು ಇರಬಹುದು

ಮುಂದೆ ಏನಾಗಬಹುದು ಎಂಬ ಆಲೋಚನೆಗೆ ಹೇಳಿಕೊಡುವ ಸಮಾಜ ಮೇಷ್ಟ್ರು ಇರಬಹುದು ಕನ್ನಡಾಂಬೆಯ ಬೆಂಬಲವಾಗಿ ನಿಲ್ಲುವ ಕನ್ನಡ ಮೇಷ್ಟ್ರು ಇರಬಹುದು ಆದರೆ

ಇಡೀ ಜೀವನಕ್ಕೆ ಅಡಿಪಾಯವನ್ನು ಹಾಕಿ ಅದರ ಮೇಲೆ ಸಂಸ್ಕಾರವೆಂಬ ಗಿಡ ನೆಟ್ಟು ಆಚಾರ ವಿಚಾರ ಏಳು ಬೀಳು ಎಂಬ ಎಷ್ಟು ವಿಚಾರಗಳ ನೀರನ್ನು ಸಸಿಯಿಂದ ಮರವಾಗುವವರೆಗೂ ನೆರವಾದವಳು ಅಮ್ಮ

ಆದರೆ ಇಂದಿನ ಆಧುನಿಕ ಯುಗದಲ್ಲಿ ತಾಯಂದಿರು ಮಕ್ಕಳಿಗೆ ನೀಡುವ ಸಂಸ್ಕಾರದಲ್ಲಿ ಕೊಂಚಮಟ್ಟಿಗೆ ಕುಗ್ಗಿದೆ . ಒಂದು ಮಗು ಪ್ರಪಂಚದ ಯಾವ ವ್ಯಕ್ತಿಯ ಮಾತಾಗಲಿ ಕಡೆಗಣಿಸಬಹುದು ಆದರೆ ಒಬ್ಬ ತಾಯಿಯ ಮಾತನ್ನು ಎಂದಿಗೂ ಪಾಲಿಸದೆ ಇರಲು ಸಾಧ್ಯವಿಲ್ಲ ಆದ್ದರಿಂದ ಪ್ರತಿಯೊಬ್ಬ ತಾಯಂದಿರು ತನ್ನ ಮಕ್ಕಳಿಗೆ ಪಾಠ ಆಟದ ಜೊತೆ ಜೀವನವನ್ನ ಸರಿದೂಗಿಸುವ ಸಹನೆ ಕಷ್ಟವನ್ನು ಎದುರಿಸುವ ಮನೋಬಲ, ಸೋಲೆ ಗೆಲುವಿನ ಸೋಪಾನ ಅನ್ನುವ ವಿಚಾರ, ಹಿರಿಯರನ್ನು ಗೌರವಿಸುವ ರೀತಿ, ತಾಳ್ಮೆ, ಸಹನೆಯಿಂದ ಎಷ್ಟು ಆಧ್ಯಾತ್ಮಿಕ ವಿಚಾರಗಳನ್ನು ದಿನದಲ್ಲಿ ಒಂದು ತಾಸಾದರೂ ಮಕ್ಕಳಿಗೆ ಹೇಳಿಕೊಡಬೇಕಾಗುವುದು ಅನಿವಾರ್ಯವಾಗಿದೆ . ಅಲ್ಲದೆ ಒಬ್ಬ ತಾಯಿಯ ಆದ್ಯ ಕರ್ತವ್ಯವೂ ಆಗಿದೆ

ತಾಯ್ತನ ಎಂಬ ಅದ್ಭುತ ಆನಂದವನ್ನು ಮಕ್ಕಳ ನಾವು ಕೊಂಚ ಜೀವನದ ಎಲ್ಲಾ ಅನುಭವಗಳನ್ನು ಆತ್ಮತೃಪ್ತಿಯಿಂದ ಅನುಭವಿಸುವ ರೀತಿಯನ್ನು ನಾವು ಹೇಳಿಕೊಡಬೇಕಾದದ್ದು ನಮ್ಮ ಕರ್ತವ್ಯವೂ ಆಗಿದೆ . ಇದು ಎಲ್ಲಾ ದೈವಸ್ವರೂಪ ತಾಯಂದಿರ ಆಶಯವಾಗಬೇಕೆಂಬುದೇ ನನ್ನ ಆಶಯ

| ಸತ್ಯಶ್ರೀ ನಾಗರಾಜು ಮಂಡ್ಯ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,